# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಕೇತಕೀ ವಿಲಾಸ

ಕವಿ

## ಜತ್ತಿ ಈಶ್ವರ ಭಾಗವತ


ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ನವೆಂಬರ್ ೧೫, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು



ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು



ರವಿ ಮಡೋಡಿ
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು

ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ

ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ

ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಚೆನ್ನ ಬಸವ ಪುರಾಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೩೯೩

**ಪಾತ್ರಗಳು:**

ದೇವೇಂದ್ರ, ಅಗ್ನಿ, ಯಮ, ತಮಾಸುರ, ವಿಷ್ಣು, ಭೃಗು ಮುನಿ, ಶುಕ್ರಾಚಾರ್ಯ, ಸತ್ಯವ್ರತ ರಾಜ, ಮತ್ಸ್ಯ, ಬೆಸ್ತರು, ಧೇನುಕಾಸುರ, ವಿದ್ರಾವಣಾಸುರ, ಈಶ್ವರ, ಪಾರ್ವತಿ, ಬ್ರಹ್ಮ, ಗರುಡ, ಹಂಸ, ಬ್ರಾಹ್ಮಣ (ಬ್ರಹ್ಮ), ಕೇತಕಿ ರಾಜ

**ಕಥಾ ಸಾರಾಂಶ:**

ದೇವಲೋಕದಲ್ಲಿ ದೇವೇಂದ್ರನ ಒಡ್ಡೋಲಗ. ಅಲ್ಲಿಗೆ ಬಂದ ಗುರು, ದೈತ್ಯಗುರು ಶುಕ್ರ ತಪಸ್ಸಿಗೆ ತೆರಳಿದ್ದು, ಅವನು ಬರುವುದರೊಳಗೆ ರಾಕ್ಷಸರನ್ನು ಸದೆಬಡಿಯಲು ಹೇಳುತ್ತಾನೆ. ಹಿರಣ್ಯಪುರದ ಅರಸ ತಮಾಸುರ, ತಮ್ಮ ಗುರು ಶುಕ್ರ ಮೃತಸಂಜೀವಿನಿಗಾಗಿ ತಪಸ್ಸಿಗೆ ತೆರಳಿದ್ದು, ಅವರು ಮರಳುವ ತನಕ ತಾವೆಲ್ಲರೂ ತಾಪಸಿಗಳಂತೆ ವೇಷ ಧರಿಸಿರೋಣವೆಂದು ಸೂಚಿಸುವುದು. ವಿಷಯ ತಿಳಿದ ದೇವೇಂದ್ರ ವಿಷ್ಣುವಿನ ಆಣತಿಯಂತೆ ಅಸುರರನ್ನು ಬೆನ್ನಟ್ಟುವುದು. ಆಗ ಅವರೆಲ್ಲಾ ಭೃಗುಮುನಿಯ ಆಶ್ರಮಕ್ಕೆ ಹೋಗಿ, ಭೃಗುಸತಿಯಾಶ್ರಯ ಪಡೆಯುತ್ತಾರೆ. ಅಲ್ಲಿಗೆ ಬಂದ ದೇವೇಂದ್ರನನ್ನು ಆಕೆ ಸ್ತಂಭನಗೊಳಿಸುತ್ತಾಳೆ. ನಂತರ ಬಂದ ವಿಷ್ಣುವು ಚಕ್ರದಿಂದ ಆಕೆಯ ಶಿರವನ್ನು ಛೇದಿಸುತ್ತಾನೆ. ಇದನ್ನರಿತ ಭೃಗುಮಹರ್ಷಿ ವಿಷ್ಣುವಿಗೆ ಶಾಪವೀಯುತ್ತಾನೆ.

ತಪಸ್ಸಿದ್ಧಿ ಹೊಂದಿದ ಶುಕ್ರ ಬಂದು ಎಲ್ಲಾ ವೃತ್ತಾಂತವರಿತು ಆಭಿಚಾರಕ್ರಿಯೆಯ ಮೂಲಕ ತಮನಿಗೆ ಬಲವೃದ್ಧಿಗೊಳಿಸುತ್ತಾನೆ. ತಮನಿಂದ ವೇದಾಪಹಾರವಾಗುತ್ತದೆ. ದೇವತೆಗಳ ದೂರಿನಂತೆ ಮಹಾವಿಷ್ಣುವು ಮತ್ಸ್ಯಾವತಾರವೆತ್ತಿ, ಸತ್ಯವ್ರತ ರಾಜನ ಕರದಲ್ಲಿ ಸಿಲುಕಿ, ಅವನ ಮೂಲಕ ಮುಂದೆ ಏಳುದಿನಗಳಲ್ಲಿ ನಡೆಯುವ ಪ್ರಳಯಕಾಲದಲ್ಲಿ ಜೀವರಾಶಿಯನ್ನು ಉಳಿಸುತ್ತಾನೆ. ತಮಾಸುರನ ವಧೆ ಮತ್ಸ್ಯನಿಂದಾಗುತ್ತದೆ.

ಮುಂದೆ ಬ್ರಹ್ಮ ಹಾಗೂ ವಿಷ್ಣುವಿನಲ್ಲಿ ತಾವೇ ಶ್ರೇಷ್ಠರು ಎಂಬ ಹಾಗೆ ವಾದ ಬೆಳೆದು ಯುದ್ಧವಾಗುತ್ತದೆ. ಜಗದ ದಿವ್ಯಶಕ್ತಿಗಳೆಲ್ಲಾ ಆ ಯುದ್ಧದಲ್ಲಿ ಭಾಗವಹಿಸುತ್ತವೆ. ಶಿವ ಬೃಹದಾಕಾರದ ಮೂಲಸ್ತಂಭ ಲಿಂಗರೂಪಿನಿಂದ ಕಾಣಿಸಿ, ಅದರ ಮೂಲ ಹಾಗೂ ಶಿರೋಭಾಗವನ್ನು ಮೊದಲು ಕಂಡು ಬಂದವರು ಶ್ರೇಷ್ಠರೆಂದು ನಿರ್ಣಯಿಸಲು, ವಿಷ್ಣುವು ವರಾಹರೂಪಿನಿಂದ ತಳಭಾಗಕ್ಕೆ ಹೋಗುತ್ತಾನೆ. ಎಷ್ಟು ಆಳಕ್ಕಿಳಿದರೂ ಮೂಲ ಸಿಗದೇ ಮರಳುತ್ತಾನೆ. ಶಿರೋಭಾಗ ಅರಸುತ್ತಾ ಹೋದ ಬ್ರಹ್ಮನಿಗೆ ಎಷ್ಟೋಕಾಲದ ನಂತರ ಮೇಲಿನಿಂದ ಕೆಳಗೆ ಬರುತ್ತಿದ್ದ ಕೇತಕೀರಾಜನ ಸಂದರ್ಶನವಾಗುತ್ತದೆ. ಆಗ ಇನ್ನೆಷ್ಟು ಕ್ರಮಿಸಬೇಕೆಂದಾಗ, ಕೇತಕಿ "ನಾನು ಶಿರದಿಂದ ಜಾರಿ ಇಲ್ಲಿಗೆ ಬರುವಾಗ ಯುಗಸಾವಿರವೇ ಕಳೆದಿದೆ" ಎನ್ನುವನು. ಆಗ ಬ್ರಹ್ಮನು ಆತನಿಗೆ ತನಗಾಗಿ ಸಾಕ್ಷಿ ನುಡಿಯಲು ಹೇಳುವನು. ಮೊದಲು ನಿರಾಕರಿಸಿದ ಕೇತಕಿ ಆ ಬಳಿಕ ಬ್ರಹ್ಮನ ಒತ್ತಾಯದ ಮೇರೆಗೆ, ಬ್ರಹ್ಮನು ಶಿರೋಭಾಗ ನೋಡಿದ ಎಂದು ಶಿವನಲ್ಲಿ ಸಾಕ್ಷಿ ಹೇಳುವನು. ಕುಪಿತನಾದ ಶಿವ ನೀನು ನನ್ನ ಪೂಜೆಗೆ ಬಾಹಿರನೆಂದೂ, ಬ್ರಹ್ಮನಿಗೆ ಲೋಕದಲ್ಲಿ ಪೂಜೆಯಿಲ್ಲದಾಗಲಿ ಎಂದು ಶಪಿಸಿ, ಹರಿಯೇ ಶ್ರೇಷ್ಠನೆಂದು ಸಾರುವ ಕಥಾನಕ.

**ಕವಿ ಪರಿಚಯ: (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ)**

ಗ್ರಂಥ ಕರ್ತೃಗಳಾದ ಶ್ರೀ ಜತ್ತಿ ಈಶ್ವರ ಭಾಗವತರು ಕ್ರಿ.ಶ. ೧೮೭೨ನೆಯ ಇಸವಿ ಅಗಸ್ಟ್ ತಿಂಗಳಲ್ಲಿ ಕಾಸರಗೋಡು ಬಾಯಾರು ಗ್ರಾಮದ ಜತ್ತಿ ಎಂಬಲ್ಲಿ ಕೃಷ್ಣ ಭಟ್ಟ ಮತ್ತು ಗೌರಮ್ಮ ಎಂಬವರ ಏಕಮಾತ್ರ ಪುತ್ರನಾಗಿ ಜನ್ಮವೆತ್ತಿದರು. ಕಾಲ: ೧೮೭೨ – ೧೯೪೫. ನಿರ್ಧನಿಕರಾದರೂ ಕಲಾಪ್ರೇಮಿಗಳಾದ ಆ ತಂದೆ ತಾಯಿಯವರಿಂದ ಪೋಷಿತರಾಗಿ ವಿದ್ಯಾಭ್ಯಾಸ ಪಡೆದು ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ವರಾಹ ಚರಿತ್ರೆ ಎಂಬ ಯಕ್ಷಗಾನ ಗ್ರಂಥವನ್ನು ರಚಿಸಿದರು. ಮುಂದೆ ಜೀವನ ನಿರ್ವಹಣೆಗಾಗಿ ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ಸರ್ವೇ ಉದ್ಯೋಗಕ್ಕೆ ಸೇರಿ, ಆಮೇಲೆ ಇಪ್ಪತ್ತೈದನೆಯ ವಯಸ್ಸಿನಲ್ಲಿ ಮಂಡಕೋಲು ಗ್ರಾಮದ ಶ್ಯಾನುಭೋಗರಾಗಿ ಕೆಲಸ ಮಾಡಿದರು. ಅದೇ ವರ್ಷ ಸರಸ್ವತಿ ಎಂಬವರೊಡನೆ ವಿವಾಹವಾದರು.

ಯಕ್ಷಗಾನ ಕೃತಿರಚನೆಯಲ್ಲಿಯೂ ಭಾಗವತಿಕೆಯಲ್ಲಿಯೂ ವಿಶೇಷ ಅಭಿರುಚಿಯಿದ್ದ ಕಾರಣ ೧೯೦೨ರಲ್ಲಿ ಶ್ಯಾನುಭಾಗ ಉದ್ಯೋಗವನ್ನು ಬಿಟ್ಟು ಯಕ್ಷಗಾನ ಮೇಳಗಳಲ್ಲಿ ಭಾಗವತರಾಗಿಯೂ, ಗ್ರಂಥಕರ್ತರಾಗಿಯೂ, ಹರಿಕಥಾ ವೃತ್ತಿಯಲ್ಲೂ ತನ್ನ ಶೇಷಾಯುಷ್ಯವನ್ನು ಕಳೆದರು. ಆಗ ಪ್ರಸಿದ್ಧ ಮೇಳಗಳಾಗಿದ್ದ ಇಚ್ಲಂಪಾಡಿ, ಕೂಡ್ಲು, ಕಟೀಲು, ದೆಕ್ಕೆತೋಡಿ ಇಂತಹ ಮೇಳಗಳಲ್ಲಿ ಭಾಗವತಿಕೆ ವೃತ್ತಿಯನ್ನು ನೆರವೇರಿಸುತ್ತಿದ್ದು, ತನ್ಮಧ್ಯೆ, ಮಕರಾಕ್ಷನ ಕಾಳಗ, ಸಂಪೂರ್ಣ ರಾಮಾಯಣ, ಕೇತಕೀವಿಲಾಸ, ನಂದನೀ ವಿಲಾಸ, ಅಂಜನಾವಿಲಾಸ, ಮದನಮಂಜರೀ ಕಲ್ಯಾಣ, ಸತಿ ಸುಲೋಚನ, ಸೂರ್ಯ ಕಾಂತಿಕಲ್ಯಾಣಗಳೆಂಬ ಯಕ್ಷಗಾನ ಪ್ರಸಂಗಗಳನ್ನೂ ಧರ್ಮಪಾಲ ಚರಿತ್ರೆ, ತಾರಾ ವಿಲಾಸ, ಚಂಡಕಿರಾತ, ಗಜೇಂದ್ರಮೋಕ್ಷ, ಪಾರಿಜಾತ, ಕೀರ್ತನಾತರಂಗ, ತುಳು ಕೀರ್ತನಾಮಾಲೆ ಎಂಬಿತ್ಯಾದಿ ಹಲವಾರು ಹರಿಕಥೋಪಯೋಗಿ ಗ್ರಂಥಗಳನ್ನೂ ಬರೆದರು. ಇವುಗಳಲ್ಲಿ ಕೆಲವು ಅವರ ಜೀವಮಾನ ಕಾಲದಲ್ಲಿ, ಎಂದರೆ ಕ್ರಿ.ಶ. ೧೯೩೮ನೇ ಇಸವಿಯಲ್ಲಿಯೇ ಮುದ್ರಿತವಾಗಿ ಜನಪ್ರಿಯವಾಗಿವೆ. ಇನ್ನೆಷ್ಟೋ ಗ್ರಂಥಗಳು ಮುದ್ರಣವಾಗಲು ಬಾಕಿಯುಳಿದಿವೆಯಂತೆ. ಕ್ರಿ.ಶ.೧೯೪೫ನೇ ಇಸವಿ ಜೂನ್ ತಿಂಗಳ ೩೦ರಂದು ಅವರು ಇಹಲೋಕವನ್ನು ತ್ಯಜಿಸಿದರು.

ಜತ್ತಿ ಈಶ್ವರ ಭಾಗವತರು ಕಳೆದ ಶತಮಾನದ ಕೊನೆಗೆ ಮತ್ತು ಈ ಶತಮಾನದ ಪೂರ್ವಾರ್ಧದಲ್ಲಿ ತೆಂಕುತಿಟ್ಟಿನ ಪ್ರಸಿದ್ಧ ಭಾಗವತರಾಗಿದ್ದರು; ಭಾಗವತರಾಗಿಯೂ ವಿಶಿಷ್ಟ ವ್ಯಕ್ತಿಯಾದವರು. ಏಕೆಂದರೆ ಭಾಗವತಿಕೆ ಮಾತ್ರವಲ್ಲದೆ ಪ್ರಸಂಗರಚನೆ ಮತ್ತು ಹರಿಕಥೆ ಈ ಕ್ಷೇತ್ರಗಳಲ್ಲೂ ಸಾಧನೆ ಮಾಡಿದರು. ಜತ್ತಿ ಭಾಗವತರ ಬಾಲ್ಯದಲ್ಲಿ ಬಾಯಾರು ಪರಿಸರದ ಐಗಳ ಮಠಕ್ಕೆ ಪಣಂಬೂರಿನ ನಾರ್ಣಪ್ಪ ಎಂಬುವರು ಉಪಾಧ್ಯಾಯರಾಗಿ ಬಂದರೆಂದೂ ಅವರು ಕವಿಗಳೂ ಹರಿದಾಸರೂ ಆಗಿದ್ದುದರಿಂದ ಇವರು ಅವರಿಂದಲೇ ಪ್ರೇರಣೆ ಪಡೆದು ಕವಿತಾರಚನೆ ಮತ್ತು ಹರಿಕಥೆಗೆ ತೊಡಗಿದರೆಂದೂ ತಿಳಿದುಬರುತ್ತದೆ. ತೊರವೆ ರಾಮಾಯಣ, ಗದುಗಿನ ಭಾರತ, ಜೈಮಿನಿ ಭಾರತ, ಕನ್ನಡ ಭಾಗವತ ಮುಂತಾದುವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದ ಜತ್ತಿ ಭಾಗವತರು ಯಕ್ಷಗಾನ ಭಾಗವತರಿಗೆ ಅಪೂರ್ವವೆಂಬಂತೆ ಹಳಗನ್ನಡ ಕಾವ್ಯಗಳನ್ನು ಅಭ್ಯಾಸ ಮಾಡಿದ್ದರು. ಮುಖ್ಯವಾಗಿ ಕರ್ಣಾಟಕ ಕಾದಂಬರಿ, ಜಗನ್ನಾಥ ವಿಜಯ, ಶಬರ ಶಂಕರ ವಿಲಾಸ – ಮೊದಲಾದ ಕೃತಿಗಳು ಅವರಿಗೆ ಪ್ರಿಯವಾಗಿದ್ದವು.

ಹರಿಕಥೋಪಯೋಗಿಯಾದ ಕೀರ್ತನ ಗ್ರಂಥಗಳನ್ನು ಬರೆದು ಪ್ರಕಟಿಸಿದ ಮೊದಲಿಗರಲ್ಲಿ ಜತ್ತಿ ಭಾಗವತರೊಬ್ಬರೆಂದು ಉಲ್ಲೇಖಿಸಲೇ ಬೇಕು. ಅವರ ಹರಿಕಥಾ ಸಾಹಿತ್ಯವು ಯಕ್ಷಗಾನದ ಮಾದರಿಯಲ್ಲೇ ಇದೆ. ಅವರ ಗುರುಗಳ ಹರಿಕಥಾ ಮಾರ್ಗವೂ ಹೀಗೆಯೇ ಇತ್ತೆಂದು ತಿಳಿಯುತ್ತದೆ. ಭಾವತಾಳಗಳಿಗನುಗುಣವಾಗಿ ಕುಣಿದು ಹರಿಕಥೆ ಮಾಡುತ್ತಿದ್ದ ಪದ್ಧತಿ ಜತ್ತಿಯವರದೆಂದೂ ತಿಳಿದು ಬರುತ್ತದೆ. ಆಶುಕವಿಗಳಾಗಿದ್ದು ಸಂದರ್ಭಕ್ಕೆ ಬೇಕಾದ ಪದ್ಯಗಳನ್ನು ಅಲ್ಲಲ್ಲೇ ಕಟ್ಟಿ ಹಾಡುತ್ತಿದ್ದರಂತೆ. ಯಕ್ಷಗಾನದಲ್ಲೂ ಹರಿಕಥೆಯಲ್ಲೂ ಈ ರೀತಿ ಆಶುಪದ್ಯ ರಚನೆ ಮಾಡುತ್ತಿದ್ದರು. ಎಂದೂ ಪುಸ್ತಕ ನೋಡಿ ಭಾಗವತಿಕೆ ಮಾಡುತ್ತಿರಲಿಲ್ಲ ಮತ್ತು ಆ ಕಾಲದಲ್ಲಿ ಹಿಮ್ಮೇಳದವರು ನಿಂತುಕೊಂಡೇ ಭಾಗವತಿಕೆ ಮಾಡುವ ಪದ್ಧತಿಯಿದ್ದುದರಿಂದ ಪುಸ್ತಕ ನೋಡಿಕೊಂಡು ಕಂಠಪಾಠವಿಲ್ಲದ ಪ್ರಸಂಗಗಳನ್ನು ಆಟವಾಡಿಸುವ ಸಾಧ್ಯತೆಗಳಿದ್ದಿಲ್ಲ. ಆಟದಲ್ಲಿಯೂ ಮೊದಲಿಗೆ ಕಥಾಸಾರ ವಿವರವನ್ನು ಜತ್ತಿ ಭಾಗವತರು ಮಾಡುತ್ತಿದ್ದರಂತೆ.

ಜತ್ತಿ ಭಾಗವತರು ತೆಂಕುತಿಟ್ಟಿನ ಖ್ಯಾತ ಭಾಗವತರಾದ ಬಲಿಪ ನಾರಾಯಣ ಭಾಗವತರಿಗಿಂತ ಹಿರಿಯರು. ಜತ್ತಿ ಭಾಗವತರಿಂದಲೇ ಬಲಿಪರು ಪ್ರಸಂಗ ರಚನೆಗೆ ಉತ್ತೇಜನ ಪಡೆದವರೆಂದೂ ಹೇಳಲಾಗಿದೆ. ಜತ್ತಿ ಭಾಗವತರು ಹೊಸ ಕಾಲದಲ್ಲಿ ತುಳು ಕೀರ್ತನೆಗಳನ್ನು ರಚಿಸಿದವರಲ್ಲಿ ಬಹುಶಃ ಮೊದಲಿಗರು. ತುಳು ಕೀರ್ತನಮಾಲೆ ಸಹಿತ ಎಂಟು ಹರಿಕಥಾ ಸಾಹಿತ್ಯ ಕೃತಿಗಳನ್ನೂ ೧೩ ಯಕ್ಷಗಾನ ಕೃತಿಗಳನ್ನು ಜತ್ತಿ ಭಾಗವತರು ಬರೆದಿರುವುದನ್ನು ಶ್ರೀ ಸುಬ್ಬಣ್ಣ ರೈ ಅವರು ಗುರುತಿಸಿ ಪಟ್ಟಿ ಮಾಡಿದ್ದಾರೆ. ಅವರು ಕುಶಲವರ ಕಾಳಗವನ್ನೂ ಬರೆದಿರುವುದಾಗಿಯೂ ಈ ಪ್ರಸಂಗವನ್ನು ತಾನು ನೋಡಿರುವದಾಗಿಯೂ ಪ್ರೊ. ಟಿ. ಕೇಶವ ಭಟ್ಟರು ತಿಳಿಸಿರುತ್ತಾರೆ. ಅವರ ಎಷ್ಟೋ ಕೃತಿಗಳು ಅನುಪಲಬ್ಧವಾಗಿವೆ.

ಜತ್ತಿ ಈಶ್ವರ ಭಾಗವತರ ಸಮಕಾಲೀನರಾದ ಇನ್ನೊಬ್ಬ ಯಕ್ಷಗಾನ ಕವಿ, ಕವಿಭಟ್ಟರೆಂದೇ ಪ್ರಸಿದ್ಧರಾಗಿದ್ದ ಕನ್ಯಾನ ವೆಂಕಟರಮಣ ಭಟ್ಟರು. ಇವರು ಜತ್ತಿ ಭಾಗವತರಿಗಿಂತ ಸ್ವಲ್ಪ ಕಿರಿಯರು. ಇವರಿಬ್ಬರೂ ಆಶುಕವಿಗಳಾದುದರಿಂದ ಆನೆಕಲ್ಲಿನಲ್ಲಿ ನಾರಾಯಣ ಭಟ್ಟರೆಂಬುವರ ಮನೆಯಲ್ಲಿ ಇವರಿಬ್ಬರ ನಡುವೆ ಒಂದು ಬಂಡಿ ಪದ ಸ್ಪರ್ಧೆ ಏರ್ಪಟ್ಟಿತ್ತಂತೆ. ಒಬ್ಬರು ನಿಲ್ಲಿಸಿದ ಅಕ್ಷರದಿಂದ ತೊಡಗಿ ಇನ್ನೊಬ್ಬರು ಆಶು ಪದ್ಯಕಟ್ಟಿ ಹಾಡಬೇಕಾಗಿತ್ತು. ಕೇಳಲು ಆ ಕಾಲದ ಹಲವು ಮಂದಿ ಯಕ್ಷಗಾನ ರಸಿಕರು ಸೇರಿದ್ದರಂತೆ. ರಾತ್ರಿ ಕಳೆದು ಬೆಳಗಾದರೂ ಸ್ಪರ್ಧೆ ಮುಗಿಯಲಿಲ್ಲವಂತೆ. ಇಬ್ಬರೂ ಪದ್ಯರಚನೆಯಲ್ಲಿ ಬಹು ಸಮರ್ಥರೆಂದು ಕೊಂಡಾಡಲ್ಪಟ್ಟರಂತೆ. ಈ ಘಟನೆ ಆ ಕಾಲದವರ ಆಸಕ್ತಿಯನ್ನೂ ಆಶುಕವಿತ್ವ ಸಾಮರ್ಥ್ಯವನ್ನು ಸ್ಫುಟಗೊಳಿಸುತ್ತದೆ.

ಇವರು ಬರೆದ ಪ್ರಸಂಗಗಳು: ಅಜಮಿಳೋಪಾಖ್ಯಾನ, ಅಂಜನಾ ವಿಲಾಸ, ಇಸ್ಪೀಟಾಟ, ಕುಶಲವರ ಕಾಳಗ, ಕೇತಕೀ ವಿಲಾಸ, ಗಜೇಂದ್ರ ಮೋಕ್ಷ, ಚಂಡಕಿರಾತ, ಚಂದ್ರಕಾಂತಿ ಕಲ್ಯಾಣ, ತಾರಾವಿಲಾಸಂ, ಧರ್ಮಪಾಲ ಚರಿತ್ರೆ, ನಂದಿನೀ ವಿಲಾಸ, ಪಾರಿಜಾತ, ಮಕರಾಕ್ಷ ಕಾಳಗ, ಮತ್ಸ್ಯಾವತಾರ, ಮದನಮಂಜರೀ ಕಲ್ಯಾಣ, ಮಾಯಾವಿಲಾಸಂ, ರೇವತೀ ವಿಲಾಸ, ವರಾಹ ಚರಿತ್ರೆ, ಸತಿ ಸುಲೋಚನಾ, ಸಂಪೂರ್ಣ ರಾಮಾಯಣ, ಸುಕನ್ಯಾ ಪರಿಣಯ, ಸುಂದೋಪಸುಂದರ ಕಾಳಗ, ಸುಲೋಚನ ಕಾಳಗ, ಸೂರ್ಯಕಾಂತಿ ಕಲ್ಯಾಣ

**ಟಿಪ್ಪಣಿ:**

# ಪ್ರಸಂಗ ಸಾಹಿತ್ಯ

**ಶಾರ್ದೂಲ ವಿಕ್ರೀಡಿತ ವೃತ್ತ**
ಶ್ರೀ ಕಂಠಂ ಕಮನೀಯ ಮೂರ್ತಿ ವಿಭವಂ ಹೈಮಾದ್ರಿಕನ್ಯಾಧವಂ |
ಶ್ರೀಕಾಂತಾದಿ ಸುರೌಘ ಸನ್ನುತಪದಂ ಲೋಕಾನುಲೋಕಾಸ್ಪದಂ ||
ರಾಕೇಂದ್ವಗ್ನಿ ದಿನೇಂದ್ರ ಲೋಚನತ್ರಯಂ ಚಕ್ರೀಂದ್ರ ಭೂಪಂ ಶ್ರಿಯಂ |
ಮಾಕಾಮಾಂಗ ವಿಭಂಗ ತುಂಗ ತುರಗಂ ಗಂಗಾಧರಂ ಭಾವಯೇ || ೧ || 1 ||

**ನಾಟಿ - ರೂಪಕ**
ಶ್ರೀ ರಮಣಾದಿ ಬೃಂದಾರಕ | ವಾರಿ ಕಿರೀಟ ಮಣಿಪ್ರಭ |
ರಾರಾಜಿತ ಕಮಲದ್ವಯ | ಹೇರಂಬಾ ಮಾಂ ಪಾಹಿ || ಜಯ || ಪ ||
ಇಂಗಡಲಣುಗಿ ಮುಖಾಬ್ಜಪ | ತಂಗ ಸುತಲ್ಪ ಭುಜಂಗ ವಿ |
ಹಂಗವರೂಥ ಖಳಾನ್ವಯ | ಭಂಗಾ ನರಸಿಂಗ ||
ಲಿಂಗಜ ಬಾಂಬೊಳೆ ಬಿದಿಯ ವೆ | ತ್ತಂಗ ಮೇಘಾಂಗ ತಪೋಧನ |
ಸಂಗ ಕೃಪಾಂಗ ರಥಾಂಗ ಕ | ರಾಂಗಾ ಪೊರೆ ರಂಗ || ಜಯ || || ೧ ||

ಪೆರೆ ನೊಸಲಾರ್ಯಮುಯರ್ಮೊಗ | ಮರುತಜ ಮರುತಜ ವಾಸೆಯ |
ಸಿರಿಯನಮರ್ದಣಿ ಪರರಂ | ಶರಣಾಗುತ ಕಡೆಗೆ ||
ಪಿರಿಯ ಕವೀಂದ್ರರ ಪಿರಿಯರ | ಚರಣಾಂಭೋರುಹ ಮಧುಕರ |
ನೆರೆಯೆನಗಾಯುರಾರೋಗ್ಯ ಸ | ಸ್ಸಿರಿಯುತ್ತುರೆಕಾಗೆ ಜಯ || ೨ || 3 ||

**ವಾರ್ಧಕ**
ಶ್ರೀಗಿರಿಜೆಯಾಸ್ಯ ಕಮಲದ ಸೊಂಪು ಪೊಳೆಯೆ ಪಿರಿ |
ದಾಗಿ ಕುಚ ಚಕ್ರಯುಗಳದ ಪೆಂಪು ಬೆಳೆಯೆ ತಲೆ |
ವಾಗಿ ಕಣ್ಣೈದಿಲಲರಿಕೆಯಿಂಪು ಕಳೆಯೆ ನಾಸಾನಿಲದ ಕಂಪು ಸುಳಿಯೆ ||
ಬೀಗೆ ಕುಂತಳತಮಂ ಸಾಗೆ ಚೆಂದುಟಿಗೆಂಪು |
ಮೇಗೆ ಸೌಖ್ಯೋದಯದ ಬೆಳಗ ಪಸರಿಸಿ ನಿತ್ಯ |
ನಾಗೆಸೆವ ಶ್ರೀ ವಿಶ್ವನಾಯಕಂ ಸೂರ್ಯನಾನಂದಮಂ ನಮಗೀಯಲಿ || ೧ || 4 ||

**ಭಾಮಿನಿ**
ಹೆಂಡತಿಯ ಲೀಲಾಕುಮಾರನ |
ಖಂಡಿಸಿದ ಪಟುಭಟನ ಭಾವನ |
ಹೆಂಡತಿಯ ಸೋದರನ ತಂದೆಯ ತಾಯ್ಗೆ ಕುಂಬಿಟ್ಟು ||
ಚಂಡಮತಿಯಂ ಪಡೆದು ಕವಿ ಹೃ |
ತ್ಪುಂಡರೀಕ ವಿಕರ್ತವಾಲ್ಮೀಕ |
ಗಂಡ ಮುನಿಗೆರಗೀ ಪ್ರಬಂಧವ ಪೇಳ್ವೆನಿಂಬಿಟ್ಟು || ೧ || 5 ||

**ದ್ವಿಪದಿ**
ಸಿರಿ ರಾಮಚಂದ್ರ ಕುಲದೇವರಡಿನುತರ |
ಸ್ಮರಿಪೆ ಗುರು ರಾಘವೇಶ್ವರ ಭಾರತಿಯರ || ೧ || 6 ||

**ವಾರ್ಧಕ**
ಇನ್ನೊರೆವೆ ಲಾಲಿಸಾದೊಡೆ ಸಿದ್ಧರಾಮ ಕೇಳ್ |
ಬಾನ್ನವಿರ ಮುಖ್ಯ ದಿಗ್ನಿಗರಿಂದಲೊಡಗೂಡಿ |
ಸೊನ್ನಾಸನದೊಳೋಲಗಂಗೊಟ್ಟನೊಂದು ದಿನ ಹರಿ ಸುರಘೇಯೆನ್ನಲು ||
ಕಿನ್ನರ ಭುಜಂಗ ಕಿಂಪುರುಷ ಚಾರಣ ಸಿದ್ಧ |
ಮನ್ನೆಯರ ಕೈವಾರ ತುಂಬುರರ ಧನಿಸಾರ |
ಮುನ್ನಲಿವ ರಂಭಾದಿ ಕನ್ನೆಯರ ಶೃಂಗಾರ ಕಣ್ಗೆಸೆದುದಾ ಸಭೆಯೊಳು || ೧ || 7 ||

**ಭೈರವಿ - ಝಂಪೆ**
ಇಂತಾ ಸುಧರ್ಮೆಯೊಳು | ದಂತಿರಥನಿರ್ದಮರ |
ತಿಂಥಿಣಿಯ ಮೊಗ ನೋಡು | ತಿಂತೆಂದನಾಗ || ೧ ||

ಧುರ ಸುಭಾಗ್ಯರು ಕೇಳಿ | ದುರುಳ ದಾಯಾದ್ಯ ಕ |
ರ್ಬುರರ ಕದನಾಳಾಪ | ಬಿರಿಸಾದುದಲ್ಲೈ || ೨ ||

ಏನು ಪಾಯವೊ ತಿಳಿಯೆ | ಪೂನಾಸ್ತ್ರಹರನೆನೆ ವೈ |
ಶ್ವಾನರನು ಘುಡು ಘುಡಿಸಿ | ತಾನೆಂದನವಗೆ || ೩ || 10 ||

**ಮಾರವಿ - ಏಕ**
ಅನಿಮಿಷರೊಡೆಯ ಶಾಭಾಸುರೆ ದಾನವ |
ಬಿನುಗರ ಬಗೆಗೀಸು ||
ನೆನೆಯಲ್ಲಿತ್ಕುವೆ ಸುಡುವೆನಜಾಂಡವ |
ಮುನಿದರೆ ನೀ ಗ್ರಹಿಸು || ೧ ||

ಇಂತೆನಲೆಂದ ಕೃತಾಂತನು ಕೊಳ ಮದ |
ದಂತಿಗಳುರೆ ಪೊಕ್ಕು ||
ತಾಂ ತವೆ ಕಲಕಿ ಕುಶೇಶಯವರಿವೋಲ್ |
ನಿಂತು ಗೆಲುವೆ ಸೊಕ್ಕು || ೨ ||

ಕೌಣವರರಸ ಕೇಳ್ದೆಂದ ಬಿಡೌಜ ಕೇಳ್ |
ಕೋಣಗಳಾನೆಯನು ||
ಚೂಣಿಯ ಗೆಲುವವೆ ಬಿಡು ಎನ್ನಹಿತರ |
ಗೋಣ ತರಿವೆನೆನಲು || ೩ ||

ಪಾಶದಿ ಬಿಗಿವೆನು ರಾಷರ ವರ್ಗವ |
ವಾಸುಕಿ ಮಂದರವ ||
ತಾ ಸುತ್ತಿದವೋಲಲ್ಲದಿರಲು ನಾ |
ಪಾಶಿಯೆ ಕೇಳ್ಮಘವ || ೪ ||

ಜಂಜಡವೇಕೆ ಜಂಭಾರಿ ಮೃಗಾಧಿಪ |
ಕುಂಜರ ತತಿಯನ್ನೆ ||
ಭಂಜಿಪವೋಲಾ ಗೆಲದಿರೆ ಧೂರ್ತರ |
ಜಂಜ ಮರುತ ನಹೆನೆ || ೫ || 15 ||

**ವಾರ್ಧಕ**
ರಾಜರಾಜಂ ಕೆರಳಿ ಖೇದವೇಕೈ ದಿವಿಜ |
ರಾಜ ಕೊಡು ವೀಳಯವನೀ ಯಕ್ಷ ಬಲದಿ ಖಳ |
ರಾಜರಂ ನೇರಳೆಯ ಹಣ್ಣ ಬಡಿದುರುಳಿಪೋಲಾಜಿಯಂ ಗೆಲುವೆನೆಂದ ||
ರಾಜಚೂಡಂ ನಿಂತು ತನ್ನಾಳ್ವನಂ ಪೇಳೆ |
ರಾಜಿಯಿಂದನಿಬರಂ ಖರೆಯರಹಿರೆಂದಿರಲ್ |
ರಾಜೀವಸಖನಂತೆ ತೇಜದಿಂದಾ ಜೀವ ವಾಸವನ ಸಭೆಗೆ ಬಂದ || ೧ || 16 ||

**ಕೇದಾರಗೌಳ – ಅಷ್ಟ**
ಬಂದ ಯತೀಂದ್ರನ ಕಾಣುತಲಮರೇಂದ್ರ |
ನಿಂದಿದಿರೆದ್ದು ಬಂದು ||
ವಂದಿಸಿ ಕರೆತಂದು ಕೈವಿಡಿದಿರದೆ ಮೃ |
ಗೇಂದ್ರ ಪೀಠದೊಳಗಂದು || ೧ ||

ಏರಿಸಿ ಬಲು ಭಕ್ತಿಯಿಂದ ಷೋಡಶದುಪ |
ಚಾರ ಪೂಜೆಯ ಗೈವುತ ||
ವಾರಿಜಮುಖಿಯೊಡಗೂಡಿಯಾರತಿಯೆತ್ತಿ |
ಭೂರಿ ಸಂಸ್ತುತಿ ಮಾಡುತ || ೨ ||

ನಿಂದು ಕರಾಬ್ಜವ ಜೋಡಿಸಿ ಭಳಿರೆನ್ನ |
ತಂದೆ ದಯಗೈದರಿಂದ ||
ಕುಂದಿದುತ್ಪಲವನಕಿಂದು ಮೈದೋರಿದೋ |
ಲಿಂದೆಮಗಾಯ್ತಾನಂದ || ೩ ||

ಸೂರಿಯನಿದಿರೊಳು ತಾರೆಗಳುರು ಕಾಂತಿ |
ಕೋರೈಸುವುದೆ ಶಾಭಾಸು ||
ಭಾರಿ ಯೋಚನೆಗಿನ್ನು ದಾರಿಯ ಬಲ್ಲನು |
ದಾರಿ ಮುನೀಂದ್ರ ಲೇಸು || ೪ ||

ಎನುತಭಿನಮಿಸಲೆತ್ತುತ ಪರಸುತ್ತ ಮೈ |
ಯನೆ ತಡವರಿಸಿ ಮತ್ತಾ ||
ಘನ ಸಭೆ ಬೀಳ್ಕೊಟ್ಟು ಸುರಪನೊಳೇಕಾಂತ |
ವನೆ ಕೇಳಲೇನೆನುತ || ೫ || 21 ||

**ಬೇಗಡೆ – ಅಷ್ಟ**

ವಂದನಂ ಗುಣ ಸಾಂದ್ರ ಯೋಗೀಂದ್ರ | ಚಿತ್ತಾವಧಾನಘ |
ವೃಂದ ನೀರದ ಗಂಧವಹ ಇಂದ್ರ ||
ನೆಂದು ಪೆಸರೆನಗಿಂದುವರೆಗಿ |
ನ್ನೊಂದಿಗಾದರು ಹೊಂದದಂದದ |
ಕುಂದು ಬಂದುದು ತಂದೆ ಮುನಿಯೇ |
ನೆಂದು ಪೇಳುವೆನಿಂದು ನಿನ್ನೊಳು || ವಂದನಂ || ೧ ||

ಖುಲ್ಲ ರಕ್ಕಸರೆಲ್ಲ ನಮ್ಮನ್ನು | ಯುದ್ಧಾಂಗಣದಿ ಬಲ |
ದಲ್ಲಿ ಗೆಲ್ವುದ ಬಲ್ಲೆಯೈ ನೀನು ||
ಸಲ್ಲದಘಟಿತ ಖುಲ್ಲರೊಳು ಜಯ |
ವೆಲ್ಲಿ ನಮಗಿಂದೆಲ್ಲ ಸುಮನಸ |
ಜಲ್ಲಿಗಳು ತವೆ ಹಲ್ಲ ಕಿರಿದರು |
ಬಲ್ಲಡರುಹಿದಕೆಲ್ಲ ಪಾಯವ || ವಂದನಂ || ೨ || 23 ||

**ಖಮಾಚು - ಏಕ**

ಭಲಾ ಭಳಿರೆ ಬಲ್ ಕಲಾ ಪ್ರೌಢ ಸುರ |
ಬಲಾ ಮಹಾರ್ಣವ ಚಂದ್ರಾ |
ಖಲಾ ಭಟರ ಉರಸಲಾ ಕುಠಾರಕ |
ನಲಾ ನೀ ಕೇಳಮರೇಂದ್ರ ||
ಹುಲುಗಳ ಸೀಳಲು ಕುಲಿಶದ ಗರಗಸ |
ಬಲವೇಕಿನಿತಕೆ ಬಲು ಯೋಚಿಸದಿರೊ || ಭಲಾ || ೧ ||

ಅಳಿವವರಳಿವರು ಉಳಿವವರುಳಿವರು |
ಅಳಿವರು ಉಳಿಯರು ದಿಟ್ಟಾ |
ಉಳಿವರು ಸಾಯರು ನಳಿನಜ ಲಿಪಿ ಸಿತ |
ಗಳಿಗೆಯು ಮೀರಲು ಕಷ್ಟಾ ||
ಅಳಲ್ವಡೆ ಬಳಲ್ವಡೆ ತೊಳಲ್ವಡೆ ಈ ಸುರ |
ಪೊಳಲಧಿಕಾರವೇಕಳಿಭುಜ ನಿನಗೆ || ಭಲಾ || ೨ ||

ಆ ಪುತ್ರ ಮಿತ್ರರು ಸ್ಥಾಪಿತ ಚಿತ್ರದ |
ರೂಪುಗಳಲ್ಲವೆ ಇಂದ್ರಾ |
ಈ ಪರಿ ಯಾತಕೆ ತಾಪವ ಬಿಡು ಬಿಡು |
ಶ್ರೀಪತಿನುತ ಗುಣಸಾಂದ್ರ ||
ಆಪತ್ಕಾಲಕೆ ಆ ಪರಮಾತುಮ |
ಆಪದ್ಬಾಂಧವ ತಾ ಪೊರೆಯದೆ ಬಿಡ || ಭಲಾ || ೩ || 26 ||

**ಭಾಮಿನಿ**
ಸುರಪ ಕೇಳ್ ಸಂಜೀವ ಮಂತ್ರವ |
ನರಿಯಬೇಕೆಂದಯ್ದ ನಾ ಹಿಮ |
ಗಿರಿ ತಟದೊಳೀಶ್ವರನ ಭಜಿಸಿದಡಾಗಲಾ ಶುಕ್ರ ||
ಅರಿದು ಬಂದೆನ್ನಂತೆ ತಪಿಸಿದ |
ಧಿರುವರೊಳು ಶಿವನೊಲಿದನವನಿಗೆ |
ಸರಸಿಜಾಸನ ಲಿಖಿತ ಮೀರುವಡರಿದೆಲೈ ಶಕ್ರ || ೧ || 27 ||

**ಕಂದ**
ಆದಡೆ ಧೈರ್ಯದ ಸಿರಿಯ |
ನ್ನಾಧರಿಸೀ ತತ್ಕಾಲೋಚಿತ ಬಕ್ಕೊಂದುಂ ||
ಮಾಧವನಿಹ ನಮಗೆಂದು ವಿ |
ನೋದದಿ ಪರಸುತ ಹರಿಯಂ ಗುರು ಮನೆಗಯ್ದಂ || ೧ || 28 ||

**ವಾರ್ಧಕ**
ಹಿರಣ್ಯಪುರದೊಳಗಿತ್ತಲೊಂದಿನಂ ಸಿಂಹಿಕೆಯ |
ತರಳ ತಮ ಖಳರುಲಿಯಲಿತ್ತನೊಡ್ಡೋಲಗವ |
ನುರಿಗಣ್ಣ ಕಾರೊಡಲ ಖಳರಯ್ದ ಬರುತಿರ್ದರರಸನೋಲಗಕಾಗಳು ||
ವರ ಖಡ್ಗರೋಮ ಪ್ರಹೇತಿ ವಿದ್ರಾವಣಂ |
ಕರಿಶಿರಂ ಜರ್ಝರಂ ವಿಪ್ರಜಿತು ಧೂಮ್ರಾಕ್ಷ |
ಸುರೆಗುಡಿಕ ಶ್ವೇತದಂತಾದಿ ಪಟುಭಟರೊಪ್ಪಿ ಮೆರೆಯಲೆಂದಂಮವರೊಳು || ೧ || 29 ||

**ಕಾಂಬೋಧಿ - ಝಂಪೆ**
ಕೇಳಿ ಭಟ ನಿಕರ ಮುನಿ ಮೌಳಿ ಮದ್ಗುರು ಭಾಷಿ |
ತಾಳಿಗಳೆ ಪೇಳ್ವೆ ನಿಮಗೆಲ್ಲ ||
ಖೂಳರನು ಗೆಲುವ ಘನ ಬೇಳಂಬದಿಂ ಜೀವ |
ಭಾಳಾಂಬಕನ ಭಜಿಸೆ ಮೇಲಾ || ೧ ||

ಪರಿಯರಿದು ನಮ್ಮ ಗುರುವರರಯ್ದ ತಪಿಸಲಾ |
ಪರಮ ಸಂಜೀವಿನಿಯ ಮಂತ್ರ ||
ಇರುವರಿದಿರಿಂಗೆ ಮೃಗಧರನು ಮೈದೋರಲಾ |
ಗೊರೆವರೊಂದೇ ತೆರದ ಮಂತ್ರ || ೨ ||

ಚಚ್ಚೌಕ ಕುಂಡದೊಳು ಕಿಚ್ಚೊಟ್ಟಿ ಪೊಗುತೊಡನೆ |
ಪೆಚ್ಚು ಉರಿ ಸೋಂಕೆ ಮಿಗೆ ನಭದಿ ||
ನಿಚ್ಚ ತಲೆಕೆಳಗೆಸಗಿ ಬೆಚ್ಚದಾ ಹೊಗೆ ನುಂಗು |
ತುಚ್ಚರಿಸಲಾ ಮಂತ್ರ ಸಿದ್ಧಿ || ೩ ||

ಕೊಡುವೆನಿದನೆನೆ ಶಂಭು ನಡನಡುಗಿ ದಿವಿಜಗುರು |
ತಡೆಯದೆನಗೆಂದತ್ತ ಪೋದ ||
ಒಡನೆಮ್ಮ ಗುರುವೊಪ್ಪೆ ಮೃಡ ಮಂತ್ರ ಪೇಳ್ದ ಗಡ |
ತಡೆಯದದ ಸಿದ್ಧಿಪಡೆ ನಡೆದ || ೪ ||

ಆತ ಬರುವನಕ ನಾವ್ ಭೂತನಾಥನ ಪದವ |
ನೋತು ಭಜಿಪುದು ಯತಿಗಳಂತೆ ||
ಪೂತಜಡೆ ಜಪಸರ ವಿಭೂತಿ ರುದ್ರಾಕ್ಷಿಗಳ |
ಪ್ರೀತಿಯಿಂ ಧರಿಸಬೇಕಂತೆ || ೫ || 34 ||

**ಭಾಮಿನಿ**
ಕೊಲ್ಲ ಬಂದರೆ ಸುರರು ಗುರುಪಿತ |
ಮಲ್ಲ ಭೃಗುಮುನಿ ಕಾವ ಗಡ ಇನಿ |
ತೆಲ್ಲ ಸಂಘಟಿಸಿದರೆ ನಾವೇ ದೈವ ಜಗಕೆಂದ ||
ಮಲ್ಲ ಭಟರಹುದೆಂದು ಸಭೆಯಿಂ |
ಚೆಲ್ಲಿದರು ನವ ಮುನಿಗಳಾದಿನಿ |
ತೆಲ್ಲ ತಿಳಿದಮಕೌಘ ಬಂದೊಡೆಯಂಗೆ ಪೇಳ್ದರದ || ೧ || 35 ||

**ಮುಖಾರಿ - ಏಕ**
ಚಿತ್ತಾವಧಾನ ಭಾಗ್ಯವಂತ | ಸುರ ಕಾಂತ ಪೊಸ |
ವೃತ್ತಾಂತ ಕೇಳೈ ಗುಣವಂತ || ಚಿತ್ತಾವಧಾನ || ಪ ||
ಅಣ್ಣಾ ಕೇಳ್ ಗುರುಗಳ್ ಪೇಳ್ವುದೆಲ್ಲ | ನೀಬಲ್ಲೆಯಗ್ರ |
ಗಣ್ಯ ಭಾರ್ಗವ ಮುನಿ ಮಲ್ಲ ||
ಹಣ್ಣೋದ ವರ ಮುಕ್ಕಣ್ಣನ ಮಂತ್ರವ |
ಮಿಣ್ಣನೆ ಸಿದ್ಧಿಗೆಯೆಣ್ಣೊ ನಡೆದ ಗಡ |
ಪುಣ್ಯ ಜನರು ಮಾರಣ್ಯದೊಳಿತ್ತ ಮೈ |
ಬಣ್ಣಗಳಡಗಿಸಿ ಬಣ್ಕಿಪರುರು ಜಪ || ಚಿತ್ತಾವಧಾನ || ೧ ||

ನೆತ್ತೀಲಿ ಜಡೆಗಳುಂಟಯ್ಯ | ಜಪಸರ ಕೈಯ |
ಮೆತ್ತಿದೆ ಭಸ್ಮ ಪೂರ ಮೈಯ ||
ಎತ್ತೆತ್ತಲು ತಪಿಸುತ್ತಿಹರೈ ದು |
ರ್ವೃತ್ತ ಸನ್ಯಾಸಿಗಳುತ್ತಿದರಿಳೆಯನು |
ಮತ್ತಾಗುರು ಮಂತ್ರೋತ್ತಮ ಪಡೆದು ಬ |
ರುತ್ತಲೆ ನಮ್ಮನು ಕುತ್ತಿ ಕೊಲುವರೈ || ಚಿತ್ತಾವಧಾನ || ೨ || 37 ||

**ವಾರ್ಧಕ**
ಲೇಸ ಸೂಚಿಸಿದರೈ ಬರ್ದಿಲರ್ಭಳಿರೆಂದು |
ವಾಸವಂ ಜೀವನಭಿಮತದಿಂದ ಪೊರಟು ವರ |
ವಾಸವೆಣ್ಣೊನೆಯನೆಡೆಗಯ್ದಿ ಬಿನ್ನೈಸಲವನನಿಬರಂ ಕೂಡಿ ಬಂದು ||
ಶ್ರೀಶ ದಾಮೋದರ ಮುರಾರಿ ಮಧುಜಿತ್ ಪ್ರೀತ |
ವಾಸವಾಸವವಂದ್ಯ ವಾಸುದೇವ ಹೃಷೀ |
ಕೇಶವಾಚ್ಯುತನೆಂದು ವಾರ್ಧಿ ತಡಿಯೊಳ್ನಿಂದು ನುತಿಸಿದರ್ಕಾವುದೆಂದು || ೧ || 38 ||

**ಭಾಮಿನಿ**
ತರುಣ ತುಳಸಿಯ ವೈಜಯಂತಿಯ |
ಕೊರಳ ಕೌಸ್ತುಭ ಪೇರುರದ ಧೃತ |
ಕರ ಚತುಷ್ಟಯ ಶಂಖ ಚಕ್ರಾಂಬುರುಹ ಗದೆಗಳಲಿ ||
ಮೆರೆವ ರವಿ ಶತ ಕೋಟಿ ಭಾಸುರ |
ದಿರವಿನತಿ ಬಂಧುರದ ಮೂರುತಿ |
ವರನಿಳಿಂಪರ ನುತಿಗೆ ಮೈದೋರಿದನು ತೇಜದಲಿ || ೧ || 39 ||

**ಕೇದಾರಗೌಳ - ಝಂಪೆ**
ಕಂಡು ಶ್ರೀಹರಿಮೂರ್ತಿಯ | ಧಾತ ಸುರ |
ತಂಡ ಸಹಿತಮರರಾಯ ||
ದಂಡದಂತೆರಗಿ ಕೈಯ | ಮುಗಿದೆದ್ದು |
ಕೊಂಡಾಡಿ ವನಮಾಲಿಯ || ೧ ||

ಕಾವ ಕರುಣಾಳು ನೀನೆ | ಜಯತು ಶ್ರೀ |
ಕಾಮಪಿತ ಕಮಲದೃಷನೆ ||
ಕಾವುದೆನುತೆರಗಲೊಡನೆ | ಮೈದಡವಿ |
ದೇವಪತಿಗೆಂದ ತಾನೆ || ೨ ||

ಯಾತಕಯ್ತಂದೆ ಮಗನೆ | ಧಾತ ಸುರ |
ವ್ರಾತ ಸಹ ಸ್ತುತಿಪೆ ಶಾನೆ ||
ಯಾತರೆಡರುಗಳದರನೆ | ಪೊರೆವೆ ಪುರು |
ಹೂತ ಎನಲೆಂದ ತಾನೆ || ೩ || 42 ||

**ಮಧುಮಾಧವಿ - ಏಕ**
ಶ್ರೀಲೋಲ ನತಪಾಲ ಬಾಲಗೋಪಾಲ |
ಪಾಲಿಸೆಮ್ಮನು ಶೀಲ ಕರುಣಾಲವಾಲ || ಶ್ರೀಲೋಲ || ಪ ||
ಕೇಳು ಮಾಸ್ವಾಮಿ ಪಾಲ್ಗಡಲ ರಂಗಯ್ಯ |
ಪೇಳುವೆನಮರಾಳಿಗೆಡರಾದ ಬಗೆಯ ||
ಖೂಳರು ಪೆರ್ಚಿ ಲೋಕಗಳೊಳು ಜೀಯ |
ಬಾಳಲೀಸರು ನಮ್ಮ ಸ್ವರ್ಗದ ಸಿರಿಯ || ಶ್ರೀಲೋಲ || ೧ ||

ಅದಕೆಮ್ಮ ಗುರು ಸಂಜೀವನಿಯಾಪೇಕ್ಷೆಯಲಿ |
ಮದನಾರಿ ಪದ ಭಜಿಸಿದ ಹೈಮಾದ್ರಿಯಲಿ ||
ಮದಮುಖರಾಚಾರ್ಯನರಿದಲ್ಲಿ ತೆರಳಿ |
ಪದವ ಜಾನಿಸೆ ಶಿವನೊಲಿದವಗಲ್ಲಿ || ಶ್ರೀಲೋಲ || ೨ ||

ಮತ್ತಾತ ಮಂತ್ರ ಸಿದ್ಧಿಪಡೀಗ ನಡೆದ |
ಇತ್ತ ತಮಾದ್ಯರು ಜಡೆ ಭಸ್ಮ ತಳೆದಾ ||
ಮೊತ್ತ ಮೊತ್ತದಿ ತಪಿಸುವರಿನ್ನು ಮುಂದಾ |
ಎತ್ತಲೆಮ್ಮಯ ಗತಿ ಪೇಳು ಮುಕುಂದ || ಶ್ರೀಲೋಲ || ೩ || 45 ||

**ಭಾಮಿನಿ**
ನಾಗಶಯನ ಪರಾಕು ಷಟ್ಕ |
ರ್ಮಾಗಮಂಗಳು ಹೋಮ ಜಪತಪ |
ಮಾಗಿತೈ ಸುರ ಹೆಂಡ್ಯರಸುರರಿಗಾಯ್ತು ಗೋವಿಂದ ||
ಯಾಗ ಭಾಗವನೆಂತು ಸೆಳೆವರು |
ಹೇಗೆ ಬಾಳಲಿ ಕಜ್ಜಮಿದು ನ |
ಮ್ಮಾಗುಹೋಗರಸಂಗೆ ಯೆನೆ ತಲೆದೂಗಿ ಹರಿಯೆಂದ || ೧ || 46 ||

**ನವರೋಜು - ಏಕ**
ಸಾಕು ಸಾಕೆಲೆ ಇಂದ್ರ | ಇನಿ |
ತ್ಯಾಕೆ ಖೇದವು ಸಾಂದ್ರ ||
ಆ ಕರಿಗೊರಳನೆ ನಾಕಕೆ ಮುನಿದಡೆ |
ಸಾಕುವರಿಹರೆ ಇನ್ಯಾಕೈ ಯೋಚನೆ || ಸಾಕು || ಪ ||
ಚಂದವಾಯಿತು ನೋಡ | ಭುಜ |
ಗೇಂದ್ರ ಭೂಪನ ಪಾಡ ||
ಒಂದು ಕಣ್ಣಿಗೆ ಹಾಲೊಂದು ಕಣ್ಣಿಗೆ ನೀ |
ರೆಂದಾಡುವ ಗಾದೆ ಸಂದರ್ಭಿಸಿದನು || ಸಾಕು || ೧ ||

ಆಗಲಾಗಲಿ ಲೇಸು | ನಮ |
ಗಾಗುವುದವನ್ಯೆಣಿಸು ||
ನಾಗನ ಪಾಲ್ ಖಗ ನಾಗಗೆ ನಂಜೇ |
ತಾಗದೆ ಬಾಗರಿನ್ನಾ ಗರುವರು ದಿಟ || ಸಾಕು || ೨ || 48 ||

**ವಾರ್ಧಕ**
ಬಲ್ಲಿದಂ ಶುಕ್ರನಾ ಮಂತ್ರ ಸಿದ್ಧಿಯ ಪಡೆದು |
ಮೆಲ್ಲನೈತಪ್ಪಿನಂ ದನುಜ ಸಂಕುಲವ ನಾ |
ವಿಲ್ಲೆನಿಸಬೇಕು ನಾ ಬೆಂಬಲಕ್ಕಯ್ವೆ ನೀವಯ್ದಿ ತಪವಂ ಮಾಡುವ ||
ಖುಲ್ಲದಾನವ ಸಮೂಹಂಗಳಂ ಬಿಡದೆ ಪೊ |
ಕ್ಕಲ್ಲಿ ಪೊಕ್ಕರಸಿ ನಾನಾ ಪ್ರಕಾರಂಗಳಿಂ |
ಕೊಲ್ಲಿಯೆಂದಷ್ಟದಿಕ್ಪಾಲರಿಗೆ ಬೆಸಸಿ ನಿರವಯನಾದ ಶ್ರೀಮಾಧವ || ೧ || 49 ||

**ಭಾಮಿನಿ**
ಹರಿಯ ನೇಮವನಾಂತು ಶಿರದೊಳು |
ಹರಿದು ತಂತಮ್ಮೆಡೆಗೆ ಮರುದಿನ |
ಹರಿ ಸುಧರ್ಮೆಯೊಳೆಸೆಯೆ ಹರಿ ಲಹರಿಯಲಿ ಜಯವೆಂದಾ ||
ಹರಿ ಹರಿಜ ಹರಿಪಾಲ ಹರಿಸುತ |
ಹರಿಯ ಸುಹೃದ ಮುಖ್ಯ ಭಟ ತತಿ |
ಹರಿವ ಖಡ್ಗವ ಝಳಪಿಸುತ್ತಿರಲೆಂದನಮರೇಂದ್ರ || ೧ || 50 ||

**ಸೌರಾಷ್ಟ್ರ - ತ್ರಿವುಡೆ**
ಬಲ್ಲಿರೇ ಸುಮನಸರು ಲಕ್ಷ್ಮೀ |
ನಲ್ಲನಾಜ್ಞಾಪನೆಯ ತ್ರೈಜಗ |
ದಲ್ಲಿರಲು ಕೊಲಬೇಕು ಖುಲ್ಲರ | ನಿಲ್ಲದಾವು || ೧ ||

ಎಲ್ಲಿ ಐರಾವತ ಮದೇಭ ಮ |
ತ್ತೆಲ್ಲಿಯುಚ್ಚೈಶ್ರವ ವಜ್ರಾಯುಧ |
ವೆಲ್ಲಿ ಧನು ಪಿಂಗಳಿಗಳೀಕ್ಷಣ | ಕಿಲ್ಲಿ ಬರಲಿ || ೨ ||

ಕರೆಯಿರೋ ಗಂಧರ್ವ ಕಿನ್ನರ |
ಗರುಡ ಗುಹ್ಯಕ ಸಿದ್ಧವಿದ್ಯಾ |
ಧರ ಮರುದ್ವಸು ರುದ್ರ ಯಕ್ಷರ | ಭರದೊಳೀಗ || ೩ ||

ಎದ್ದರೇ ಚಾರಣರು ಸಾಧ್ಯರು |
ಬಿದ್ದರೇ ಕಿಂ ಪುರುಷ ಭುಜಗರು |
ಸಿದ್ಧರೇ ಶಾಕಿನಿ ಗಣಂಗಳು | ಯುದ್ಧಕಿಂದು || ೪ ||

ಮಾತಿಗವಸರವಿಲ್ಲ ನಭದ ಖ |
ದ್ಯೋತ ಮುಳುಗದ ಮುನ್ನ ರಿಪು ಭಟ |
ವ್ರಾತ ಸದೆವುದೆನುತ್ತಲಾ ಪುರು | ಹೂತನೆದ್ದ || ೫ || 55 ||

**ಶಂಕರಾಭರಣ - ಮಟ್ಟೆ**

ಕಾಣುತಾಗ ಸುರಭ ಜಾಳಿ | ಚೂಣಿಗೇಳಲಾಗ ಕಕುಭ |
ಶ್ರೇಣಿ ಘನ ಕುಲಾದ್ರಿಗಳ್ಪಲ್ | ಕೇಣಿಗೊಂಡುದು ||
ಬಾಣ ಮುಸಲ ಪಿಂಡವಾಳ | ಸಾಣೆಯಲಗು ಕುಂತವಸಿ ಕೃ |
ಪಾಣವಿಡಿದು ನಡೆದರಾಗ | ಜಾಣರವರಂದು || ೧ ||

ಮಂದರಾ ಮಹೇಂದ್ರ ಮೇರು | ವಿಂಧ್ಯ ಪಾರಿಯಾತ್ರ ತುಹಿನ |
ಗಂಧಮಾದನಾದಿ ಗಿರಿಗ | ಳೊಂದಿ ಗಜರುತ ||
ಸಂದಿಗುಂದಿ ಹಳ್ಳಕೊಳ್ಳ | ಬೆಂದಿಬಂದಿ ಸಂದಿನಲ್ಲಿ |
ನಿಂದ ಬಲು ಮದಾಂಧರಸುವ | ಕೊಂದು ತಿರುಗುತ || ೨ ||

ಬನ್ನಿರೈ ಶಾಭಾಸು ಕೆಂಪು | ಕಣ್ಣು ಕಿಚ್ಚು ಪುಚ್ಚೆ ಬಿಳ್ಪು |
ಕಣ್ಣು ಧೂಮ ಕಣ್ಣು ಜಡೆಗ | ಳಣ್ಣನವರ್ಗಳು ||
ಕಣ್ಣು ಬಿಡುವಿರ್ಯಾಕೆ ಕಪ್ಪು | ಬಣ್ಣ ಕೆಂಬಣ್ಣ ಬಿಳ್ಪು |
ಬಣ್ಣರ್ಬನ್ನಿರೆಂದ ಮೈ | ಗಣ್ಣನವರೊಳು || ೩ ||

ಕೊಟ್ಟನೇ ಮುರಾರಿ ಮಂತ್ರ | ಥಟ್ಟನೇ ಜಾನಿಪಿರೆ ತಂತ್ರ |
ದಿಟ್ಟನೆಲ್ಲಿ ಭೃಗುಜ ಪ್ರಾಣ | ಬಿಟ್ಟನೇ ಭಲಾ ||
ಒಟ್ಟಿಗವನ ಕರೆಸಿ ಕೇಳಿ | ಮೊಟ್ಟಮೊದಲೆ ಬೇಡಿ ನಿಮ್ಮ |
ಇಷ್ಟದೈವವೆನಲು ಜಿಷ್ಣು | ದುಷ್ಟರಾ ಬಲ || ೪ ||

ವೆಂಟಣಿಸಿ ಧೂಮ್ರಾಕ್ಷ ಮುಖ್ಯ | ಕಂಟಕರು ವಿರೋಧಿ ಭಟರ |
ತಂಟೆಗೈದು ಸೋತು ಬಾಯಿ | ಗಂಟಲೊಣಗುತ ||
ಎಂಟು ದೆಸೆಯೊಳೋಡಿ ಏಸು | ಗೆಂಟೊ ಭೃಗುವಿನಾಶ್ರಮವದು |
ನಾಂಟಿತಯ್ಯ ಸರಳೆನುತ್ತ | ಲಂಟಿಯೋಡುತ || ೫ || 60 ||

**ವಾರ್ಧಕ**

ಬಟ್ಟೆವಿಡಿವರ ಕಂಡು ಕಲಿ ತಮಾಸುರನೆಂದ |
ಹುಟ್ಟಿದಂದಿಂದ ಸುರರೆಮ್ಮವಂ ಕಂಡು ಕಂ |
ಗೆಟ್ಟೋಡುವವರಿಂದು ತಮ್ಮ ಬಾಲ್ದಲೆಗಳಂ ಕುಟ್ಟುವಂತಾಯ್ತು ನಲಿದು ||
ದಿಟ್ಟ ಹುಲಿ ಮೀಸೆಯಂ ನರಿಗಳಳ್ಳಾಡಿಸುವ |
ಮಟ್ಟಾಯಿತೆಂದು ಹೂಂಕರಿಸಿ ಸುರಬಲ ತಡೆಯು |
ತಟ್ಟಹಾಸದೊಳೆ ಕೋದಂಡಮಂ ಝೇಗೈಯುತಮರಪಂಗೆಂದ ಮುಳಿದು || ೧ || 61 ||

**ಭೈರವಿ - ಏಕ**

ಧಿರುರೆ ಪುರಂದರ ವೀರ | ತಪ |
ವೆರಸಿದ ರಾಕ್ಷಸ ವಾರ ||
ತರಿದೈ ತವ ತಲೆ ರುಧಿರ | ಇವ |
ರ್ಗರೆವೆನು ತರ್ಪಣ ಚದುರ || ೧ ||

ಖಳರಗ್ರೇಸರನಹೆಯ | ನೀ |
ಕೊಳುಗುಳಕಿದಿರಾಗಿಹೆಯ ||
ಅಳಿದ ಬಲಕೆ ದಳಪತಿಯ | ಮಾಡಿ |
ಕಳುಹುವೆ ಯಮನೆಡೆಗಯ್ಯ || ೨ ||

ಮಂತ್ರವ ಪಡೆದಾಚಾರ್ಯ | ಬರೆ |
ನಿಂತಿರು ನಿರ್ಜರ ರಾಯ ||
ತಂತುಪಟದ ಬೊಂಬೇಯ | ಪರಿ |
ಯಂತೆಸಗುವೆ ನೋಡಯ್ಯ || ೩ ||

ವೈದ್ಯರು ತಾ ಬಹ ಮೊದಲೇ | ರೋಗಿ |
ಬಿದ್ದರೆ ಫಲವೇನ್ನರುಳೆ ||
ಯುದ್ಧಾಗ್ರದಿ ನಿನ್ನ ತಲೆ | ಉಳಿ |
ದಿದ್ದರೆ ನೋಡಾಮೇಲೆ || ೪ ||

ಮೆಚ್ಚಿದೆ ಮಾತಿನ ಮರುಳ | ಬಲ |
ಕಚ್ಯುತ ಬರಲೈ ಹೇಳಾ ||
ಕೊಚ್ಚುವೆ ತವ ತನಿಗರುಳ | ಸಲೆ |
ಹಚ್ಚುವೆ ಗಣಗಳಿಗೆಲ್ಲ || ೫ ||

ಫಡ ನಕ್ತಂಚರವರಿಯ | ಬಾಯ್ |
ಬಡಿಕರ ಗುರುವಾಗಿಹೆಯ ||
ಹಿಡಿ ಇಕೊ ವಜ್ರದ ಹತಿಯ | ಬೇಗ |
ಪಡೆ ಇಕೊ ಸಂಜೀವಿನಿಯ || ೬ ||

ಆದಡೆ ನಿಲ್ ಪುರುಹೂತ | ಎಂದು |
ಕಾದಲು ಖಳ ವಿಪರೀತ ||
ಒಯ್ದಿಡೆ ವಜ್ರವ ಮತ್ತಾ | ಧರೆ |
ಗ್ಹಾಯ್ದರೆ ಪಾರಿದನತ್ತ || ೭ || 68 ||

**ಭೈರವಿ - ತ್ರಿವುಡೆ**

ಏನನೆಂಬೆ ಸಾಹಸ | ವೇನನೆಂಬೆ || ಪ ||
ಓಡುವಸುರನ ಕಂಡು ಧನಿಯೊಡ |
ಗೂಡಿ ಕರ್ಬುರರೋಡಿದಡೆ ಭಯ |
ಖೋಡಿಯಿಲ್ಲದೆ ಸುಮನಸರನೊಡ |
ಗೂಡಿ ಬೆನ್ನಟ್ಟುತ ಶಚೀಶ್ವರ ||
ಗಾಡಿಯಿಂ ಪಿಡಿದೌಕಿ ತಲೆ ಚೆಂ |
ಡಾಡಿದನು ಕಂತುಕಗಳಾಟದ |
ಪಾಡಿನಿಂ ಮೃಜಾನ್ಯಂನ ಶೋಣಿತ |
ತೋಡಿ ಚೆಲ್ಲಿದನರರೆಯದ್ಭುತ || ವೇನನೆಂಬೆ || ೧ ||

ಮೂಡದಳ ಭಾರದೊಳು ಜಗವ |
ಲ್ಲಾಡಿತೇಣ್ದೆಸೆ ಕಂಪಿಸುತ ನಲಿ |
ದಾಡಿ ಕೆಲರೆಡೆಯಾಟ ದೀಪದ |
ಪಾಡಿನಲಿ ಫಣಿ ಕೂರ್ಮರುಬ್ಬಸ ||
ಗೂಡೆ ಕುಲಗಿರಿಯಾಡೆ ಮೇಣ್ ಮೈ |
ಬಾಡೆ ಖಳರಯ್ದುತ್ತ ಭೃಗು ಮುನಿ |
ಪ್ರೌಢನಾಶ್ರಮ ಕಂಡು ಹೊಕ್ಕರು |
ಗಾಢ ನಿಸ್ವನದಿಂದಲದನಿ || ನ್ವೇನನೆಂಬೆ || ೨ ||

ವರ ಮುನೀಶ್ವರನುಗ್ರ ತಪ ನಿ |
ರ್ಭರದ ಚಿತ್ತದೊಳರಿಯದಿರಲವ |
ನರಸಿ ಮಾಯಾಂಗನೆ ಮಹಾತುಮೆ |
ಯರರೆ ಏನಾಶ್ಚರ್ಯವೆಂದ ||
ಬ್ಬರದ ಬೊಬ್ಬೆಯ ಕೇಳಿ ಬಲು ಕಾ |
ಹುರದೊಳೆದ್ದಾಶ್ರಮದ ದ್ವಾರದಿ |
ನಿಲುಕಿ ತಲೆ ಬೆರಳಿಟ್ಟು ಮೂಗಿನ |
ಕರದೊಳೆಂದಳು ಗಜರಿ ಮುನಿಸತಿ || ಏನನೆಂಬೆ || ೩ || 71 ||

**(ಅಷ್ಟಪದಿ) ಮಾರವಿ - ಏಕ**

ಯಾರೆಲವೋ ಜ | ಝರ್ಝರದ ಪಟುಭಟ |
ವಾರ ಕೋಲಾಹಲ | ಭಾರಿ ನಿನಾದ ವಿ ||
ಕಾರಿಗಳೆನೆ ಬಾ | ಯಾರುತ ಬೀರುತ |
ದೂರಿದರಾ ಶಚಿ | ಜಾರನ ಲೂಟಿಯ || ನೇನನೆಂಬೆ || ೧ ||

ಕಾಯುವರಿಲ್ಲವೆ | ತಾಯೆ ಪುಳಿಂದರು |
ಆಯದಿ ಮೃಗ ಗಣ | ನೋಯಿಸುವಂದದಿ ||
ಬೀಯ ಮಾಡುವ ಸುರ | ರಾಯನು ಮದ್ಗುರು |
ರಾಯನಿಲ್ಲವು ನೀ | ಕಾಯೆ ಪರಾಕೆ || ಎಂದರಾಗ || ೨ ||

ಭುಲ್ಲೈಸುತಲಾ | ಫುಲ್ಲದಳಾಂಬಕಿ |
ಖುಲ್ಲರ ಬೊಬ್ಬೆಯ | ನಿಲ್ಲಿಸಿ ಯಾರ್ಸುರ ||
ರೆಲ್ಲಿ ಮದಾಶ್ರಮ | ನಿಲ್ಲಿರೆ ನಿರ್ಜರ |
ಮಲ್ಲನುಪದ್ರವೆ | ಕೊಲ್ಲದೆ ಬಿಡೆಯೆನು || ತೆಂದಳಾಗ || ೩ ||

ಅದೆ ಹರಿ ವಜ್ರ ಮ | ತ್ತಿದೆ ಶಿಖಿ ಖಡ್ಗನೋ |
ಡಿದೆಯಮ ದಂಡ ಮ | ತ್ತದೆ ನಿರುರುತಿಯಾ ||
ಮುದಕನ ಮಾರುತ | ನಿಧಿಪತಿ ಈ ಶರ |
ವಿದೆ ಕುಂತ ಪಾಶ ನದ್ | ಗದೆ ಬಲ್ಲೆಹ ಶೂಲ || ವೆಂದರಾಗ || ೪ || 75 ||

**ಭಾಮಿನಿ**

ಕೊಲ್ಲುವರು ತಡವಿಲ್ಲ ತಾಯೆ ತ |
ಪ್ಪಿಲ್ಲ ನಮ್ಮಲಿ ನಮ್ಮ ನೀವೇ |
ಕೊಲ್ಲಿರೆನೆ ಕೇಳ್ದಾಲಿ ಕೆಂಪೇರಿದವು ಮುನಿ ಸತಿಯ ||
ನಿಲ್ಲಿರೈ ಬರ್ದಿಲರ ಮದಕಾ |
ಬಲ್ಲೆನೌಷಧವೆಂದು ದಿತಿಸುತ |
ರೆಲ್ಲರಂ ಪಿಂದಿಕ್ಕಿ ನಿಲೆ ಬರುತೆಂದ ಸುರರಾಯ || ೧ || 76 ||

**ಪಂತುವರಾಳಿ - ಅಷ್ಟ**

ಯಾರು ನೀ ಗಂಭೀರೆ ನೀರೆ |
ಯಾರದಿದಾಶ್ರಮ ಚದುರೆ |
ದಾರಿಯ ಬಿಟ್ಟಿತ್ತು ಸಾರೆ | ಕಾರಿಯ ಉಂಟು || ೧ ||

ಭಾರಿ ಕಾರ್ಯಬಲ್ಲೆ ಭೃಗೂ |
ಚಾರು ಮುನೀ ವನವಿದು |
ದಾರಿ ಬಿಡಲೆನ್ನ ಕೇಳ್ವ | ರಾರು ನಿಘಂಟು || ೨ ||

ಪಾಥೋರುಹಾಂಬಕಿ ಜಾಣೆ |
ನೂತನ ಕೋಕಿಲಗಾನೆ |
ನೀತಿ ತಪ್ಪಿ ನುಡಿವರೇನೆ | ಏತಕೊ ಕಾಣೆ || ೩ ||

ನೀತಿಗಾರನಹುದೊ ಪುರು |
ಹೂತ ಮುನ್ನ ಬಲ್ಲೆ ಮೌನಿ |
ಗೌತಮನರ್ಧಾಂಗಿಗೋತ | ರೀತಿಯಲ್ಲೇನೆ || ೪ ||

ಆಯಿತೇಕಾ ಮಾತು ನಮ್ಮ |
ದಾಯವಾದಿ ವ್ಯಾಜದಲ್ಲಿ |
ನೋಯಿಸೆ ಖುಲ್ಲರ ಕಾಯ್ವ | ದಾಯವೇ ಕಾಂತೆ || ೫ ||

ನಾಯಿ ಹೋಗಾ ಮಾತಾಡಿದರೇ |
ಬೀಯಗೈಯುವೆ ನಿಮಿಷದಿ |
ಸಾಯದೋಡಿ ಮರೆ ಹೊಕ್ಕರ | ಕಾಯುವೆನಿಂತೆ || ೬ ||

ನಾರಿಯಾದರೇನು ಹೊಂತ |
ಕಾರಿ ಕಾರ್ಬೊನ್ನಿನ ಸಂಗ |
ಸೇರಿ ವಹ್ನಿ ನೋಮಂತಿವರ | ಸೇರಿ ದಣಿವೆಯ || ೭ ||

ಆರು ನಮ್ಮ ದಂದಿಸುವ |
ವೀರರು ಮುನ್ನಲೆ ಯಮ |
ನೂರ ಪೊಕ್ಕರಯ್ಯ ಸಾರು | ಸಾರತ್ತ ಕಡೆಯ || ೮ ||

ಅತ್ತಲಿತ್ತ ಪೊಗೆನು ನು |
ಗ್ಗೊತ್ತಿ ಖೂಳರನ್ನು ಕೊಲ್ವೆ |
ಸತ್ತ ಹಾಗಿರೆಂದು ವಜ್ರ | ವೆತ್ತಿದ ಶಕ್ರ || ೯ ||

ಹತ್ತಿ ಅಧಿಕ ಕ್ರೋಧವು ಮೇ |
ಲೆತ್ತಿದ ಕೈ ಬಾಗದಿರಲೆ |
ನ್ನುತ್ತ ಮೃತ್ಯುಂಜಯನ ಜಪಿ | ಸುತ್ತಿರಲನಕ || ೧೦ || 86 ||

**ವಾರ್ಧಕ**
ಬಾಹುಬಲ ಮಾಣ್ಬುದಂ ಕಾಣುತೇಣ್ಣೆಸೆ ಭಟರು |
ಶ್ರೀ ಹಂಸಗಮನಪಿತ ಕಮಲಾಕ್ಷ ವನಮಾಲಿ |
ಪಾಹಿ ಪಾಹಿ ಮುಕುಂದ ಗೋವಿಂದ ಮುಚುಕುಂದವರದ ದೀನೋದ್ಧಾರಕ ||
ಈ ಹೆಣ್ಣು ಕೊಂದೆಮ್ಮ ಪೊರೆಯಣ್ಣ ಮಸಿಬಣ್ಣ |
ಸಾಹಸಗಳಡಗಿತ್ತೈ ಉಡುಗಿತ್ತೈ ಕಡುಗಿತ್ತೈ |
ತ್ರಾಹಿಯೆಂದಳಹರರ್ ತೊಳಲಿದರ್ ಬಳಲಿದರ್ ದಿಗ್ಬ್ರರರ್ ನುತಿಸುತಧಿಕ || ೧ || 87 ||

**ಸೌರಾಷ್ಟ್ರ - ತ್ರಿವುಡೆ**
ಭಕ್ತರೊಡಲೇ ತನ್ನ ಮನೆಯಂ |
ಬುತ್ತ ಶ್ರುತಿ ಸಾರ್ಪೋಲು ಶ್ರೀ ಪುರು |
ಷೋತ್ತಮನು ಮೈದೋರ್ದನನಿಮಿಷ | ಮೊತ್ತಕಾಗ || ೧ ||

ಅಂಜದಿರಿ ಅಂಜದಿರಿ ರಿಪು ಭಟ |
ಭಂಜಿಸುವೆನೆನೆ ನೋಡಿರಿವಳೀ |
ಗಂಜಿಸುವಳರಿ ವಧೆಗೆ ಬರಲೆಮ | ಗಂಜದೆನಲು || ೨ ||

ಅಭಯ ಹಸ್ತವ ತೋರಿ ತಿರುಗು |
ತ್ರಿಭವಸಖ ಕರೆದೆಂದನೆಲೆಗೇ |
ಕಿಭಗಮನೆ ಬಿಡು ಪಂಥ ನಡೆಯೆನ | ಲಭಿನಯಿಸುತ || ೩ ||

ನುಡಿದೆಯಾದರೆ ಷಂಡ ಶಾಪವ |
ಕೊಡುವೆ ತಡೆ ಬಡೆಯುಂಟೆ ನೋಡೆಂ |
ದೊಡನೆ ಮೃಡ ಜಪ ನುಡಿಯೆ ಕಾಣು | ತ್ತೊಡನೆ ವಿಷ್ಣು || ೪ ||

ಮತ್ತೆ ಛಡ ಪುಂಶ್ಚಲಿ ಯೆನುತ ಮೊಗ |
ವೆತ್ತಿ ಹೂಂಕರಿಸುತ ಸುದರ್ಶನ |
ದತ್ತ ನೋಡಿದಡಯ್ದಿ ಸತಿ ಶಿರ | ಕತ್ತರಿಸಿತು || ೫ || 92 ||

**ಭಾಮಿನಿ**
ಭೋಯೆನುವ ಸುಮನಸರ ಕಾಣುತ |
ಹಾಯೆನುತ ತಮ ಮುಖ್ಯರಳುತಲಿ |
ಬಾಯಿ ಬಿಟ್ಟರು ನಾವು ಪಾಪಿಗಳೆಮಗೆ ಹೊಣೆಯಾಗಿ ||
ತಾಯೆ ನೀನಳಿದಪರೆ ನಿರ್ಜರ |
ರಾಯುವಂ ನೀಡಾಡಿ ಸಾವೆವು |
ಹಾಯೆನುತ ಗರ್ಜಿಸಿದರುನ್ನತ ಸ್ವನದಿ ಬಲವಾಗಿ || ೧ || 93 ||

**ಕಂದ**
ಪ್ರಳಯದ ಸಿಡಿಲಿಂ ಮೀರುವ |
ಖಳರ ಕಠೋರ ಧ್ವನಿ ಕೇಳ್ದಾ ಭೃಗು ಮುನಿಗಂ ||
ತಿಳಿದು ಸಮಾಧಿಯ ಕೀಲಂ |
ಕಳಚಿದು ಅಳಲಿದ ಕಾಲ್ವೆಸೆ ಬಿದ್ದಾ ಸತಿಗಂ || ೧ || 94 ||

**ನೀಲಾಂಬರಿ - ರೂಪಕ**
ಹಾ ತರುಣೀಮಣಿ ಸುಗುಣಿ |
ಯಾತಕೆ ಮಲಗಿದೆ ರಮಣಿ |
ಮಾತಾಡೇ ಮನದನ್ನೆ |
ನೀತಿಯ ಸಂಪನ್ನೆ || ಹಾ ತರುಣೀ || ಪ ||
ಈ ತಪದಿಂದಾನಗಲಿದ |
ರೀತಿಗೆ ಮುಳಿದೆಯ ಬಂದೆನೋ |
ಡ್ಡಾತಾಡಂಬುಜ ವದನೇ |
ನೂತನ ಪಿಕಗಾನೆ ||
ಕಾತರದೊಳಗಾಲಂಗಿಸೆ |
ಮಾತೊಂದಾಡುತ ಮಾಣೇ |
ಸ್ನಾತಕ ವ್ರತ ನಿನ್ನಿಂದ ವಿ |
ಖ್ಯಾತಿಸಿತೆನಗೇನೆ || ಹಾ ತರುಣೀ || ೧ ||

ಸ್ನಾನವ ಮಾಡಿದು ಬಂದೆನು |
ನ್ಯೂನ ದೇವಾರ್ಚನೆಗೇನನು |
ನೀನನು ಮಾಡಿದೆ ಹೋಮಕೆ |
ತಾನೆಡೆ ಮಾಡಬಲೆ ||
ಮೌನಿಗಳಾಶ್ರಮಕಯ್ದಿಹ |
ರ್ತಾನವರ್ಗೀ ಪಾದ್ಯಾರ್ಘ್ಯವ |
ಮೌನವ ಬಿಡು ನುಡಿಯೇ ಗಜ |
ಯಾನೇ ಗುಣ ಶೀಲೆ || ಹಾ ತರುಣೀ || ೨ ||

ಹರನೊಳ್ ಮಂತ್ರವ ಪಡೆದಾ |
ಹರುಷದಿ ನಿನಗಭಿವಂದಿಸ |
ಲಿರದಯ್ಯಹ ಸುತ ಶುಕ್ರನೋ |
ಳೊರೆಯುವನೇನಕಟ ||
ಹರನ ಕಟಾಕ್ಷವು ಎಳಕಾ |
ತಿರಲೆಂತಯ್ಯೊ ಸುಮಂಗಲೆ |
ತೆರೆ ನಯನವನೆಂದಳಲಿದ |
ನೆರೆ ಭೃಗು ಮುನಿಯಧಟ || ಹಾ ತರುಣೀ || ೩ || 97 ||

**ವಾರ್ಧಕ**
ಇಂತು ಮೋಹಾಂಧಕಾರಂವಿಡಿದು ದುಃಖಿಸಲ್ |
ಮುಂತಡ್ಡ ಬಿದ್ದು ತಮನೆಂದ ತವ ಕೈಲೆಡೆಯ |
ಕಂತುಕಗಳಾವೆಮ್ಮ ಪೊಕ್ಕಲ್ಲಿ ಪೊಕ್ಕು ಸುರ ಸಂತತಿಗಳರಿಯುತಿರಲು ||
ಕಾಂತೆ ನಿಮ್ಮಾಕೆ ತಡೆವುದ ಕಂಡೆ ಒಡನೆ ಶಿರ |
ಮಂ ತರಿವುದಂ ಕಂಡೆನಾವ ಭಟ ತರಿದನೋ |
ದಂತಿ ರಥ ಮುಖ್ಯರಿದೆಯೆನೆ ಕೋಪ ಶಿಖಿ ಪೆರ್ಚುತಿಂತೆಂದ ಹರಿರವದೊಳು || ೧ || 98 ||

**ಮಾರವಿ - ಏಕ**
ಧಿರುರೆ ಕಾಲಾಗ್ನಿಯ ನೆರೆ ತಾ ಕೆಣಕಿ ಕ |
ಟ್ಟಿರುವೆಗಳುಳಿದಪುದೆ ||
ಮರುಳಾದರೆ ಮನ ಉರಗಂಗುಂಗುರ |
ಕರದಿಂ ತೊಡಿಸುವುದೆ || ೧ ||

ಉರುಹವೆನಖಿಳ ಚರಾಚರಮೀ ಸುರ |
ಕುರಿಗಳು ನಮಗಿದಿರೆ ||
ತರುಣಿಯ ತರಿದಾ ದುರಿತಾತ್ಮರ ಸಂ |
ಹರಿಸದೆ ಬಿಡೆನರರೆ || ೨ ||

ಕಡು ಪಾಪಿಗಳಿರ ಮಡದಿಗೆ ಕೇಡುಗ |
ಳಡರಿಸಿದವನಾರೈ ||
ನುಡಿರೆನೆ ನಡುಗುತ ಜಡಜದಳಾಂಬಕ |
ನುಡಿದ ಮುಗಿದು ನಿಜ ಕೈ || ೩ || 101 ||

**ಸಾವೇರಿ - ಏಕ**
ತಪ್ಪುಗಳ ಪಾಲಿಸಯ್ಯ | ಮೌನಿರಾಯ | ನಾನೇ |
ತಪ್ಪು ಮಾಡಿದಾತನಯ್ಯ | ಮೌನಿ ರಾಯ ||
ಅಪ್ಪಪ್ಪಾ ವಿರೋಧವಿಡಿದು | ಮೌನಿ ರಾಯ | ಲೇಖರ್ |
ತಪ್ಪದಸುರರ್ಗಟ್ಟಿ ಬರಲು | ಮೌನಿರಾಯ || ೧ ||

ಫುಲ್ಲನೇತ್ರೆ ತಡೆದಳಯ್ಯ | ಮೌನಿರಾಯ | ಕೋಪ |
ಭುಲ್ಲೈಸಿ ನಾನಿಂತು ಗೈದೆ | ಮೌನಿರಾಯ ||
ಹುಲ್ಲ ಕೊಡಲು ಸುರಭಿ ಕ್ಷೀರ | ಮೌನಿರಾಯ | ಕೊಡದೆ |
ಬಲ್ಲವ ನೀ ತಪ್ಪ ಕಾಯೆನೆ ಮೌನಿರಾಯ || ೨ || 103 ||

**ವಾರ್ಧಕ**
ಸಕಲ ಜಗಮಂ ಸಲಹುತಿರ್ದ ನೀ ಪುಣ್ಯ ಪಾ |
ತಕ ಭೇದಮರಿದು ರುದ್ರಾಕ್ಷಿಯಂ ಭಸ್ಮ ಧಾ |
ರಕರ ಪರಶಿವನೆಂದು ತಿಳಿದುಂ ನಿರಾಯುಧರನಿರಿವುದಲ್ಲೆಂದು ನೀನು ||
ಅಕಟೆಮ್ಮವಂ ಶರಣು ಪೊಕ್ಕುದಂ ಕಂಡು ನಾ |
ಚಿಕೆಯಲಾ ಪೆಣ್ಗೊಲೆಯು ಛಟಗೆಂದು ತಿಳಿದು ಹೇ |
ಸಿಕೆಯಿಲ್ಲದಿನಿತುಮಂ ಕೈಗೈದೆ ಭಾಪು ಬಲ್ಲಿದರರಸ ಹೋಗೆಂದನು || ೧ || 104 ||

**ಭಾಮಿನಿ**
ಕಂತುಪಿತ ನೀ ಬುದ್ಧಿ ಶೂನ್ಯದಿ |
ಕಾಂತೆಯನು ಕೊಂದೆಯಲ ನಡೆ ಜ |
ನ್ಮಾಂತರವ ಪಡೆ ಮತ್ಸ್ಯ ಮೊದಲಾಗೆಂದು ಶಾಪಿಸಿದ ||
ನಿಂತು ಮಿಗೆ ಹರಿ ಸುರರ ಕಳುಹಿ ಪು |
ರಾಂತಕನೊಳಾ ಜನ್ಮ ದಶಧೀ |
ಮಂತ ಮೂರ್ತಿಗಳಪ್ಪ ವರವಾಂತಬ್ಬಿಳೆಡೆಗಯ್ದ || ೧ || 105 ||

**ಕಂದ**
ಇತ್ತಲು ಚಿರ ಕಾಲದ ಮೇ |
ಲುತ್ತಮ ಮಂತ್ರವ ಹರನಿಂ ಪಡೆದಾ ಕವಿಯುಂ ||
ಮತ್ತೈತರೆ ತಮ ತಾ ಕಾ |
ಣುತ್ತಭಿವಂದಿಸಿ ಪೂಜಿಸಿ ಮಗುಳಿಂತೆಂದಂ || ೧ || 106 ||

**ಸಾಂಗತ್ಯ - ರೂಪಕ**
ಚಿತ್ತಾವಧಾನ ಯೋಗೀಂದ್ರ ನೀ ಪೋದ ಮೇ |
ಲಿತ್ತ ದೈತ್ಯರ ಸುರಕಾಯ ||
ಕತ್ತರಿಸಿದರೆ ಬೆಂಬೊತ್ತಿ ನಾವ್ ನಿಮ್ಮನು |
ಪೆತ್ತನ ವನಕೆಯ್ದವಯ್ಯ || ೧ ||

ನಿಟ್ಟಿಸುತೆಮ್ಮ ನಿಮ್ಮವ್ವೆ ಸುರರ ತಡೆ |
ಗಟ್ಟಲು ಹರಿ ಸುದರ್ಶನದಿ ||
ಕುಟ್ಟಿದ ತಲೆಯನೀಗೊಂದು ಯೋಚನೆ ಗುಡಿ |
ಗಟ್ಟಿದೆ ಕೇಳೆನ್ನ ಮನದಿ || ೨ ||

ಜಗ ದೈವದಾಧಾರ ದೈವ ಮಂತ್ರಾಧಾರ |
ಮಿಗೆ ಮಂತ್ರ ವಿಪ್ರರಾಧಾರ ||
ಬಗೆಯೆ ವಿಪ್ರರಿಗಜನಜಗೆ ವೇದಾಧಾರ |
ಸುಗುಣ ನೀನೇ ಬಲ್ಲೆ ಸಾರ || ೩ ||

ಸಿದ್ಧ್ಯಷ್ಟ ಸಿದ್ಧಿಸಿ ಸಿದ್ಧ ದೇವತೆ ವರ |
ಹೊದ್ದಿ ಕದ್ದೊಯ್ಯೆ ವೇದವನು ||
ಬಿದ್ದಪುದಖಿಳವು ಗೆದ್ದ ನಾನೀ ಯಾಗ |
ಬದ್ಧ ಮಾಡುವುದೆನಲವನು || ೪ ||

ತಡವೇಕೆ ಮಗನೆ ನೀ ತರಿಸು ಸಂಗ್ರಹ ಲೇಸು |
ಪಡೆವಡಾನಲ್ಲೆಂಬೆನೇನೊ ||
ಬಿಡು ಚಿಂತೆ ಯೆನೆ ಸನ್ನಹವ ಕೂಡಿಸಲು ಹೋಮ |
ತೊಡಗಿದ ಶುಕ್ರನೇನ್ ಬಲನೊ || ೫ || 111 ||

**ವಾರ್ಧಕ**
ಗುರುವಿನಭಿಮತದಿಂದ ಧೀಯಂ ಧರಿಸಿ ತಮ |
ಪರಮಾಭಿಚಾರಧ್ವರವ ಕುಂಡ ಮಧ್ಯದೊಳ |
ಗುರಿ ಜಠರಮಂ ಬಗಿದು ಪಟುಗೊಳಿಸಿಪರು ಶವದ ನರರಸ್ಥಿ ಸಮಿಧೆಯಿಂದ ||
ಕುರಿ ಕೋಣ ಡಿಂಡೀರ್ಮಜಗರದ ಮಾಂಸ ಚರು |
ವರುಣ ಜಲದಾಜ್ಯ ಧಾರಾರುಣಾಕ್ಷತ ಗಂಧ |
ವೆರೆಸಿ ಪೂರ್ಣಾಹುತಿಯ ಗೈದಾರತಿಯನೆತ್ತಿ ಮೆರೆದಿರಲ್ಕನುವಿನಿಂದ || ೧ || 112 ||

**ಭಾಮಿನಿ**
ತೆರಳಿ ಸಿದ್ಧೇಶ್ವರಿಯು ಕಾಮಿತ |
ವರವನಿತ್ತಡರಿದಳು ನಭವನು |
ಅರಿವಿಜಯನಾಗಿನ್ನು ನೀನೆಂದ್ಬರಸಿ ಕವಿ ನಡೆದ ||
ದುರುಳನಾಕರ್ಷಣ ಸುಮೋಹನ |
ಪರಮ ಸ್ತಂಭೋಚ್ಚಾಟನಾದಿಗ |
ಳಿರದ ಜಾನಿಸಿ ಕೆರಳಿ ಹೂಂಕರಿಸುತ್ತಲಿಂತೆಂದ || ೧ || 113 ||

**ಮಾರವಿ - ಏಕ**
ಬಗೆವೆನೆ ಇನ್ನು ತ್ರಿಜಗವನ್ನಜಗಿಜ |
ರುಗಳೇನ್ ಪಾಡೆನಗೆ ||
ಪಗೆಯವರಳಿಯಲಿ ಮುಗಿಪೆನಜಾಂಡವ |
ಖಗವೊಂದರ ಮೊನೆಗೆ || ೧ ||

ಕೇಂಕರಿಸುವ ದುರ್ಧರಗಳು ಕೇಕಿಯ |
ಹೂಂಕಾರಕ್ಕಿದಿರೆ ||
ಮಂಕುಗಳಮರರಾತಂಕವೆ ಎನಗಾ |
ಬಿಂಕ ಗೆಲುವೆ ನರರೆ || ೨ ||

ತಾರೆಗಳುದುರಲಿ ಜಾರಲಿ ನಭ ಶಶಿ |
ಸೂರಿಯ ಗ್ರಹ ವಿತತಿ ||
ಪಾರಲಿಯಂಬುಧಿಯಾರಲಿ ಬಿಡೆ ವಿ |
ಸ್ತೀರಿತ ಶರ ಶಕುತಿ || ૩ ||

ಅಣುವಿಂಗಣುವನ್ನೆಣಿಸಿ ವಿಧಿಯ ಮನ |
ಭಣಿತೆಯ ಕೈ ಮಾಡಿ ||
ಹಣಿದಾಕರ್ಷಣದಿಂದಾನ್ಯಾಯವ |
ಜಣುಗಿ ತೆಗೆದು ನೋಡಿ || ೪ ||

ವನರುಹ ಪೀಠಾದ್ಯನಿಮಿಷ ವರ್ಗವ |
ಘನ ಮೋಹನ ಶರದಿ ||
ಹನನಿಸಿ ಪೊಕ್ಕಾ ವನಧಿಯೊಳಿರಲಾ |
ರೆನಗಿದಿರೀ ಜಗದಿ || ೫ || 118 ||

**ವಾರ್ಧಕ**
ಎನುತಾ ತಮಾಸುರಂ ಕೆರಳಿ ಹೈರಣ್ಯಗ |
ರ್ಭನ ಕರ್ಣದೊಳ್ ಪೊಕ್ಕು ಹೃದ್ವನಜದೊಳ್ನಿಂದು |
ಘನವಾದ ಋಗ್ಯಜುಸ್ಸಾಮಾಥರ್ವಣವೆಂಬ ಶ್ರುತಿಗಳನ್ನಾಕರ್ಷಿಸಿ ||
ಮುನಿದುಪನಿಷತ್ತಾ ಷಡಾಂಗ ಶಾಸ್ತ್ರಂಗಳ |
ನ್ನನುಗೊಂಡು ತಾಂ ಪೊರಟು ಸನ್ಮೋಹನಾಸ್ತ್ರಮ |
ನ್ನನಿತು ಸಚರಾಚರಕ್ಕೆಚ್ಚುಜನ ನಿದ್ರಿಸುತ ಮನೆಗೈದನಂಬುರಾಶಿ || ೧ || 119 ||

**ಭಾಮಿನಿ**
ಕುಂಭಿನಿಯ ಸರ್ವಾರ್ಥ ಧಾತುಗ |
ಳೆಂಬುದಂ ಕೊಂಡಬ್ಧಿಯೊಳ್ ಜಲ |
ಸ್ತಂಭನಮಂ ಸಾಧಿಸಿದನಿನ್ನೇನ್ ಸಾಹಸಿಯೊ ತಮನು ||
ಅಂಬುಜಾಸನಗಾಯ್ತು ನಿದ್ರಾ |
ಡಂಬರವು ಸುರನಿಕರ ಮರಗಳ |
ಗೊಂಬೆಯಾಗಲು ಶಕ್ರ ವನಮಾಲಿಯನು ನುತಿಸಿದನು || ೧ || 120 ||

**ಶರಷಟ್ಪದಿ**
ಯಜ್ಞ ನಮೋ ಸ |
ರ್ವಜ್ಞ ನಮೋ ಕ್ರತು |
ಭುಜ್ಞ ಪ್ರಕೃತಿ ಸ್ವರೂಪ ನಮೋ ||
ಸುಜ್ಞಾನಪ್ರದ |
ಪ್ರಾಜ್ಞ ನಮೋ ವೇ |
ದಜ್ಞ ನಮೋ ಹರಿ ಓಂ ನಮೋ || ೧ || 121 ||

**ಭೈರವಿ - ಝಂಪೆ**
ಇಂತೆಂದು ತೊದಲ ನುಡಿ | ಯಿಂ ತೊಳಲಿ ಶಕ್ರನಿರೆ |
ಕಂತುಪಿತ ಮೈದೋರ | ಲಿಂತೆಂದ ನಮಿಸಿ || ೧ ||

ಈ ನಿಬಿಡ ಸುರ ತತಿಗಿ | ನ್ನೇನುಪಾಯವೊ ಕಾಣೆ |
ಮೌನಿಗತಿಯೇನಿದೆನೆ | ಶ್ರೀನಿಳಯನೆಂದ || ೨ ||

ಕಂದ ನೈಮಿತ್ತಿಕವಿ | ದೊಂದು ಬ್ರಹ್ಮ ಪ್ರಳಯ |
ಬಂದುದೈ ತ್ರೈಲೋಕ | ಕಿಂದು ಸಂಕ್ರಂದ || ೩ ||

ಹೊಂದಿ ನಿದ್ರೆಗೆ ಕಮಲ | ಕಂದನೊರಗಿದ ವೇದ |
ವೃಂದ ಶಕುತಿಯ ತಮ ಮ | ದಾಂಧ ಕದ್ದೊಯ್ದ || ೪ ||

ಝಷ ರೂಪದಿಂದವನ | ಕಸಿದು ತಹೆ ವೇದವಂ |
ದುಸುರಿ ನಭದೊಳ್ ನಿಂತ | ಹುಸಿ ದಿಟದ ಜನಕ || ೫ || 126 ||

**ಭಾಮಿನಿ**
ಅವನಿನಾಥ ಶಿಖಂಡ ಶೇಖರ |
ಕುವಲಯಾಕ್ಷ ಪದಾಬ್ಜ ಮಧುಕರ |
ದ್ರವಿಡ ಭೂ ಸತಿ ವೃತ್ತ ಕುಚ ಕುಂಕುಮ ವಿಲೇಪನನ ||
ಅವನಿಪತಿ ಸತ್ಯವ್ರತಾಖ್ಯನು |
ಕವಿ ಭಟಾದಿ ಸಮಸ್ತ ವಿಭವದಿ |
ತವಕದಿಂದೋಲಗಿಸುತಿತ್ತಲು ನುಡಿದನೊಂದು ದಿನ || ೧ || 127 ||

**ಸೌರಾಷ್ಟ್ರ - ತ್ರಿವುಡೆ**
ಸಕಲ ಸಾಮ್ರಾಜ್ಯಂಗಳಾಳಿದೆ |
ಸಕಲಸಖ ಕುಮುದೇಂದುವೆನಿಸಿದೆ |
ಸಕಲ ಯಜ್ಞವ ನಡೆಸಿದೆನು ಭಟ | ನಿಕರ ಕೇಳಿ || ೧ ||

ವ್ಯಥಿಸಿ ಕೊಟ್ಟವನಲ್ಲ ದಾನವ |
ಮಥಿಸಿ ಕೊಟ್ಟವನಲ್ಲ ಧರ್ಮವ |
ರಥಿಕನೊಡನಿದಿರಾಗಿಯಂಕದಿ | ಶಿಥಿಳಿಸಿಲ್ಲ || ೨ ||

ಯಾತಕೋ ನಾ ಕಾಣೆ ಬಡವರ |
ತಾತನೆಂಬ ಸುಧಾಂಶು ಮೈದುನ |
ನೋತುದಿಲ್ಲೆನ್ನಕ್ಷಿಗೇನೈ | ನೀ ತಿಪಿದರೆ || ೩ || 130 ||

**ಭಾಮಿನಿ**
ಏನಿರೈ ನೀವ್ ಕಾಣೆರೇಯಹ |
ಭಾನು ಮಧ್ಯಾಹ್ನದೊಳು ತೊಳವ ನ |
ಮ್ಮೀ ನದೀಕೃತ ಮಾಲೆಯೊಳು ಹರಿಗರ್ಘ್ಯಗಳ ಕೊಟ್ಟು ||
ತಾನು ಬಹೆನೆಂದಯ್ದಿ ಬಂದು ಮ |
ಹಾನುಭವ ತಿಲಕಂಗಳಿಟ್ಟು ವಿಧಾನದಿಂ ಕಣ್ಮುಚ್ಚಿ ಹರಿ ನುತಿಗೈದ ಕುಂಬಿಟ್ಟು || ೧ || 131 ||

**ಬೇಹಾಗ್ - ಏಕ**
ಶ್ರೀಶ ಪರೇಶ ದಿನೇಶ ಪ್ರಕಾಶ ಶ್ರೀ |
ವಾಸುದೇವ ನಾರಾಯಣ ||
ಕ್ಲೇಶನಾಶ ವಿಶ್ವೇಶ ಕೃಪಾನಿಧಿ |
ಶೇಷಶಾಯಿ ನಾರಾಯಣ || ಶ್ರೀಶ || ಪ ||
ಅಂಗಜತಾತ ವಿಹಂಗವರೂಥ ರ |
ಥಾಂಗ ಪಾಣಿ ನಾರಾಯಣ ||
ಗಂಗಾಪಿತ ಮೇಘಾಂಗ ನಮೋ ಹರಿ |
ರಂಗನಾಥ ನಾರಾಯಣ || ಶ್ರೀಶ || ೧ ||

ಧರೆ ಜಲ ಶಿಖಿ ನಭ ಮರುತಂತರ್ಗತ |
ಪರಮ ಪುರುಷ ನಾರಾಯಣ ||
ಅರಿಯೆ ಮರೆಯೆ ಶ್ರೀ ದೊರೆಯೆ ಪಾಪಾತ್ಮ ನಾ |
ಖರೆ ಪೊರೆ ಶ್ರೀ ನಾರಾಯಣ || ಶ್ರೀಶ || ೨ ||

ಕುಟಿಲ ಕಪಟ ಸಟೆ ಮಠದಿ ಪಠಿಸುವೆನು |
ದಿಟ ಎನಗೊಲಿ ನಾರಾಯಣ ||
ನಿಟಿಲ ತಟಲ ಸಿತ ಪಟು ಮೃಗ ಮದ ತಿಲ |
ಕಟ ಕಟಿಕ್ಕಯ ನಾರಾಯಣ || ಶ್ರೀಶ || ೩ ||

ಬಡವರ ಭಾಗ್ಯದ ಕಡು ಹೊರೆ ನೀನಲ |
ಕಡಲ ಶಯನ ನಾರಾಯಣ ||
ಕೊಡುವ ಕೊಳ್ಳುವಾ ಒಡೆಯ ನೀನಲ್ಲವೆ |
ಜಡಜನಾಭ ನಾರಾಯಣ || ಶ್ರೀಶ || ೪ ||

ದೀನೋದ್ಧಾರಕ ನೀನಲ್ಲವೆ ಗುಣ |
ಧೇನು ನಮೋ ನಾರಾಯಣ ||
ಏನಾದರು ಪದ ಧ್ಯಾನವ ಬಿಡೆ ಪೊರೆ |
ಶ್ರೀನಿವಾಸ ನಾರಾಯಣ || ಶ್ರೀಶ || ೫ || 136 ||

**ಭಾಮಿನಿ**
ನೃಪತಿ ತರ್ಪಣವಿಂತು ಕೊಡುತಿರೆ |
ಕೃಪೆಯೊಳಾ ಹರಿ ಶಫರಿ ರೂಪದಿ |
ವಿಪುಲಮತಿಯ ಕರಾಂಜಲಿಗೆ ಬರೆ ಜಲಕೆ ಬಿಡಲಾಗ ||
ಕೃಪಣ ಜನ ವತ್ಸಲನೆ ಎಲೆ ಭೂ |
ಮಿಪ ಶಿರೋಮಣಿ ಶರಣು ಹೊಗೆ ನಿ |
ಷ್ಕೃಪೆಯೊಳುಳಿವುದು ನೀತಿಯೇ ಎನೆ ಕೇಳ್ದನಾ ಕೂಗ || ೧ || 137 ||

**ಜಂಜೂಟಿ - ಏಕ**
ಕಣ್ಣ ತೆರೆದು ನೃಪತಿ | ಕಣ್ಣ ಬಿಟ್ಟಳಲುತಿರುವ |
ಹೆಣ್ಣು ಮಕರಿಯ ಚಂದ ನೋಡುತೆತ್ತಿ ||
ಮಿಣ್ಣನೆ ಹಿಡಿದುಕೊಂಡು | ಬಣ್ಣದ ತಂಬಿಗೆಯೊಳ |
ಗಣ್ಣ ನೀನಿರುವದೆಂದು ಮಾಡಲರ್ತಿ || ೧ ||

ಮತ್ತೆಯಾ ಶಫರಿ ಕ್ಷಣ | ಹೊತ್ತಿಲಿ ಬೆಳೆದು ಕೂಗಿ |
ತೆತ್ತಿಕೋ ಭೂಪ ಜಾಗ ಸಾಲದೆಂದು ||
ಮತ್ತವ ತೆಗೆದು ಮೀನ | ಹೊತ್ತೊಂದು ಕೊಡದ ಒಳಗೆ |
ನಿತ್ತಿರು ಸುಖದೊಳೆಂದು ಪೇಳಲಂದು || ೨ ||

ಓವೋ ಭೂವರ ರನ್ನ | ನೀವೊಲಿದೆತ್ತೊ ಎನ್ನ |
ಈವಳಿಕ್ಕಟ್ಟು ನೋಡೊ ಏನುಪಾಯ ||
ಕಾವ ದೊರೆಯೆಯೆನಲು | ಬಾವಿಯೊಳಿರುಯೆನುತ |
ಆ ವಿಭು ತಂದು ಬಿಡಲು ಮೀನುರಾಯ || ೩ ||

ಬೆಳೆದು ಕೂಗಲು ಕಂಡು | ಕೊಳಕೆ ಹೊತ್ತಿಡಲಂದು |
ಘಳಿಲನೆ ಕೂಗಲದರ ಎತ್ತಿ ತಂದು ||
ಹೊಳೆಗೆ ಬಿಡಲು ಕಾಯ | ಬೆಳೆದರಚಲು ಕರುಣಿ |
ಇಳೆಯ ವಲ್ಲಭ ದಣಿದು ನಿತ್ತು ನಿಂದು || ೪ ||

ವಾರಿಧಿಯೊಳಗಿಡಲು | ಮೇರು ಸಮಾನ ಗಾತ್ರ |
ತೋರುವ ಸ್ವರ್ಣವರ್ಣ ಝಷವ ಕಂಡ ||
ಧಾರುಣೀಶ್ವರ ಬೆಚ್ಚಿ | ಕಾರಣೀಕನೆ ಮೆಚ್ಚಿ |
ಯೀ ರೂಪನಾರೆನುತ್ತ ಬೆಸಗೊಂಡ || ೫ || 142 ||

**ಮಧ್ಯಮಾವತಿ - ತ್ರಿವುಡೆ**
ತ್ರಿಣಯನೋ ಸಾಕ್ಷಾತ್ ನಾರಾ |
ಯಣನೊ ತಜ್ಜಠರಾಂಬುಜದ ಮ |
ನ್ನಣೆಯ ಮಗನೋ ಮತ್ಸ್ಯರೂಪದಿ |
ಸೆಣಸಲ್ಯಾಕೈ ತನ್ನೊಳು | ಪೇಳ್ ದಯಾಳು || ೧ ||

ಏನು ಕಾರಣ ಮತ್ಸ್ಯನಾದೆ ಮ |
ಹಾನುಭಾವನೆ ಕರುಣೆಸೆನಗೆ ನಿ |
ಧಾನವನು ನಾ ನಿನ್ನ ಕಿಂಕರ |
ನೀನು ದೀನೋದ್ಧಾರಕ | ಲೋಕ ಜನಕ || ೨ ||

ಎಂದು ಸತ್ಯವ್ರತ ಮಹೀಪತಿ |
ಮುಂದೆ ಮೈಯಿಕ್ಕಿರಲು ನುಡಿದನು |
ಕಂದ ಕಾರಣ ಮತ್ಸ್ಯ ನಾನು ಮು |
ಕುಂದನಂಜದಿರೆಂದನು | ಕಾಮಪಿತನು || ೩ || 145 ||

**ಭಾಮಿನಿ**
ಮಗನೆ ಕೇಳೇಳನೆಯ ದಿನದೊಳು |
ಜಗವಿದಳಿವುದು ಭೂ ತ್ರಿವಿಷ್ಟಪ |
ಗಗನವೆಂಬಿವು ಜೀವಚಯ ಸಚರಾಚರವು ಸಹಿತ ||
ನೆಗೆದು ಸಪ್ತ ಸಮುದ್ರವೊಂದೇ |
ಬಗೆಯದೇಕಾರ್ಣವವದಾಗಲು |
ಹಗಲ ನಿದ್ರೆಗೆ ಕಮಲಭವನಂಘ್ರೈಸುತಿಹನತ್ತ || ೧ || 146 ||

**ವಾರ್ಧಕ**
ನಿನ್ನನದರೋಳಾಯಲೆಂದು ಪುಟ್ಟಿದೆ ಕಂದ |
ನಿನ್ನೆಡೆಗೆ ಬಹದೊಂದು ನಾವೆಯದರೊಳಗತ್ಯು |
ತ್ಪನ್ನೋಷಧಿಗಳೊಡನಡರು ವಾಸುಕಿಯು ಬಪ್ಪನನ್ನೆಗಾ ದಾಮದಿಂದ ||
ಎನ್ನ ಶೃಂಗಕೆ ಕಟ್ಟು ಸಪ್ತ ಋಷಿಗಳ ಕಿರಣ |
ದಿಂ ನಲಿವೆನೆಳೆದುಂದಿಗಿಂದಪ್ಪುದುರು ಕಜ್ಜ |
ವೆನ್ನುತಡಗಲ್ ನೃಪಂ ದರ್ಭಾಸ್ತರಣ ಬಲಿದು ಸನ್ನುತಿಸೆ ಹರಿಯ ಪಾದ || ೧ || 147 ||

**ಭಾಮಿನಿ**
ಇತ್ತ ಬಂದುಣಿಗುರುಳ ಸುತ್ತಿ ಸೊಂ |
ಪೆತ್ತ ನಿಭೃತ್ ಸಶೃಂಗದಿಂ ಪಣೆ |
ಗೊತ್ತಿರುವ ತ್ರೈರೇಖ ಘನಸಿಂಧೂರದಿಂ ಶೋಭೆ ||
ಪೊತ್ತು ಥಳಥಳಿಪಂಗ ಕಾಂತಿಯ |
ಸುತ್ತ ಯೋಜನ ಲಕ್ಷ ಗಣನೆಯೊ |
ಳ್ಮಿತ್ತ ಪುರುಷೋತ್ತಮನ ಮತ್ಸ್ಯಾಕೃತಿಗೆ ಶರಣೆಂಬೆ || ೧ || 148 ||

**ಕಂದ**
ಮತ್ತಾ ಮೀನಾಕಾರದ |
ಚಿತ್ತಜ ಪಿತ ಬರೆ ಭುಲ್ಲೈಸುತಲಂಬುಧಿಯುಂ ||
ಮತ್ತಲ್ಲೋಲಕಲ್ಲೋಲದ |
ಬಿತ್ತರದಿಂದೇರಿರ್ದು ಮಹಾತ್ಮನೊಲಿರ್ದಂ || ೧ || 149 ||

**ಕಾಂಭೋದಿ - ಝಂಪೆ**
ಭೋರೆಂಬ ನಿಸ್ವನದಿ ಚೀರುತಲೆ ಕರಗಳಿಂ |
ಬಾರೆಂಬ ನನ್ನೆಯಿಂದಯ್ದಿ ||
ನೀರ ನೊರೆ ಮುತ್ತುಗಳ ಸಾರಿಯಿತ್ತಳಿಯಗುಪ |
ಚಾರಿಸುವನೆನಲೆಸೆದ ವಾರ್ಧಿ || ೧ ||

ಆವಗಂ ಮಕರ ಕರ್ಕಟ ಮೀನ ಬೆರೆದಿಹುದು |
ಭಾವಿಸಲು ಕಲ್ಲ ರಾಶಿಗಳು ||
ಆವು ಪುಷ್ಕರಗಳಿಂಗಾವಾಸ ನೋಡೆ ದಿಟ |
ದೇವ ಪುರವಲ್ಲವಿದು ಕಡಲು || ೨ ||

ಇಂತು ಪಾರಾವಾರ ಮುಂತೆಸೆಯೆ ಶಫರಿ ರೂ |
ಪಾಂತ ಶ್ರೀಧವ ಕಂಡು ನಿಂದು ||
ನಿಂತಿರಿಸಿದಂ ರಿಪುವನಂತಸ್ತ ಬೇರೆಯಿವ |
ನಂತಹಿತ ಶತ್ರುವಿಲ್ಲೆಂದು || ೩ ||

ಮುನ್ನಿವನ ಬಿಡೆನೆಂಬೋಲ್ಮುನ್ನೀರ ಬಡಿದು ಖಳ |
ನನ್ನರಸಿ ಕಂಡು ಕೆಣಕಿದರೆ ||
ಭಿನ್ನಿಸುವ ಹರಿಗಂಜಿ ಮುನ್ನಯ್ದಿ ನೀಲಾದ್ರಿ |
ಯುಂ ನೆಲಸಿತೆನುವವೋಲರರೆ || ೪ ||

ಉನ್ನತ ಬಲಂ ಚಲಿಸಿದಿನ್ನಿರಲು ತಿರುಗಿ ಖಳ |
ಕೆನ್ನೆಯಂ ತುಳಿದುಗ್ರದಿಂದ ||
ಕುನ್ನಿ ದೈವದ್ರೋಹಿ ಇನ್ನು ಜಲ ಜಪವನುಳಿ |
ದೆನ್ನೊಳಾಹವಕೆ ನಿಲ್ಲೆಂದ || ೫ ||

ನುಡಿಯ ಕೇಳ್ದುದ್ದನಾ ವಡಬನೆದ್ದಂತೆ ಕ |
ಣ್ಗೆಡಿಗೆದರುತಟ್ಟಹಾಸದಲಿ ||
ನಡುಗಲೇಣ್ಗೆಸೆ ನುಡಿದ ಫಡ ಎನ್ನ ಕೆಣಕಿ ಕೈ |
ವಿಡಿ ಸಾವ ಮೀನೆನಲ್ ಕೇಳಿ || ೬ ||

ಅನಿಮಿಷ ವಿರೋಧದಿಂದನಿತು ವೇದವ ಕದ್ದು |
ಮನೆಗೈದು ಸುಖದೊಳಿರಲಿಲ್ಲ ||
ಅನಿಮಿಷರ ನಾವ್ ಬಿಡೆವು ದನುಜ ಭಟನಹಡೆ ಕಲಿ |
ತನವ ತೋರುವುದೆಂದ ಕನಲಿ || ೭ || 156 ||

**ಕಂದ**
ಕಡಲೇ ಪೊಡವಿಯು ನಡೆವಡೆ |
ಕಡುಹೆಂತೊ ಸುಮಂತ್ರದ ಖಳಕೇಳ್ದಸಿ ಝಡಿದುಂ ||
ಕಡೆ ಮೃಡನೋಲ್ ಹುಂಕೃತಿಯುಂ |
ಗೊಡುತೆಂದಂ ಮಕರಿಗೆಯುಸುರೋಳ್ವೊಗೆ ಸಿಡಿಯಲ್ || ೧ || 157 ||

**ಭೈರವಿ - ಅಷ್ಟ**
ಫಡ ನೀರ ಮನೆ ಹುಳವೆ ನೀನ್ಯಾಕೆನ್ನ |
ತುಡುಕಿ ಜುಲ್ಮೆಯ ನುಡಿವೆ ||
ಕಡು ಜೀವ ರಾಶಿಗಳೆಡೆಯಿಲ್ಲ ಬಂದೆಯ |
ನುಡಿ ನೀನು ಹೊಸಬನಲ್ಲೈ || ೧ ||

ದುರುಳ ಕೇಳಮೃತದಲಿ | ಹಾಲಾಹಲ |
ಬೆರಸಿದ ತೆರದಿಂದಲಿ ||
ನೆರೆ ಮೀನ್ನಳಿರದೀ ಮಂದಿರಗೈದ ಹೊಸಬ ನಿ |
ನ್ನರಿಯೆ ನಾ ಬಂದೆ ಕೇಳೈ || ೨ ||

ಮತಿಗೇಡಿ ಜಲಚರನೆ | ಎನ್ನ ವಿಚಾರ |
ಸ್ಥಿತಿ ಯಾತಕರಿಯ ಶಾನೆ ||
ಕತಲುವ ಪತಲುವ ಹತಲುವ ತ್ರೈಲೋಕ |
ಪತಿನಾನೆಲ್ಲಿರ್ದರೇನು || ೩ ||

ಚೋರ ವಿದ್ಯವ ಸಾಧಿಸಿ | ಬ್ರಹ್ಮನ ವೇದ |
ಡೋರುಗಳದು ಸಾಹಸಿ ||
ನೀರ ಪೊಕ್ಕರೆ ಭಂಡ ಮೂರು ಲೋಕೇಶನೆ |
ಕಾರಿಪೆ ನಿಲ್ ರಕ್ತವ || ೪ ||

ಹದನವರಿತೆ ಲೇಸು | ಬಂದೆಯ ನೀನೀ |
ಗದ ಕೊಂಡೊಯ್ಯಲು ಶಭಾಸು ||
ತ್ರಿದಶರ ಸದನದ ಮುದಿ ನಾಯಿ ಸದೆಗ ನೀ |
ಚಿದಿಗಾರರರಸನಲ್ಲೈ || ೫ ||

ತ್ರಿದಶರೆಂದೇ ನೆನಗೆ | ಭಕ್ತರ ಮನೆ |
ಸದನವು ನೀನಂದಿಗೆ ||
ಬದುಕಿದೆ ಭೃಗು ಸತಿ ಕದನ ಚದಿಯೊಳಿಂದು |
ಒದರೆ ನಾಯಿಂದತ್ತಲು || ೬ ||

ಹೆಂಗೊಲೆಗಳುಕದವ | ಎನ್ನೊಳು ರಣ |
ರಂಗಕಯ್ದೆಯ ಮಾಧವ ||
ಅಂಗಂಗಳನು ಕೊಚ್ಚಿ ಹಿಂಗದೆ ಭೂತಗ |
ಣಂಗಳಿಗುಣಿಸುವೆನು || ೭ || 164 ||

**ಸೌರಾಷ್ಟ್ರ - ತ್ರಿವುಡೆ**
ಮದಮುಖನೆ ಒದರಿದರೆ ಪಲ್ಸದೆ |
ದುದುರಿಸುವೆನುಗುಳುಗುಳು ವೇದವ |
ಕದನದಲಿ ಭೃಗು ಸತಿಯ ಗತಿ ಕಾಂ | ಬುದಕೆ ಮೊದಲೆ || ೧ ||

ಬಾಲದಣ್ಣ ನೀನಾಗಿ ಸಿಕ್ಕಿದೆ |
ನೀಲ ಮೇಘ ಶ್ಯಾಮ ನಿಲ್ ನಿಲ್ |
ನಾಲಿಗೆಯ ಕೊಯ್ದಿಡುವೆ ನಿನ್ನನು | ಶೂಲದೊಳಗೆ || ೨ ||

ಉದ್ದುರುಟು ನುಡಿವವನ ಖಲನಪ |
ಶುದ್ಧ ನಾಲಿಗೆ ಖಂಡಿಸದೆ ಬಿಡೆ |
ಕದ್ದ ಕಳ್ಳನ ಶೂಲಕೇರಿಪು | ದಿದ್ದುದಲ್ಲೆ || ೩ || 167 ||

**ಭಾಮಿನಿ**
ನುಡಿಗೆ ನುಡಿ ಹೆಚ್ಚಿದುದು ಕಣಕೆಂ |
ಪಡಿಸಿ ಹಾರಲ್ ವಿಸ್ಫುಲಿಂಗಗ |
ಳೊಡನೆ ಹೂಂಕರಿಸಿದನು ಘನ ಬ್ರಹ್ಮಾಂಡ ಘಟ ಬಿರಿಯೆ ||
ಕಡಿದಿಡುವ ಝೋಂಪಿಸುವ ತಡ ತಡ |
ತಡೆದ ಕೇಶಾ ಕೇಶಿಯಿಂ ಮಿಗೆ |
ಕಡು ಕಠಿಣ ಬಲ ಸೆಣಸಿ ಪುನರಪಿ ನುಡಿದ ಹರಿಯುಲಿಯೆ || ೧ || 168 ||

**ಶಂಕರಾಭರಣ - ಮಟ್ಟೆ**
ಪೂತು ಮಝರೆ ಮತ್ಸ್ಯ ಕೇಳ್ ಜೀ | ಮೂತ ಹತಿಯಲಿ |
ವಾತ ನೋವದುಂಟೆ ನಿನ್ನ | ಬೂತು ಬಲದಲಿ ||
ಕಾತರಿಪೆನೆ ನಾನು ಗುರು ಬ | ಲಾತಿಶಯದಲಿ |
ಘಾತಿಸುವೆನು ನಿನ್ನನೆಂದ | ಡಾತ ನಗುತಲಿ || ೧ ||

ಘಡಘಡಲೆ ಕಳ್ಳುಗ್ಗಡಿಕ ಮುಚ್ಚೊ | ನುಡಿವ ಬಾಯನು |
ಜಡಜ ಮಿತ್ರಗಿದಿರೆ ತುಹಿನ | ಕಡುಗಿ ನಿನ್ನನು ||
ಬಡಿವ ಎನ್ನ ತಡೆವ ಶುಕ್ರ | ಕಡು ಬಲಾಢ್ಯನು |
ಒಡನೆ ಬರಲಿ ಕರೆಸು ಕರೆಸು | ಮಡಗೆ ನಿನ್ನನು || ೨ ||

ಇತ್ತ ಕೇಳೊ ಸುರೆಯ ಕುಡಿವ | ಹೊತ್ತಿನೊಳು ಭಲಾ |
ಉತ್ತಮವಲ ಮೀನ್ ಪದಾರ್ಥ | ಪಥ್ಯವೆಮಗೆಲ್ಲ ||
ಕುತ್ತಿ ಕೊಂದು ನಿನ್ನನಾಳಿಂ | ದತ್ತ ಖಳ ಬಲ |
ಮೊತ್ತ ಪತ್ನಿ ಪುತ್ರರೊಡನೆ | ನಿತ್ತು ಸವಿವೆಲ || ೩ ||

ಕತ್ತೆಯಂತೆ ಕೂಗ ಬೇಡಿಂ | ದಿತ್ತಲೆನ್ನೊಳು |
ನಿತ್ತು ಬದುಕಿ ಮತ್ತೆ ಬಗುಳೊ | ಮಿತ್ತು ಬಲಗಳು ||
ಅತ್ತಲದಕೊ ಕಾವರ್ನಿನ್ನ | ನೆತ್ತಿ ಬರಗಳು |
ಬತ್ತಿತೆಂದು ಪೊಯ್ದ ಹರಿ ಹಾ | ರುತ್ತ ಭರದೊಳು || ೪ ||

ಹರಿಯ ಹತಿಗೆ ನೂರು ಬಿಲ್ಲಂ | ತರಕೆ ಸಿಡಿದನು |
ದುರುಳ ಮರಳಿ ಕೆರಳಿ ತಿವಿಯ | ಸುರಕೆ ಜಡಿದನು ||
ಭರಕೆ ಶ್ರೀಶನೈದು ಕೋಲ್ವಿಂ | ಜರಿದಡಸುರನು |
ಶರಧಿಯೋಳ್ಮುಳುಂಗಿ ಸಾರ್ದ | ನಿರದೆ ಪುರವನು || ೫ || 173 ||

**ವಾರ್ಧಕ**

ಸಾಮಾದಿ ವೇದಂಗಳನ್ನೊಯ್ದರಿಂದಿವಗೆ |
ಸೋಮಕಾಸುರನೆಂಬ ಗುಣನಾಮವಾಯ್ತಾ ನಿ |
ಸ್ಸೀಮ ಧೇನುಕನನುಜ ಸಚಿವ ವಿದ್ರಾವಣರು ಮೆರೆದಿರಲ್ಕತ್ತ ಪುರದಿ ||
ಭೀಮ ಬಲನೀತ ಮೈದೋರ್ದು ತದ್ವೃತ್ತಾಂತ |
ವಾ ಮದಾಂಧರಿಗುಸುರಲೇಳ್ವೊರು ಪದ್ಮ ಬಲ |
ಸ್ತೋಮದಿಂದರಸನೊಡನಬ್ಧಿಯಂ ಮುತ್ತಿದರ್ ಫಣಿ ಕೂರ್ಮರಳುಕೆ ಭರದಿ || ೧ || 174 ||

**ಆರ್ಯ ಸವಾಯ್ - ಏಕ**

ದಂತಿ ರಥಾಶ್ವ ಬಲಂ ತವೆ ಬರೆ ಘನ |
ವಂತರು ಧೀವರ ಲಕ್ಷಬಲ ||
ತಂತಮ್ಮಾಯುಧ ಕುಂತ ಬಲೆಗಳಿಂ |
ಮುಂತಯ್ದಿತಾವ್ ತಮ್ಮೊಳೆಂದರಲಾ || ೧ || 175 ||

**ಲಾವಣಿ - ಏಕ**

ಕುಟ್ಟೀಯಣೆರ ಪಾಳೆ | ಚಟ್ಟೆ ಟೊಪ್ಪಿ ಕುಪ್ಪಾಯೌಡೆ |
ತೊಟ್ಟರಲ್ಲೊ ತಂಬಿರಾನೆ | ಪುದಿಯ ಮೀನ್ನೊಲ್ಲ ||
ಇಟ್ಟಿ ಮೀನು ಯಡ್ಡೊ ಬೆಂಬಾ | ರೊಟ್ಟಿ ಚಟ್ಟಿ ಚುಕ್ಕು ಬೇಣು |
ಗಟ್ಟಿಂಡೇ ಜಳ್ಳಬಲೇ ನೋಕು ಪೋನ್ನೊಲ್ಲ್ಯ || ೧ ||

ಅಪ್ಪಾ ನಾ ಬನ್ನೆಯಣಿ ನಿ | ಯಪ್ಪೊಳೆ ಬಲಿಕ್ಕನೆನ್ನೆ |
ಅಪ್ಪೊ ಬೆಚ್ಚಿ ಬೆಲಿಯ ತೋಣಿ | ಜಳ್ಳಂಗೊಂಡು ||
ಇಪ್ಪೊ ಬೇಂಡೆ ಗಾಳ ಬಟ್ಟಿ | ತಪ್ಪಿ ಪೋಯಿತೋಮ ಸೆಟ್ಟಿ |
ಯಪ್ಪೊ ಬನ್ನು ಪುದಿಯ ಮೀನ್ | ಯನ್ನ್ ಕಂಡು || ೨ ||

ಯೌಡೇ ಕಾಂತ ಪೂಜಾರಿ | ಯೌಡೇ ಸುಬ್ಬ ಪೂಜಾರಿ |
ಯೌಡೇರ ತುಕ್ರ ಮೋಂಟಿ ಚೆಟ್ಟಿಯಾರ್ ||
ಇವುಡೇಮೆ ದೌಡೇಮೆ | ತೌಡೇಮೆಯನ್ನುತಾಲಿ |
ದೌಡಿನಿಂದ ಬಂದರು ಅಂಬಿಗರು || ೩ || 178 ||

**ಕಂದ**

ಕಂಡಾ ಬೆಸ್ತರ ಬಲಮಂ |
ಚಂಡ ಪರಾಕ್ರಮ ಧೇನುಕರ್ಭೋಯೆಂದೆನುತಲ್ ||
ಕೊಂಡಿಸಿ ಖೇಟಕಗಳ ಜಲ |
ಷಂಡ ವಿಭೇದಿಸಿ ಕಂಡರಿ ಝುಷಮಂ ನುಡಿದರ್ || ೧ || 179 ||

**ಮಧ್ಯಮಾವತಿ - ತ್ರಿವುಡೆ**

ಇಡಿರೊ ಬಲೆಗಳ ಪಿಡಿರೊ ಮೀನ್ಗಳ |
ತೊಡಿರೊ ಗುರಿಗಳ ಬಿಡಿರೊ ಶರಗಳ |
ಕಡಿರೊ ಕೊಡಿರೋ ಹಿಡಿರೊ ಬಲವೆಂ |
ದಡಿಗಡಿಗೆ ಗೋಳ್ಗುಟ್ಟುತ | ಬಂದರಿತ್ತ || ೧ ||

ಸ್ಯಂದನದ ನಿಧಿಯೊಳ್ಕೆಲಂಬರು |
ಸ್ಯಂದನಾಶ್ವ ಮದೇಭ ಬಲ ಭೋ |
ರೆಂದು ನೂಕಿದು ತಾಕಿದರು ಖಳ |
ವೃಂದ ಹೊಕ್ಕುಳ ಹೂವನ | ನುಡಿಯಲೇನ || ೨ ||

ಮುಕ್ಕುರುಕಿ ಗುಹಿಲಿಕ್ಕೆ ರಕ್ಕಸ |
ರೆಕ್ಕಸಂ ಬಡೆ ಸಿಕ್ಕಿದನು ಕಂ |
ಡಕ್ಕಟಾರೋ ಕೊಲ್ಲಿರೆನೆ ಭಾ |
ರಕ್ಕೆ ಕುಕ್ಕಿದುದಾಬಲ | ಚೊಕ್ಕಟವಲಾ || ೩ || 182 ||

**ವಾರ್ಧಕ**
ಡೊಕ್ಕರಿಸಿ ಮೀನ್ ಪೊರಳೆ ಸೊಕ್ಕಿದರ್ ಸಿಕ್ಕಿದರ್ |
ಕುಕ್ಕುರಿಸಿ ತನು ರಕ್ತ ಕಕ್ಕಿದರ್ ಕೊಕ್ಕಿದರ್ |
ವೆಕ್ಕಸದಿ ಬಲಕೋಟೆ ಇಕ್ಕಿದರ್ ಇಕ್ಕಿದರ್ನೊಕ್ಕಲಕ್ಕಿವನೆಮನೊಳು ||
ತಕ್ಕ ಸುಸ್ಥಳದೊಳ್ಪಣಕ್ಕಿದರ್ ಮಿಣ್ಕಿದರ್ |
ಮಿಕ್ಕ ಭಟರಂಜಿ ಸುಯ್ಯಿಲ್ಲಿಕ್ಕಿದರ್ ಗುಕ್ಕಿದರ್ |
ಯಕ್ಕ ಸಕ್ಕಂಗಳಿಂ ಬಿಕ್ಕಿದರ್ ದಕ್ಕಿದರ್ ರಕ್ಕಸಾರಿಯ ರಣದೊಳು || ೧ || 183 ||

**ಭಾಮಿನಿ**
ಅರರೆ ಕೌತುಕವಾಯ್ತು ಖಳಬಲ |
ತರಿದ ಹೊಸ ಕುಮ್ಮರಿಯೊ ಜಾಜಿನ |
ಗಿರಿಯೊ ಜರ್ಝರ ನಿಧಿಯೊ ನಿಧಿಯೋ ವಿಧಿಯೊ ಬೆರಗೆನಲು ||
ಧುರ ಭಯಂಕರವಾಯ್ತು ಕಂಡಾ |
ಪರಿಭವವ ವಿದ್ರಾವಣಾಸುರ |
ಕೆರಳಿ ಕೋಪಾಟೋಪದಿಂದರಿಗೆಂದ ಮಾತುಗಳ || ೧ || 184 ||

**ನಾದನಾಮಕ್ರಿಯೆ - ಅಷ್ಟ**
ಆರೆಲೊ ಮೀನಾಗಿ ಬಂದವ | ಖಳ |
ವಾರವ ರಣದಲ್ಲಿ ಕೊಂಡವ ||
ಕಾರಿಪೆ ನಿಲ್ ನಿನ ರಕ್ತವ | ಕಾವ |
ರಾರು ನಿನ್ನನು ಬಿಡು ಬಿಂಕವ || ೧ ||

ಯಾತಕಿಂತೆಂಬೆಯ್ಯೆ ಎಲೆ ಭ್ರಾಂತೆ | ಮೃಗ |
ಪೋತವು ಬಲೆಯೊಳು ಬಿದ್ದಂತೆ ||
ನಾ ತೊಳಲುವೆ ನಿಮ್ಮೊಳೋರಂತೆ | ಕಾವ |
ಧಾತ ನೀನೆಂಬೆ ನಾ ಬಾ ಮುಂತೆ || ೨ ||

ಕಲಿಕೆಯ ನುಡಿಗಳ ಬೀರುವೆ | ರಣ |
ದಲಿ ಬಲಗೈ ಮಿತಿ ಮೀರುವೆ ||
ತಲೆಗೊಬ್ಬನೀಕ್ಷಣ ಕಳಿಸುವೆ | ಮಗು |
ಳೆಲು ಮಾಂಸ ಕಟಿಕಟನಗಿಯುವೆ || ೩ ||

ಅಸುರರ ಕೊಲುವ ಮನೋರಥ | ಬಿಟ್ಟು |
ಡಸುರ ನೀನಡಹಾಯ್ದಿ ಸಮರಥ ||
ಬಿಸಗದಿರಜನೊಳ್ ಬೇಕಾದಂಥ | ಪೊಸ |
ಮಾಂಸವದೆ ನಡೆ ಬಿಡು ಪಂಥ || ೪ ||

ಘಡ ನಿಲ್ಲು ನಿಲ್ಲಾದರೆನ್ನುತ್ತ | ತಲೆ |
ಒಡೆವಂತೆ ಬಡಿದು ತಿರುಗೆ ಮತ್ತಾ ||
ಘುಡುಘುಡಿಸುತ ಹರಿ ಗಜರುತ್ತ | ವಕ್ಷ |
ಬಡಿಯೆ ಜಾರಿತು ಖಳನಸುವತ್ತ || ೫ || 189 ||

**ಭಾಮಿನಿ**

ಮಂತ್ರಿ ಮೃತಿಯಂ ಕಂಡು ನಭದಿಂ |
ಮಂತ್ರ ಪುಷ್ಪದ ಮಳೆಯು ಮಾರನ |
ಮಂತ್ರಿ ಭಾವನ ಸಿರಿ ಮುಡಿಯ ಮೇಲ್ಪೊಕ್ಕುದಾ ಬಗೆಯ ||
ಯಂತ್ರ ಪಟದೊಲ್ ನಿಂತು ಕಂಡು ಕು |
ಮಂತ್ರಿ ಧೇನುಕ ಪ್ರಳಯ ಹರನೋಲ್ |
ಮಂತ್ರಶರಗಳನೆಚ್ಚು ಪ್ರತಿಭಟಗೆಂದ ಮೂದಲೆಯ || ೧ || 190 ||

**ಘಂಟಾರವ - ಅಷ್ಟ**

ನಿಲ್ಲು ನಿಲ್ಲೆಲೊ ಘಡ ಜಲಚರನೆ ನ |
ಮ್ಮೆಲ್ಲ ಬಲಗಳ ಘಲ್ಲಿಸಿದ ಘನ |
ವಿಲ್ಲಿ ತೋರಿಸು ತೋರಿಸೊ || ೧ ||

ತೋರಲೇನ ನಾನೆಲೆ ನಕ್ತಂಚರ ಎನ್ನ |
ಪ್ರಾರಬ್ಧಫಲ ನಿಮ್ಮೊಳೊಬ್ಬನೆ |
ಗಾರುಗೆಡುವುದ ಕಾಣೆಯ || ೨ ||

ಅಣ್ಣ ದೇವನ ಪುಣ್ಯದ ಫಲದ ನೀ |
ಬಣ್ಣಗೆಟ್ಟೆ ಮುಕ್ಕಣ್ಣ ತಡೆದರು |
ಮಣ್ಣಗೂಡಿಸದಿರೆನೆಲ || ೩ ||

ಆತ ಮಾಡಿದ ಕರ್ಮದೊಳಾ ಮಹ |
ಸೂತಕವು ನಿಮಗೆಲ್ಲ ಬಿಡದಿದ |
ನಾತುಕೋ ಎಂದೆರಗಿದ || ೪ ||

ಅದಕೆ ತಪ್ಪಿಸಿ ಖಳನೆರಗಲು ಹಾರಿ |
ಸದೆಯಲಚ್ಯುತ ಮೂರ್ಧಿಯನು ಆ |
ಮದಮುಖನು ಧರೆಗೊರಗಿದ || ೫ || 195 ||

**ಭಾಮಿನಿ**

ರಣದಿ ಸೋದರನಳಿಯೆ ಕಂಡಾ |
ರಣದಿಶಾಪಟ ವೀರ ತಮನು |
ಬ್ಬಣವ ಝಳಪಿಸಿ ಕುಣಿಸಿ ಮೀಸೆಯ ಮೇಘಧ್ವಾನದಲಿ ||
ರಣ ಭಯಂಕರನೇರ್ದು ಮಣಿರಥ |
ಕುಣಿಸಿ ಕುದುರೆಯ ಮತ್ಸ್ಯರೂಪದ |
ತ್ರಿಣಯಸಖಿಗಿದಿರಾಗಿ ಕರೆದಿಂತೆಂದ ರೋಷದಲಿ || ೧ || 196 ||

**ಶಂಕರಾಭರಣ - ಅಷ್ಟ**

ಭಾಪುರೆ ನಿಲ್ಲೆಲ ಮತ್ಸ್ಯ | ರೂಪ ನಮ್ಮ ಮಹಾರ್ಬಲ |
ರೂಪುಗೆಡಿಸಿದಾ ದ್ರೋಹಿ | ಪಾಪಿ ಕೊಲ್ಲುವೆ ||
ಪಾಪ ಬೆನ್ನ ಬಿಡದು ನಿನಗ | ದ್ಯಾಪಿ ಪಾಮರಾಗ್ರಗಣ್ಯ |
ಆಪೋದ ಸೇನೆಗೆ ನಿನ್ನ | ಭೂಪನೆನಿಸುವೆ || ೧ ||

ಘೋರ ವ್ಯಾಘ್ರನೊಳು ಬಡ | ಹೋರಿಗೆ ಪಥ್ಯವೆಯಂಕ |
ನೀರ ಪ್ರಾಣಿಗೆನ್ನೊಳು ಹರಿ | ಕಾರ ಸಲ್ಲದು ||
ಭಾರಿ ಹಸಿದ ಮೃಗೇಂದ್ರಗೆ | ಕ್ರೂರ ವ್ಯಾಘ್ರನಿದಿರೆ ಮೊದಲೆ |
ನೀರ ಮನೆ ನಮಗೆ ನಿನಗೆ | ಸೇರದಿದಯ್ಯ || ೨ ||

ಐದುವುದಂತಿರಲಿ ನಿನ್ನ | ಕೊಯ್ದ ಮೇಲೆ ಭುವನ ತ್ರಯ |
ಕ್ಕಯಿದ್ದ ರಾಜನಪ್ಪ ತಪ್ಪ | ನೈ ದೃಷ ಪ್ರಾಣಿ ||
ಬಯ್ದ ಬಾಯ್ಗೆ ಹೊಯ್ದ ಕೈ ಕೇಳ್ | ಕಾಯ್ದು ಬಿಟ್ಟರಲ್ಲವೆ ನೀ |
ನಯ್ದಿ ರಾಜನಹುದು ಬಿಡೆ ನಾ | ನೈದುಮುಖನಾಣೆ || ೩ || 199 ||

**ಭೈರವಿ - ಝಂಪೆ**
ಆಣೆಗಳ ತೋರು ಬಡ | ಪ್ರಾಣಿ ಶಾಭಾಸೆನುತ |
ಕೌಣಪ ಕಠಾರಿಯಿಂ | ಗೋಣೆಡೆಗೆ ತಿವಿದ || ೧ ||

ಭಾರಿ ಹತಿಗಳುಕದು | ಬ್ಬೇರಿ ಪುಚ್ಛಾಗ್ರದಿಂ |
ಪೇರುರವ ಬಡಿಯೆ ಖಳ | ಕಾರಿದನು ರಕ್ತ || ೨ ||

ಬಸಿವ ರಕ್ತವ ಬಳಿದು | ಪೊಸ ಶಿಲೀಮುಖವನಾಂ |
ಟಿಸಿದ ಕೋದಂಡದಿಂ | ಝಷನದರ ಕಂಡು || ೩ ||

ಪಿಂಗಳಿಗಳೆಲ್ಲವನು | ನುಂಗಿ ಭೋರ್ಗರೆಯೆ ಕಂ |
ಡಂಗಜಾಂತಕನಂತೆ | ಸಂಗರದೊಳಸುರ || ೪ ||

ಮರವಟ್ಟು ನಿಂದರರೆ | ಹರನೊ ಜಟ್ಟಿಗನೊ ಇವ |
ಸರಳ ನುಂಗುವ ಮಾರಿ | ಹರಹರಾಯೆಂದ || ೫ ||

ಚಿತ್ತದಲಿ ಖತಿಯೇರಿ | ಮತ್ತೆ ಗದೆಯುಂ ಬಡಿದ |
ಡತ್ತ ತಡೆದಾರ್ಭಟಿಸಿ | ಇತ್ತ ನಿಲ್ಲೆಂದ || ೬ ||

ಶೂಲಮಂ ಕೊಂಡು ಲಯ | ಕಾಲ ನಿನಗೆಂದೆಚ್ಚ |
ಡಾಲಿಸದೆ ದನುಜನ ಕ | ಪಾಲಮಂ ತುಳಿದ || ೭ || 206 ||

**ಭಾಮಿನಿ**
ಬಾಡಿ ತನುವಲ್ಲಾಡಿ ಮೂರ್ಛೆಯ |
ಕೂಡಿ ಖಳ ನೆಗೆದಾಡಿ ನಿಲೆ ಕಂ |
ಡಾಡಿದನು ಕಲಿಮತ್ಸ್ಯ ನೀ ನಾಡಾಡಿ ಭಟನಲ್ಲ ||
ಖೋಡಿಯಿಲ್ಲದ ಬರೆಯನದೆ ನಾ |
ನೋಡಿ ಮೆಚ್ಚಿದೆ ಬೇಡು ವರಗಳ |
ನೀಡಿದಪೆನೆನಲೆಂದ ಭೋರ್ಗರೆದಸುರ ವಚನಗಳ || ೧ || 207 ||

**ಸೌರಾಷ್ಟ್ರ - ತ್ರಿವುಡೆ**
ಒದರದಿರು ಸಾಕೆಲವೊ ನೀ ಗ |
ರ್ವದಲಿ ಹಿಂದಾ ಮಧುವ ಮೆಚ್ಚಿಸಿ |
ಒದಗಿ ಕಾಮಿತವಿತ್ತೆ ಬಲ್ಲೆ ನಿ | ನ್ನಧಟುತನವ || ೧ ||

ಬೇಡುವೆನು ಶರಮುಖದಿ ವರಗಳ |
ತೋಡುವೆನು ಕೆಂಗರುಳ ನಿಲ್ ಪಿಂ |
ದೋಡಿದ್ಯೆ ಭೃಗು ಸತಿಯ ಕೊಂದು ಸೊಂ | ಪಾಡಿ ಭಳಿರೆ || ೨ ||

ಆ ಮಹಾ ಸತಿ ಶೋಕದುರಿ ನಿ |
ರ್ನಾಮಿಪಡೆ ತವ ತಲೆಯ ತರಿದು |
ದ್ದಾಮ ಧಾರಾ ರುಧಿರ ತರ್ಪಣ | ಸ್ತೋಮ ಹೊರತು || ೩ ||

ಗೆಂದುವಗ್ನಿಗೆ ಘೃತವನಿಕ್ಕಿದ |
ರಿಂದ ಶಿಖಿ ಮಾಣುವದೆ ಪೆರ್ಚದೆ |
ಕೊಂದುದಲ್ಲದೆ ಬಿಡೆನು ನಾ ಕೇ | ಳಿಂದು ನಿನ್ನ || ೪ ||

ಹಣೆಯ ಬರಹವ ತೊಡೆವ ಘನ ಕೂ |
ರ್ಗಣೆಗಳಿದೆಲಾ ನೋಡು ಎನ್ನಯ |
ಭಣಿತೆಯನು ಕೈಮಾಡು ಜಾರದೆ | ರಣದೊಳಗೆ || ೫ || 212 ||

**ವಾರ್ಧಕ**
ಕಂಡುದಿಲ್ಲೆನದಿರೈ ಕುಲದೇವಿ ಮಾಯಾ ಪ್ರ |
ಚಂಡೇಶ್ವರಿಯ ದತ್ತಖಂಡ ಶರವಿದಕೊ ಬ್ರ |
ಹ್ಮಾಂಡ ಕ್ಷೋಭಂ ಗೈವುದೀಡಲ್ಲ ನೀನೆಂದು ತೆಗೆದೆಚ್ಚಡಾ ಬಾಣದಿ ||
ಚಂಡಮಾರುತ ಬೀರೆ ಕತ್ತಲುಂ ಸಾರೆ ಕೆಂ |
ಗೆಂಡ ಮಳೆ ಸಿಡಿಲ್ಮಿಂಚು ಕೋಟ್ಯಾನು ಕೋಟಿ ಖಳ |
ತಂಡ ಶಾರ್ದೂಲಾದಿ ಮೃಗಗಣಂ ಮುತ್ತಿದುದು ಮುರಹರಂ ಬೆದರೆ ರಣದಿ || ೧ || 213 ||

**ಭೈರವಿ - ತ್ರಿವುಡೆ**
ಏನನೆಂಬೆ | ಸಂಗರ | ವೇನನೆಂಬೆ || ಪ ||
ಉರುವ ಸೋನೆಯ ಮಳೆಯೊಳಾ ಶಿಲೆ |
ಕರಗುವುದೆ ಮೂರ್ಖರಿಗೆ ಬುದ್ಧಿಯ |
ನೊರೆವನೆ ಕಡು ಮರುಳನಕಟಾ |
ಕೊರಚಲೇಕಾ ಬೇರ್ ಬಲ್ಲವ ||
ಗಿರದೆ ಮರದೆಲೆ ತೋರೆ ಸಂಶಯ |
ದೊರೆವುದೇ ಮಾಯಾಂಗನಾ ಮಣಿ |
ಗೆರೆಯ ನಾನಿಂದು ಘನವೆಯೆನುತು |
ಬ್ಬರದಿ ಹೂಂಕರಿಸುತ ಮುರಾಂತಕ || ನೇನನೆಂಬೆ || ೧ ||

ಗಗನ ಕಡೆ ಪಾತಾಳ ಮೊದಲೆನೆ |
ನಿಗುಚಿ ಚೆಲ್ವ ಕಳೇಬರದ್ಯುತಿ |
ಝಗ ಝಗಿಸೆ ತಾರಾಳಿ ರವಿ ಶಶಿ |
ಬಿಗುಹು ಬೀತುದು ಸಪ್ತಸಾಗರ ||
ಬಗೆಯಲೇಕಾರ್ಣವವದಾದುದು |
ಮುಗಿದುದಖಿಳ ಚರಾಚರವು ಮೇ |
ಣೊಗುವೆ ಮಾಯಕೆ ಬಿಟ್ಟು ಚಕ್ರ ಹೂ |
ಣೆಗರ ದೇವನು ತಮನ ಸೆಣಸಿದ || ನೇನನೆಂಬೆ || ೨ ||

ಕುಟಿಲಗಾರನ ಕುಟಿಲ ಕಂಡು |
ಕ್ಕಟ ಬಲಾಢ್ಯನು ಕಟಕಟನೆ ಪ |
ಲ್ಕಟಿಯುತೆಲೆ ನಿಲ್ ಕಟಿಯಲುವ ದಿಟ |
ದಿಟ ಮುರಿವೆನೆಂದಾಹೈದು ಮೆಟ್ಟಿದ |
ಪಟು ಪರಾಕ್ರಮಿಗಳಕೆ ಪಾಲದಿ |
ಮಿಟುಕಲೀಯದೆ ಬಿಗಿಯೆ ತಮನಸು |
ಲಟಕಟೆಯೊಳಿನ್ನೆತ್ತ ಜಾರಿತೊ |
ತಟಿಸಿ ಪಿತನ ಪರಾಕ್ರಮವ ನಾ || ನೇನನೆಂಬೆ || ೩ || 216 ||

**ವಾರ್ಧಕ**
ಏಸು ಸಿದ್ಧಿಯ ಮಂತ್ರ ದೈವಂಗಳಿದ್ದರೇ |
ಕಾಸೆ ನಿಜವಹ ದೈವ ದ್ರೋಹಿಗಕಟಕಟ ವನ |
ವಾಸದಸುಬೆಳ್ದಿಂಗಳೋಲ್ವಿಫಲವಾಗದಿರ್ಕುಮೆ ತಮಂ ಕೇಳು ಬಲನೆ ||
ಪೈಸರಿಸದಂ ರಣದಿ ಋಗ್ವೇದ ವೆಂಟಂಶ |
ವಾಸ ಯಜುರೇಳು ಸಾಮಂ ವಾರಥರ್ವಣಂ |
ಮಾಸದೈದಿಂತು ನೆಗೆದೌ ಜಲದೊಳದ ಕೊಂಡ ಶ್ರೀಶಗೆನ್ನಭಿವಂದನೆ || ೧ || 217 ||

**ಕಂದ**
ಅತ್ತಲು ಹರಿ ನುಡಿದಾ ಮಾ |
ರೊತ್ತನೆ ದಿನ ಕಗ್ಗತ್ತಲು ರುಂಹರಿ ಕವಿಯಲ್ ||
ಸತ್ಯವ್ರತಾಖ್ಯ ಮಹೀಪತಿ |
ನಿತ್ತೊಡಗೂಡ್ಡವನೋಷಧಿಗಳನತಿಯಾಗಲ್ || ೧ || 218 ||

**ಮಹಾಸ್ರಗ್ಧರಾ ವೃತ್ತ**
ಬೆಳವಾಲಂ ಮತ್ತಿಬೇಲಂ ಪುಣಿಸೆಯಣಿಲೆ ದಿಂಡಾಲಮಂ ಕೋಲೆ ಬೇವಿಂ |
ಗಳ ಮೆಕ್ಕಂ ಕಕ್ಕೆ ಮಾವಂಬಟೆ ಬಿದಿರುರುಟಾಳಂಬಕಂ ಚಂದನಂ ಗು ||
ರ್ಗುಳಮೀಚಲ್ ಬನ್ನಿಗೇರ್ಮುತ್ತುಗ ಮರಳಿ ಪತಂಗ ಪುಲಿಗಿಲ್ಲಮಾಲಂ |
ಮೊಳಗಾಚಲ್ನೆಲ್ಲಿನೇರಿಲ್ಲದುಕು ಪನೆಗಳೊಪ್ಪಿರ್ದುದಾ ಭೂಪನತ್ತಂ || ೧ || 219 ||

**ಭಾಮಿನಿ**
ತತ್ತಸಮಯದಿ ಕವಿವ ಜಲದಿ ಸೊಂ |
ಪೆತ್ತ ನಾವೆಯು ಸಪ್ತ ಋಷಿಗಳು |
ಮತ್ತೆ ವಾಸುಕಿ ಸಹಿತ ಕಾಣಿಸೆ ಹಡಗ ನೃಪರತುನ ||
ಹತ್ತಿ ಶ್ರೀಮತ್ಸ್ವಾಮಿಯೆನಲಳ |
ಲುತ್ತಲಿರುವರ್ಭಕನ ತಾ ಬಂ |
ದೆತ್ತುವೋಲ್ ಮೈದೋರ್ದು ಭಕ್ತಾಧೀನ ಮುರಮಥನ || ೧ || 220 ||

**ತೋಡಿ - ಅಷ್ಟ**
ಸುತ್ತಿ ಹಡಗಿಗೆ ಹಾವು ಝಷ ರೂ |
ಪೋತ್ತಮನು ಶೃಂಗಾಗ್ರದಿಂದೆಳೆ |
ವುತ್ತಲಿರಲಾ ಭೂಪ ಕೈಮುಗಿದು ||
ಇತ್ತಲೀ ಸಾಗರಕೆ ನಾವೆಯ |
ನಿತ್ತ ಭವವಾರಿಧಿಗೆನಗೆ ಮುಂ |
ದೆತ್ತ ಗತಿಯೆನಲೆಂದ ಹರಿಯೊಲಿದು || ೧ ||

ಧಾರಿಣಿಪ ಕೇಳ್ ಧಾತ್ರಿ ಧಾರಾ |
ಭೂರಿ ಮೂರರೊಳಾವುದೈ ಸ್ಥಿರ |
ಮಾರಿ ಬಡಿವಾಗಾರಿಗಾರಿಲ್ಲ ||
ಮೂರು ಮೂರ್ತಿಗಳಿಂಗೆ ಲಯದ ವಿ |
ಕಾರವುಂಟೈ ತೈಜಸಾಂಹ್ವಯ |
ವೀರನೊಬ್ಬನೆ ನಿತ್ಯಮಜಡನಲ || ೨ ||

ದೃಗ ಸದೃಶ್ಯವು ಮಾಯೆ ಮಗನೇ |
ಮಿಗೆಯ ದೃಶ್ಯವೆ ಬ್ರಹ್ಮ ನಾನೊ |
ಬ್ಬಗೆ ಗುಣಂಗಳಿದೆರಡು ಬಂತಯ್ಯ ||
ಸಗುಣ ನಿರ್ಗುಣದಿಂದ ತಿಳಿನೀ |
ನೊಗುವ ತೇಜೋಭದ್ರ ನಾನೇ |
ಮುಗಿಸಿ ರಾಗವ ನೋಡು ಕಂದಯ್ಯ || ೩ || 223 ||

**ಭಾಮಿನಿ**
ಬಿಡು ಕಣಾ ಬಾಹ್ಯೇಂದ್ರ್ಯ ವೃತ್ತಿಯ |
ಹಿಡಿ ಕಣಾ ಪರಮಾತ್ಮ ಚಿತ್ತಿಯ |
ದೃಢ ಕಣಾ ನಂಬ್ಬುವದು ಕಡೆಗೆ ನೀ ಶ್ರಾದ್ಧದೇವ ಮನು ||
ತಡೆಯದಹೆಯೆಂದೊರೆವುತಾಡುತ |
ಕಡಲೊಳಜಪಿತನಿರ್ದಡತ್ತಲು |
ನುಡಿದ ರಜತಾದ್ರಿಯಲಿ ಶಿವೆಯೊಳು ಮಾತ ನಿರುಪಮನು || ೧ || 224 ||

**ಕೇದಾರಗೌಳ - ಅಷ್ಟ**
ಹರಿಣಾಂಕ ವದನೆ ಕೇಳ್ ಮರಿದುಂಬಿಗುರುಳೆನ್ನ |
ಸುರತ ಸೌಭಾಗ್ಯರನ್ನೆ ||
ಅರಿವೆಯ ಪೊಸತೊಂದು ಪರಿ ವಾರ್ತೆ ಮಧುವೈರಿ |
ಶರಧಿಯೊಳಿಹ ಸಂಪನ್ನೆ || ೧ || 225 ||

**ಸೌರಾಷ್ಟ್ರ - ಏಕ**
ವಲ್ಲಭ ಕೇಳ್ ಪೊಸತಲ್ಲ ವಾರತೆ ವಾರ್ಧಿ |
ಯಲ್ಲಿಪ್ಪುದಜಪಿತನಿಂದು ||
ನಲ್ಲೆಗೋಸುಗ ಮನೆಯಲ್ಲಿಯೆ ಗೈದ ನಿತ್ಯ |
ಮಲ್ಲ ಮರ್ದನ ಭಕ್ತಬಂಧು || ೧ || 226 ||

**ಕೇದಾರಗೌಳ - ಅಷ್ಟ**
ಹಾಗಲ್ಲ ಮುಗುದೆ ಕೇಳಾಗಮಂಗಳ ತಮ |
ನಾಗ ಕದ್ದಬ್ಧಿಯೊಳು ||
ಆಗಾರ ಗೈಯೆ ಮೀನಾಗಿ ಪೊಕ್ಕಸುರನ |
ನೀಗಿದ ಹರಿ ಕೃಪಾಳು || ೧ || 227 ||

**ಸೌರಾಷ್ಟ್ರ - ಏಕ**
ಹೊಕ್ಕುಳಹೂವನಾಟ ತಕ್ಕುದ್ಯೆಸಲೆ ದಿಟ |
ಚೊಕ್ಕವಾಯಿತು ನಮಗೆಲ್ಲ ||
ಅಕ್ಕಜವೇನೊ ಪೇಳ್ಮುಕ್ಕಣ್ಣ ಮೋಹನ |
ಸೊಕ್ಕಿನ ಪ್ರಿಯ ಪ್ರಾಣನಲ್ಲ || ೧ || 228 ||

**ಕೇದಾರಗೌಳ - ಅಷ್ಟ**
ಹದ ತಪ್ಪಿತವನಾಟ ಚದುರೆ ನೈಮಿತ್ತಿಕ |
ವಿದು ಲೋಕ ಮೂರು ಲಯ ||
ವಿಧಿ ನಿದ್ರಿಸುವನತ್ತ ಪದಿನೈದು ನಿಮಿಷ ಮೇ |
ಲ್ಪುದಿಗಕ್ಕು ಮಹ ಪ್ರಳಯ || ೧ || 229 ||

**ಸೌರಾಷ್ಟ್ರ - ಏಕ**
ಮದನಮರ್ದನ ಸ್ವಾಮಿಯದಕೇನ ಕಂಡಿರಿ |
ಮಧುವೈರಿ ಮನನೋಯದಿಂದು ||
ಹದ ಮೀರದಂತೆ ಕಜ್ಜವದ ನೆಗಳುವದೆನೆ |
ಪದುಮದಳಾಕ್ಷಿಗೆಂದನಂದು || ೧ || 230 ||

**ಕೇದಾರಗೌಳ - ಅಷ್ಟ**
ಅರಸಿ ಶಿಖಾಮಣಿ ಪರಿಯ ಕೇಳಾದರೆ |
ಶರಧಿಯೊಳಿಳಿದು ನಾನು ||
ನೆರಮೀನ ಕೊಂದು ಶ್ರೀಹರಿ ಸ್ನೇಹವಾಂತು ಬಂ |
ಧುರಗೈವೆ ಲೋಕವನು || ೧ || 231 ||

**ವಾರ್ಧಕ**
ಲೇಸಾಯಿತಾದಡಾ ಶಫರಿಯಂ ಕೊಂದು ಸಂ |
ತೋಷದಿಂದೊಂದು ಕುರುಪಂ ಧರಿಸಿ ಬಪ್ಪುದಾ |
ತ್ರೈಶ ಎನಲೊಪ್ಪಿ ಮುದ್ದಿಸಿ ಸತಿಯ ಬೀಳ್ಕೊಂಡು ಪೂಶರಹರಂ ಭರದೊಳು ||
ಕಾಸಿಯಂ ಬಿಗಿದು ಕರಿಚರ್ಮಮಂ ಪುಲಿದೊಗಲ |
ವಾಸದುತ್ತರಿಗೆ ರುದ್ರಾಕ್ಷಿ ಕಂಧರ ಮಾಲೆ |
ಪೂಸಿದ ವಿಭೂತಿ ಧವಳಾಂಗ ಜಡೆಯಿಂ ತೊಳಪಧೀಶ ವಾರ್ಧಿಗೆ ಹಾರಲು || ೧ || 232 ||

**ಮಾರವಿ - ಏಕ**
ಸಿಡಿದು ಮಹಾಜಲ ಸಿಡಿಲಂತಭ್ರುವ |
ತುಡುಕಿತು ಘೋಷದಲಿ ||
ಜಡಜಭವಾಂಡವು ನಡನಡುಗಿದುದಾ |
ಮೃಡನ ವಿಹಾರದಲಿ || ೧ ||

ಸತ್ಯವ್ರತಾದಿಗಳ್ ಸ್ತುತ್ಯದೊಳಿರೆ ತಮ |
ಹತ್ಯನು ಮೊಗವೆತ್ತಿ ||
ಅತ್ಯ ಬಲಾನ್ವಿತ ಮಾತ್ಯ ನೀನಾರೆನೆ |
ನಿತ್ಯ ನುಡಿದ ಒತ್ತಿ || ೨ ||

ಆರಾದಡೆ ಸುವಿಚಾರವೆ ಮೀನು ಭಿ |
ಕಾರಿಯೆ ಫಡ ಸೊಟ್ಟು ||
ಸಾರತ್ತಲೆ ಕೈಮೀರುವ ಮೊದಲೆ ಹಂ |
ಕಾರವ ನೀ ಬಿಟ್ಟು || ೩ ||

ಕೂಗದಿರೊ ಬಡ ಜೋಗಿಯೆ ಬೂದಿಯ |
ನೀಗಲೆ ಮೈಗೊರಸಿ ||
ಆ ಗರುವದ ಕೈಸಾಗಲಿ ಭಿಕ್ಷಕೆ |
ಬೇಗ ಹಡಪ ಧರಿಸಿ || ೪ ||

ಮಿಕ್ಕಿದ ಮಾರನ ಸೊಕ್ಕಿದ ಕೈ ವಿಧಿ |
ಸೊಕ್ಕ ಮುರಿದ ನಿಜ ಕೈ ||
ದಕ್ಕದು ನಿನ್ನೊಲು ಇಕ್ಕಿಸದೆಲೆ ಝಷ |
ಸಿಕ್ಕಿದೆ ಬಿಡು ಸಾಕೈ || ೫ ||

ಬಲ್ಲೆನು ಪೂರ್ವದಿ ಖುಲ್ಲ ಭಸ್ಮಾಸುರ |
ನಲ್ಲಿ ಮೆರೆದ ಬಲುಗೈ ||
ಬಲ್ಲ ಮುನೀಂದ್ರರ ನಲ್ಲೆಯರೋಡಿಸು |
ಮಲ್ಲಗೊರವ ಪೋಗೈ || ೬ ||

ಎರೆಯನ ಬೋನದಿ ಗೊರೆಯುವನ್ಯಾ ನೊಸ |
ಲ್ಕೆರೆಯುವ ತೆರವೆನ್ನ ||
ಮೊರವೆಯ ನೀರ್ಮನೆಗೊರವನೆ ಸಂಗರ |
ಗರುವವ ಬಿಡು ನಿನ್ನ || ೭ || 239 ||

**ಪಂಚಾಗತಿ - ಮಟ್ಟೆ**
ಬೆಟ್ಟ ಮನೆಯಲ | ದಿಟ್ಟ ವಿಷಗಳ |
ರಟ್ಟಬೇಡೆಲ | ಮುಟ್ಟಿ ಸೆಣಸೆಲ ||
ಕೆಟ್ಟ ತಮ ಖಳ | ಗುಟ್ಟನರಿಯಲ |
ಮೆಟ್ಟದಿರೆ ಛಲ | ಬಟ್ಟೆ ವಿಡಿಯಲ || ೧ ||

ಧುರದಿ ತಮನಲಿ | ಮೆರೆದ ಮದದಲಿ |
ನಿರತ ನೀತಿಲಿ | ಮೆರೆದೆ ತಬ್ಬಿಲಿ ||
ಪರಿಕಿಸೆನುತಲಿ | ಪರಶುವಿಂದಲಿ |
ಗೊರೆಯೆ ತನುವಿಲಿ | ಅರಿವು ಬರಲಿ || ೨ ||

ಫುಲ್ಲಲೋಚನ | ಮೆಲ್ಲನೆಂದ ನಾ |
ನಿಲ್ಲಿರಲು ದಿನ | ವಲ್ಲ ಪೋಪೆ ನಾ ||
ಮಲ್ಲ ಮತ್ಸ್ಯನ | ಕೊಲ್ಲು ಶಿವ ಘನ |
ವಲ್ಲಭ ಎನ್ನ | ಮಲ್ಲಿಕಾರ್ಜುನ || ೩ || 242 ||

**ಭಾಮಿನಿ**
ಇರಲಿ ಸುಹೃದವೆಂದು ಸಾಂಬನಿ |
ಗೆರಗಿ ಮುನಿತತಿ ದ್ರುವಿಡಪತಿ ಹರಿ |
ಯರು ಸಹಿತ ಬೀಳ್ಕೊಂಡು ಶ್ರುತಿಗಳನಿತ್ತು ಹೊಕ್ಕುವನ ||
ತರಳಗೆಚ್ಚರಿಸುತ ವಿಕುಂಠಕೆ |
ಸರಿದ ಹರಿಯುತ್ತಿತ್ತ ಮೀನೆಲು |
ಧರಿಸಿ ತಾ ಕಂಕಾಳಧರನೆಂದಾದ ಹರ ಸುಗುಣ || ೧ || 243 ||

**ಕಂದ**
ಬಾನ್ನವಿರಂ ಮಿಗೆ ತೋಷದಿ |
ಮುನ್ನೀರುಳಿದುನಿ ಮುನ್ನಿನ ತೆರವಿಹುದೆಂದುಂ ||
ತನ್ನ ನಿವಾಸಕೆ ನಡೆದಗ |
ಕನ್ನೆಯ ಕೆನ್ನೆಯ ಚುಂಬನದಿಂ ನಲಿದಿರ್ದಂ || ೧ || 244 ||

**ವಾರ್ಧಕ**
ಅನ್ನೆಗಂ ಪಡುವೆತ್ತಿ ಕ್ರೀಡೆಯಿಂ ನಗುತ ವಿಟ |
ನನ್ನೊಳಗು ಮಾಡಿ ಮನೆ ಮಾರ ಮಾರಿಸಿ ತೆಂಕ |
ಕಿನ್ನು ನಡೆಯೆಂದುತ್ತರವನೀವ ಸೂಳೆಯೋಲ್ ನಿಶಿ ನಿತಂಬನಿ ಮೋಹದ ||
ಚೊನ್ನ ನಗೆ ತಾರೆ ಮುತ್ತಿಂದ ಮೋಹಿಸೆ ನಚ್ಚ |
ಲೆನ್ನನೇಂ ಗೈಯಳ್ಬೀಡಧಮೆ ಸಂಗಂ ಮೀರ್ವೆ |
ತನ್ನಿಯಂ ನಾಲ್ದೆಸೆಯೊಳೆಚ್ಚರಿಪೆನೆಂಬಂತೆ ಹರಿಯಭ್ರುದೋಳ್ ತೊಳಗಿದ || ೧ || 245 ||

**ಭಾಮಿನಿ**
ಕೃತ್ತಿವಾಸನ ನೇಮದೋಳ್ ಪಿಂ |
ದೊತ್ತಿ ಮುನ್ನಿನ ತೆರದೊಳಂಬುಧಿ |
ಸುತ್ತಿರಲು ಭಾರುಣಿಯನಾಗ ಬಿಡೌಜ ತ್ರೈಜಗದ ||
ಉತ್ತರೋತ್ತರಕುಬ್ಬಿ ಸುಮನಸ |
ಮೊತ್ತ ಚೇತನವಳಿದುಳಿದ ಬಗೆ |
ಗುತ್ತಮ ಶ್ರೀ ಸ್ವಾಮಿಯಂ ನೆನೆದೆಂದನಮರೇಂದ್ರ || ೧ || 246 ||

**ಕೇದಾರಗೌಳ - ಝಂಪೆ**
ಕೇಳ್ದಿರೇ ಸುರಭಟಾಲಿ | ಬಂದೆಡರೊ |
ಳಾಳ್ದಿರೇ ಜಲದಿ ಪೇಳಿ ||
ಖೂಳ್ದನುಜ ತಮನ ಸೀಳಿ | ಜಗಕೆ ಸಿರಿ |
ಯಾಳ್ದ ನಿಲಿಸಿದ ಹಾವಳಿ || ೧ ||

ನಿರ್ಗಮದ ಶ್ರುತಿಯ ಕೊಂಡು | ವಿಧಿಯು ಸ |
ನ್ಮಾರ್ಗದಿಂದಿಹನೊ ಕಂಡು ||
ಅರ್ಗಳದಿ ಬಪ್ಪ ಹಿಂಡು | ಪೊರಡಲ್ಕೆ |
ಸರ್ಗಿಗರ ನಮ್ರ ದಂಡು || ೨ ||

ಶಕ್ರನಿಂತೆಂದಡಾಗ ನಿಖಿಳ ಸುರ |
ಚಕ್ರಿಗಳು ಪೊರಟು ಬೇಗ ||
ವಿಕ್ರಮದೊಳಯ್ದಿ ಹೂಗ | ಮಗನೆಡೆಗು |
ಪಕ್ರಮಿಸಲತ್ತಲಾಗ || ೩ || 249 ||

**ಭಾಮಿನಿ**
ಕಾಂತನೇಳ್ಗೆಯೊಳುಬ್ಬಿ ಮಂಗಳ |
ದಿಂ ತೊಳಪ ಮಜ್ಜನದ ಮೇಲ್ ಪಣೆ |
ಗಾಂತು ಘನ ಸಿಂಧೂರ ರಾಜಿಪ ಶಾರದೆಯೊ ಮೇಣು ||
ಕಂತು ಸೋದರನಾ ಸನಚ್ಛವಿ |
ಯಿಂತೊ ಬಣ್ಣಿಪೆನೇನನಮರಿಯ |
ರ್ಮುಂತೆ ಚಾಮರ ಬೀಸಲಜನೋಲಗವನಡರಿದನು || ೧ || 250 ||

**ವಾರ್ಧಕ**
ಕಾಮನಂ ಕೊಂದವಗೆಗವನ ಪಡೆಯವರು ಜಿತ |
ಕಾಮ ಧಾಮಂ ನೆಗಪಿದರೊ ಎನಲ್ಕಲಧೌತ |
ಕಾಮಾತಪತ್ರ ವಿಭ್ರಾಜಿಸುತ್ತೆತ್ತೆ ಪಿಂದಜ ಮಹಾಸ್ಥಾನದೊಳಗೆ ||
ಕಾಮ ರೂಪಿಗಳಾದ ಮನು ಮುನಿಕ್ರತು ಭುಜ್ಞಿ |
ಕಾಮ ಬಲವದ್ರಾಕ್ಷಸಾಳಿ ಕೃತ ಸುಸ್ತೋತ್ರ |
ಕಾಮನಿರ್ದ ನೀನೆ ಸಕಲ ಜಗದೊಡೆಯನೆಂದಾ ಜನದ ನುತಿಯ ಮೇಗೆ || ೧ || 251 ||

**ಕಂದ**
ಬೆಡಗಿನೊಳಾಗಳ್ ನೀರದ |
ಜಡಭರಿತಂ ಮಿದರೊಡನಿರೆನೆನುತಲೆ ನಾರೀ ||
ಸಿಡಿದಳೊ ನೆಲಕೆನಲೊಪ್ಪುವ |
ಮಿಡಿಮೊಲೆಯಪ್ಸರ ಗಣಿಕೆಯರ್ನಟಿಸಿದರ್ಭಾರೀ || ೧ || 252 ||

**ವರಾಳಿ - ಏಕ**
ಮದನ ಕಠಾರಿಯರಂದದಲಿ |
ಒದಗುತಲಾಡಿದರ್ಚದಪಿನಲಿ || ಮದನ || ಪ ||
ಮೃಗ ಮದಗಂಧಿಯ | ರ್ಮುಗುಳಂಬನ ಧನು |
ಯುಗ ನಿಭ ಭ್ರೂಲತೆ ಹಾರಿಸುತ | ದೃಗುಗಳ ತಿರುಹುತ |
ನಗುತಲಿ ಹಸ್ತಭಿ | ನಗಳನು ತೋರುತ ನಲಿಯುತ್ತ |
ಬಗೆಬಗೆ ಕುಶಲದಿ | ನೆಗನೆಗದಾಡಲು |
ಧಿಗಿಲೆಂದು ವಿಟಜನರುಲಿಯುತ್ತ | ಸೊಗಸಿನೊಳಿರೆ ಕುಚ |
ಯುಗ ಕಂಚುಕಿಯೆಡೆ | ಬಗದುರೆ ತೋರುತ ಮೋಹಿಸುತ ||
ಡಗೆಗೆಲರನನಗೆ | ಮೊಗನೋಡುತಲೊಗು |
ಮಿಗೆ ಸಂಪ್ರೀತಿಯ | ನೆಗಪುತ ಸಭೆಯೊಳು |
ಸುಗುಣೆಯರರ್ತಿಯಲಿ | ಅಡಿದರಗಲದೆ ನೃತ್ಯದಲಿ |
ಚೋದಿಗವಗಣಿತ ಭಾವದಲಿ | ಸರತಾಳಗಳ ಸುಸೇವೆಯಲಿ |
ಶ್ರುತಿ ಸೇರಿಸುತ | ನಿಲುತಾಗಲು ತಾ |
ಥೈಥೈಯೆನುತ | ಸುಗಮದೊಳಿಹ ಮುನಿ |
ಮಿಗಗಳ್ ಮೋಹ ಬ | ಲೆಗಳೊಳು ಮುತ್ತುಗ |
ಳಗೊಡುತ ಮತ್ತಾ || ಮದನ || ೧ || 253 ||

**ವಾರ್ಧಕ**
ಪಿಕ ತುಂಡ ಹತ ಶೀತ ಭಯ ನಿರಾಭಾರ ಸ |
ತ್ರಿಕಟ ಮಾರುತ ಕಂಪ ವಜ್ರ ಹತಿ ಶರಭ ಕಂ |
ಟಕ ಗರುಡ ಭೀತಿಗಜಗರ ಪಾತ ದುಷ್ಟ ಜಲಚರನಂಗ ವಾಹಿ ಭೀಮ ||
ನಿಕರದಟ್ಟುಳಿಗೆ ಪಲ್ಲವ ಕಮಠ ಸೊರ ಶರಧಿ |
ಸುಕರ ರಂಭಾದ್ರಿ ಹರಿ ರಾಹು ಪಂಕೇಜಾತ |
ಮುಕುಳ ಶಂಖೇಂದುಗಳ್ ಕಾಂತೆಯರ ಕಾಯದೊಳಡಂಗಿದವೆನಲ್ಕೆಸೆದರು || ೧ || 254 ||

**ಭಾಮಿನಿ**
ಭಾವೆಯರು ಕಲ ಮಂದ್ರ ತಾರಕ |
ಭಾವದಿಂ ಶ್ರೀತೋಡಿಯಾರಭಿ |
ದೇವಗಾಂಧಾರಾದಿ ರಾಗಗಳಿಂದ ಹಾಡಿ ಪದ ||
ಆ ವರ ಸ್ಥಾನವನು ಮೆಚ್ಚಿಸೆ |
ತಾವರೆಯ ಮಗನವರ್ಗೆ ವೀಳಯ |
ವೋವಿಯಿತ್ತುದು ಮಧ್ಯ ಶಿಯಂತಲ್ಲಿ ರಾಜಿಸಿದ || ೧ || 255 ||

**ಕಂದ**
ಆಗಳ್ನೆರೆದ ಸಭಾಸದ |
ರೀಗಳ್ನೀನೆ ಚರಾಚರ ಪತಿಯೆಂದುನ್ನತಿಸಲ್ ||
ಮೇಗತಿರೆಯಿಂದುಂ ಭೋಂಕೆನ |
ಲಾಗವದಿಂ ತನಗಾರ್ಸಾಟಿ ಯೆನುತ ನಿಂದಲ್ || ೧ || 256 ||

**ಕಾಂಭೋದಿ - ಝಂಪೆ**
ಅಹುದಹುದು ನಿಮ್ಮ ನುಡಿ ಸಹಜ ದೇವಾದಿ ದೇ |
ವಹಹ ನಾನೆಂಬುದೇನ್ ಕೇಳಿ ||
ಮಹಿಯೊಳೆಂಭತ್ತನಾಲ್ಕಹ ಜೀವಚಯವೆನ್ನ |
ಸಹಸದಿಂದಹರು ಲೋಕಾಳಿ || ೧ ||

ಆವನಾಜ್ಞೆಯೊಳಿಹುದು ನೀವರಿಯರೇ ನಿಬಿಡ |
ದೇವ ಮನು ಮುನಿನಿಕರಕೆಲ್ಲ ||
ಆವನು ಪಿತಾಮಹ ಕಲಾವತಿ ಸರಸ್ವತಿಯ |
ರಾವಂಗೆ ಮಧುಗಳವರೆಲ್ಲ || ೨ ||

ಅವರಿವರೊಳೇ ಉಮಾಧವ ರುದ್ರರೆನೆ ತೋರ್ಕೆ |
ಗವಗಡಿಪರಾ ರೂಪು ನಾನೆ ||
ಭುವನೈಕ ಮೂರ್ತಿನಾನಿವಗೆ ನಿಶ್ಚಯವಹಡೆ |
ವಿವರಿಸಿದೆ ಪರಬ್ರಹ್ಮ ನಾನೆ || ೩ || 259 ||

**ಭಾಮಿನಿ**
ಹುಟ್ಟಿಸುವೆ ನಿಖಿಳವನು ಪಣೆಯಲಿ |
ಕಟ್ಟಿ ಕಳುಹುವೆ ಸಿರಿಯನವರವ |
ರ್ಗಟ್ಟಿಸಿದ ಸುಕೃತಗಳನೆಣ್ಣಿಸಿ ಕಡೆಗೆ ನಿನಗೀಸು ||
ಮಟ್ಟಿಗಾಯುಷವೆಂದು ನೇಮವ |
ಕೊಟ್ಟು ನಡೆಸುವ ತ್ರಿಗುಣಪತಿ ನಾ |
ಗುಟ್ಟನರಿಯದೆ ಕೆಟ್ಟಿರೈ ಎನುತೆಂದ ಶಾಭಾಸು || ೧ || 260 ||

**ಕಂದ**
ಅಜನಜ್ಞಾನದಿ ಹಂಕೃತಿ |
ಕುಜ ನುಡಿ ಬೀರುತ್ತಿರಲರಿದತ್ತಲ್ ಶ್ರೀಶಂ ||
ಭುಜಗಾಸನವಿಳಿದ್ವಿನತಾ |
ತ್ರ್ಯಜ ಭುಜದೊಳ್ ಬಂದಾ ಸಭೆಯಂ ಪೊಗುತಾಗಲ್ || ೧ || 261 ||

**ನಾದನಾಮಕ್ರಿಯೆ - ಅಷ್ಟ**
ರತ್ನಗರ್ಭನಿಗೆಂದನೇನೆಲ | ಬಗು |
ಳಿನ್ನೊಮ್ಮೆ ನುಡಿ ಜಂಭ ನೀನೆಲ ||
ಕುನ್ನಿ ಪೀಠವನಿಳೆ ಬಾಯ್ಗಳ | ಮೆಟ್ಟ |
ದಿನ್ನಿರೆನೆನಲಂಜೆ ಜನವೆಲ್ಲ || ೧ ||

ಕಂಡಜ ಕೈ ತಟ್ಟಿ ನಗುತಲೀ | ಮೀಸೆ |
ಗೊಂಡೆಯ ತಿರುಹುತ್ತ ಸಭೆಯಲಿ ||
ಕಂಡಿರೆ ಇವನಾರು ಹೆಬ್ಬುಲಿ | ಬಂದು |
ಕೊಂಡು ನಿಂದವ ಪೇಳಿ ತಬ್ಬಿಲಿ || ೨ ||

ಕುರಿ ಎಲಾ ಬೊಮ್ಮ ನೀ ಕೊಬ್ಬಿದೆ | ಬಡ |
ವರು ಇವರತಿ ನುತಿಗುಬ್ಬಿದೆ ||
ಅರಿ ನಿನ್ನ ಸಹ ಸರ್ವವನು ಇಂದೇ | ನಾನು |
ಪೊರೆದುದ ಮರೆತೆ ಛೀ ಛೀ ಹಂದೆ || ೩ ||

ಮಾತ ಕೇಳಿರೆ ಮನು ಮುನಿಗಳು | ಲೋಕ |
ಜಾತಕ್ಕೆನಗೆ ಸಹ ಒಡೆಯಾಳು ||
ಈತನೆ ಗಡ ನಾಲಿಗೆಯ ಸೀಳು | ಮಾಡ |
ದ್ಯಾತಕೆ ಬಿಡಬೇಕು ಕೃಪೆಯೊಳು || ೪ ||

ಎನುತತ್ತ ತಿರುಗಿ ಮುರಾರಿಯ | ಕಂಡು |
ಕನಲಿ ಪೇಳಿದ ಈ ಸಭಾವಳಿಯ ||
ಘನತೆಯೊಳಿಹೆ ನಾನು ಕೇಳಯ್ಯ | ನೀನೊ |
ಬ್ಬನೆ ದಕ್ಷ ನಚ್ಚಿದ ಕುರಿಯಯ್ಯ || ೫ ||

ಘಡಗರ್ವದೊಳಗೆಯೇನೆಂದೆಲ | ಎನ್ನ |
ಬಡ ಕುರಿಯೆಂದು ನೀ ಹಳಿದೆಲ ||
ಹಿಡಿ ಸಂಚಕಾರವ ತಲೆಗೆಲ | ಯುದ್ಧ |
ಕೊಡು ಸತ್ವವಿರೆ ಕಾಣಬಹುದೆಲ || ೬ || 267 ||

**ಶಂಕರಾಭರಣ - ಅಷ್ಟ**
ಪೂತುರೆ ಮೆಚ್ಚಿದೆ ವರ ಖ | ದ್ಯೋತನನಾಜಿಗೆ ಗೂಬೆ |
ಯೋತು ಕರೆದು ಕಾದಿ ಬಾಳ್ವ | ರೀತಿಯುಂಟೇನೋ ||
ಆತಪನಾತಪವೆ ನೀ | ಬೂತು ಮಿಂಚು ಬುಳುವಲ್ಲೆ |
ಕೋತಿಹಾರಿ ಗಜರಲಬ್ಧೀ | ಜಾತ ಜರಿವನೊ || ೧ ||

ಕೋತಿಯಾದ ನೀಚ ನೀನೇ | ನಾತ ಚಂದ್ರನೆಣೆಯೆ ಕಳಂ |
ಕಾತಗು ಇಪ್ಪುದು ತಿಳಿಯ | ಮಾತೇನೊ ಶ್ರೀಶ ||
ಜಾತ ದೋಷಾಕಿರಣ ಗುಣದಿ | ಬೀತುದಿಂದುವಿಗರಿಯ |
ಜಾತೆಯ ಕೂಡಿದ ನೀಚ | ಖ್ಯಾತ ವಾಣೀಶ || ೨ ||

ಉರ್ವ ನೀತಿಗಾರನಹುದೊ | ಚರ್ವಾಂಗಿತನೊಡನೆ ಹುಟ್ಟಿ |
ರ್ವ ತಂಗಿಗೋತ ಪಾಪಿ | ಗರ್ವರಾಣ್ಮನೆ ||
ಗರ್ವಿಪಾಪಿನೀಯಲ್ಲದಿರೆ | ಶರ್ವನಂದ್ಯೆದರೊಂ |
ದಿರ್ವ ತಲೆಯ ಕಡಿಯಲುಂಟೆ | ದುರ್ವಿನೀತನೆ || ೩ || 270 ||

**ಮಾರವಿ - ಏಕ**
ಬಡನುಡಿ ಬಿಡು ಕೈ ಕಡಗವ ನೋಡೆ ಕ |
ನ್ನಡಿ ಯಾಕೈ ಸಭೆಯ ||
ಗಡಣವನ್ನೋಡೆನ್ನ ಪಡೆಸಂಭ್ರಮ ನಿನ |
ಗೊಡನಿಹುದೇನಯ್ಯ || ೧ ||

ಮೂಢನೊ ಮೂರ್ಖನೊ ಗಾಢ ಪಿತ್ಥದಿ ಮರು |
ಳಾಡುವೆ ಛೀ ಮುನ್ನ ||
ನೋಡೆನ್ನಿರ ಸೃಷ್ಟಿ ಮಾಡುವೆ ಬಲಚೆಂ |
ಡಾಡುವೆ ಪಡೆ ನಿನ್ನ || ೨ ||

ಮಾತಿನೊಳೇನ್ ಫಲ ಮಾಧವ ನೀನೆ |
ನ್ನಾತುರವೀಧುರದಿ ||
ಓತು ಪರೀಕ್ಷಿವುದೈ ತಡವೇಕೆನೆ |
ಪೀತಾಂಬರ ಮುದದಿ || ೩ || 273 ||

**ಭಾಮಿನಿ**
ಕಡುಗಿ ಘನತರ ವಿಶ್ವರೂಪದಿ |
ಪಡೆದು ಮನು ಮುನಿ ಗರುಡ ಕಿನ್ನರ |
ಬಿಡುನಯನ ಗಂಧರ್ವ ರಾಕ್ಷಸ ಯಕ್ಷ ಕಿಂಪುರುಷ ||
ಪಡೆಯ ಭವ ನವಬ್ರಹ್ಮರಂ ಮಿಗೆ |
ಕಡೆಯ ಮಾತೇನಾನೆತೇರ್ಕಾ |
ಲ್ಪಡೆ ಹಯಂಗಳ ಚೋದ್ಯವದ ಕಂಡಾಗ ವಾಣೀಶ || ೧ || 274 ||

**ಸೌರಾಷ್ಟ್ರ - ತ್ರಿವುಡೆ**
ತಿರುಹಿ ಕೊನೆ ಮೀಸೆಯನು ನಾಲ್ದೆಸೆ |
ಬಿರಿಯಲಾಸ್ಫಾನವನು ಕಂಡುರೆ |
ಜರೆದ ನೆರೆದವರೆಲ್ಲ ನೀವ್ ಬಾ | ಹಿರರೆ ಕೇಳಿ || ೧ ||

ಅರಿ ಬಲಾಂಬುಧಿ ಕುಂಭಜರು ನಿಮ |
ಗರಿಯದೇ ನೆರೆದಾ ಮದಾಂಧರ |
ಹರಿಯ ಸಹ ಧರಧುರದಿಗೆಲ್ವುದು | ಗರುವನಿಹಡೆ || ೨ ||

ತಿಂಬುದಕೆ ಕೊಂಬುದಕೆ ನೀವೆ |
ಲ್ಲೆಂಬ ನುಡಿಯಿಂ ಮುನ್ನ ಧರಸೌ |
ರಂಭರೆದ್ದುರು ಪಟಹ ತಮ್ಮಟೆ | ಕೊಂಬಿನಿಂದ || ೩ || 277 ||

**ವಾರ್ಧಕ**
ಮನುಗಳುಬ್ಬೇರಿದರ್ ಮುನಿಗಳುರೆ ಮೀರಿದರ್ |
ದನುಜರಾರ್ಭಟಿಸಿದರ್ ಜಯಕೆ ಲಟಕಟಿಸಿದರ್ |
ದಿನಪಾಲರೊತ್ತಿದರ್ ದಿವಿಜಭಟರೆತ್ತಿದರ್ ಕಿನ್ನರರ್ ಸನ್ನೆಗಳನು ||
ಕನಲಿದಂ ಸುತ್ರಾಮನುರುಬಿದಂ ಧ್ರುವಸೋಮ |
ನಿನ ಸುತಂ ಪೇರ್ಚಿದಂ ನಿಋತಿ ಬಾಳುರ್ಚಿದಂ |
ವನಧಿಪಂ ಕೆರಳಿದಂ ಹರಿ ರಣಕೆ ತೆರಳಿದಂ ಧನದಂ ಮುನಿದು ನಡೆದನು || ೧ || 278 ||

**ಶಂಕರಾಭರಣ - ಮಟ್ಟೆ**
ಅನಕ ಕಲಹ ಕರ್ತರೀರ್ವ |
ರನುಮತಿಯೊಳಗುಭಯ ಸೇನೆ |
ಜನರಿಗಾಯ್ತು ಚೂಣಿ ತ್ರಿಜಗ | ಜನಗಳಳಲಲು ||
ಇನಗೆ ಇನ ಚಂದ್ರಮಗೆ ಚಂದ್ರ |
ಮನುಗೆ ಮನು ಧ್ರುವಂಗೆ ಧ್ರುವನು |
ಧನಪ ಧನಪನೊಡನೆ ನಿಂದ | ರ್ಕನಲು ತಾಗಲು || ೧ ||

ಸುರಪ ಸುರಪನೀ ಕ್ರಮದೊಳು |
ಧುರ ಸಮರ್ಥರ್ ಮಾರ್ಮಲೆತರು |
ಕರಿಗೆ ಕರಿ ತುರಂಗ ತುರಗ | ಚರಣದಾಳ್ಗಳು ||
ಚರಣದಾಳ್ಗಳೊಡನೆ ತೇರ್ |
ತಿರುಗೆ ತೇರಿಗಿದಿರು ರಥಿಕ |
ರುರುಬೆಗಾ ಬ್ರಹ್ಮಾಂಡ ಮುತ್ತಿ | ತಿರದೆ ಧೂಳ್ಗಳು || ೨ ||

ಗಂಡುಗಲಿಗಳಸ್ತ್ರಶಸ್ತ್ರ |
ಗೊಂಡು ಭಳಿರೆ ಶಕ್ರ ನೀನು |
ದಿಂಡುದರಿವೆ ನಾನು ಶಕ್ರ | ಕಂಡುಕೋ ಬಲ ||
ಅಂಡಲೆಯದಿರೆನುತ ನಿಂದೆ |
ಗೊಂಡು ಸಲೆ ಪೊಣರ್ದರುಭಯ |
ತಂಡ ಜೊಂಡೆಗರುಳ ಭೂತ | ಹಿಂಡು ಜಗುಳಲು || ೩ || 281 ||

**ವಾರ್ಧಕ**
ಪುಂಡರೀಕೋತ್ಪಾತನಮಗಿಯುಂ ಭಾವಿಸಲ್ |
ಶುಂಡಾಲದಳಿತ ಸರಮಲ್ತು ಮುಕ್ಕಂಜಾತ |
ಮಂಡನಂ ತಾನಾಗಿಯುಂ ದಿವಾಕರನಲ್ತು ಸಲೆ ವಿರಕ್ತಾಂಕವೆಸೆದು ||
ತಂಡವ ತಪೋವನ ಮದಲ್ತುರೆ ಶಿವಾನ್ವಿತಂ |
ಖಂಡ ಪರಶುಪ್ರಯುತಮಾಗಿ ಕೈಲಾಸದು |
ದ್ದಂಡ ಗಿರಿಯಲ್ತೆನಿಸಿ ನೋಟಕರ ಕಣ್ಗಾ ರಣಾಂಗಣಂ ಚೆಲ್ವಾದುದು || ೧ || 282 ||

**ಭಾಮಿನಿ**
ಗಾಯದಲಿ ಸಲೆನೊಂದು ನಿಜಬಲ |
ಬಾಯ ಬಿಡುತಿರೆ ಕಂಡು ಖತಿ ಬಾ |
ರಾಯ ಮಾನಸನಾಗಿ ಪ್ರಳಯದ ರುದ್ರನೋಲಿತ್ತ ||
ಶ್ರೀಯರಸ ರ್ಝೇಗೈದು ಶಾರ್ಙ್ಗವ |
ಸಾಯಲೆಳಸಿದ ಬಣಗು ನಿರ್ಜರ |
ನಾಯಿಗಳೆ ಬಹುದೆನುತ ನಿಲಲೀಶಾನ್ಯ ಮಾರಾಂತ || ೧ || 283 ||

**ಭೈರವಿ - ಏಕ**
ನಿಂದೆಯ ಹರಿ ರಣ ಪ್ರೌಢ | ಶರ |
ವೃಂದದ ಬೀರುವೆ ನೋಡ ||
ಕಂದದಿರರಿ ಹರಿ ಗರುಡ | ಎ |
ನ್ನಂದವ ತಿಳಿದುಕೊ ಗಾಢ || ೧ ||

ನೀನೆಲ ಗೊರವ ಈಶಾನ | ವಿಧಿ |
ಯಾ ನುಡಿಗುಬ್ಬಿದು ಶ್ವಾನ ||
ಮಾನಸದಿಂ ಧುರಕೆನ್ನ | ಕರೆ |
ದೇನೆಂದೆಲೊ ಬಿಡೆ ನಿನ್ನ || ೨ ||

ಆಗಲಿ ನೋಡುವೆ ಬಿರಿಸು | ಕೈ |
ಲಾಘವನೆನೆ ಶಾಭಾಸು ||
ಜೋಗಿಯೆ ನಿಲ್ಲೋಲೈಸು | ಎಂದು |
ನಾಗಶಯನ ಬಿಡಲೀಷು || ೩ ||

ಜಾರಲು ಕಂಡು ಧನೇಂದ್ರ | ನಿಂ |
ದಾರದು ಭಳಿರೆಯುಪೇಂದ್ರ ||
ತೋರುವದೆನ್ನೊಳು ನಿಂದ | ಕೈ |
ಗಾರತನವು ಲೇಸೆಂದ || ೪ ||

ಪೂತುರೆ ಯಕ್ಷಪ ಖೋಡಿ | ರಣ |
ದಾತಿಶಯಕೆ ದೃಢ ಮಾಡಿ ||
ಆತುಕೋ ಎನೆ ಕೈಮಾಡಿ | ಮನ |
ಸೋತು ತಿರುಗೆ ಹರಿ ನೋಡಿ || ೫ || 288 ||

**ಘಂಟಾರವ - ಅಷ್ಟ**
ಎಲ್ಲಿಗಯ್ಯುವೆ ಎಲೆ ಕಮಲಾಂಬಕ |
ನಿಲ್ಲು ನಿನ್ನಯ ಬಲ್ಲವಿಕೆಯೆ |
ನ್ನಲ್ಲಿ ತೋರೈ ಕಾದುವ || ೧ ||

ತೋರೆಲೇಕೆ ದರ್ಬಾರಿ ಮಾರುತ ನಿನ |
ಗಾರಿದಿರು ನೋಡಾದರೆನ್ನಯ |
ಭಾರಿ ಬಾಣದ ಸವಿಯನು || ೨ ||

ಎನಲು ಬಿಂಕದಿ ಸರಿ ಸರಿ ಪೊಯ್ದಾಡಿ |
ಅನಿಲನತ್ತಲು ತಿರುಗೆ ಯಃಪತಿ |
ಕನಲಿ ಬರೆ ಹರಿಯೆಂದನು || ೩ ||

ನಮ್ಮ ಮಾವನೊ ಎಂಕದ ಕಲಿ ಮುದಿ |
ಹಮ್ಮು ನಮ್ಮೊಳು ಸಲ್ಲ ಹಳೆಯೆಲು |
ಕಮ್ಮಗಿರಲೈ ಸಾಗಿರಿ || ೪ ||

ಆದರಾಗಲಿ ಪ್ರೀತಿಯ ಜಾಮಾತ |
ಕಾದೆನುತ ಸೆಣಸಾಡಿ ಮೆಲ್ಲನೆ |
ಮೂದಲೆಗೆ ಗುರಿಯಾದನು || ೫ || 293 ||

**ಪಂತುವರಾಳಿ - ಮಟ್ಟೆ**
ಕಾಣುತಾಗ ನಿಋತಿ ಸಮರಕೇ | ತಾ ನಿಂದು ಚಕ್ರ |
ಪಾಣಿಗೆಂದ ನಿಲ್ಲೆಲಾ ಜೋಕೆ || ಕಾಣುತಾಗ || ಪ ||
ಸರಿ ಸಮಾನರಿಲ್ಲವೆಂದು |
ಭರದಿ ಮೇಲ್ವರಿದೆಯಿಂದು |
ಪರಿಕಿಸೊಮ್ಮೆಗೆನುತ ಕುಂತ |
ದಿರವ ಗಂಡುಗಲಿ ಮುರಾರಿ |
ಧಿರುರೆ ವೀರನಹುದೊ ಮೆಚ್ಚಿದೆ | ದಿಕ್ಪಾಲ ವರ್ಗ |
ಧುರದಿ ಗೆದ್ದ ಗರುವ ಹೆಚ್ಚಿದೆ | ಜಾರೆಲವೊ ಸಾಕು |
ಕರಗಳೆರಡು ಬಹಳ ಬಚ್ಚಿದೆ || ಕಾಣುತಾಗ || ೧ ||

ಜಾಗುರೇ ನಿಶಾಚರೇಂದ್ರ |
ಮೇಗೆ ಕುಳಿತ ಮಾತ್ರದಲ್ಲಿ |
ಕಾಗೆ ಗರುಡನಪ್ಪುದೇನೋ |
ಜೋಗಿ ನೀನು ನಿನಗೆ ಸುರೋ |
ದ್ಯೋಗ ದೊರೆತುದಾದಡೊಂ ಮಿಗೆ | ಪೂಜ್ಯನೆ ನೀ |
ಕಾಗೆಯಂತೆ ಕೂಗಲಾಜಿಗೆ | ಪಿಂಜರಿವುದುಂಟೆ |
ಸಾಗದಿದಿರು ನಿಲ್ಲು ಕಡುಹಿಗೆ || ಕಾಣುತಾಗ || ೨ ||

ಪದ್ದುದೇರನೆಂದ ನುಡಿಗು |
ಟ್ಟೆದ್ದು ನಿಸಿುತಿ ಸ್ವರ್ಣ ಪುಂಖ |
ದುದ್ಧತಾಸ್ತ್ರವೆಚ್ಚಡಳಿ |
ಸಿ ಗುದ್ದಲೊಂದನುರಕೆ ಜಾರಿ |
ಬಿದ್ದು ಎದ್ದು ಪಾಯ್ದನಥಮನು | ಅದ ಕಂಡು ಹರಿಬ |
ಕೆದ್ದ ಶ್ರಾದ್ಧದೇವ ವೀರನು | ಪಾಶ ದಂಡ |
ತಿದ್ದಿ ಕಮಲನೇತ್ರಗೆಂದನು || ಕಾಣುತಾಗ || ೩ || 296 ||

**ನಾದನಾಮಕ್ರಿಯೆ - ಅಷ್ಟ**

ಓಹೊ ಇದಾರು ಮುರಾರಿಯೆ | ನಮ್ಮೊ |
ಳಾಹವಕಿದಿರಾದುದಾರಿಯೆ ||
ಭೂಷಿತ ಚರಿತ ನಾ ಮಾರಿಯೆ | ತಿಳಿ |
ಸಾಹಸ ಬಿಡು ಹೊಂತಕಾರಿಯೆ || ೧ ||

ಭಾಪುರೆ ಬಲ್ಲೆಲೊ ಕಾಳಿಯ | ಕಡು |
ಪಾಪಿಗಳ್ ನಿನ್ನಂಗ ಬಹುದಯ್ಯ |
ಈ ಪಣದೊಳ್ ಜಾರಬೇಡಯ್ಯ | ನಿನ್ನ |
ರೂಪಿರೆಗೊಡೆ ತೋರು ವಾಸಿಯ || ೨ ||

ಎನೆ ದಂಡ ತಿರುಹಿಡಲಂತಕ | ದಿವ್ಯ |
ಘನಶರವೆಸೆಯೆ ಮುರಾಂತಕ ||
ಇನಜ ಜಾರಲು ಸರ್ವ ಭಕ್ಷಕ | ಕಂಡು |
ವನಜಾಕ್ಷಗೆಂದ ನಿಲ್ ಕಾಮುಕ || ೩ || 299 ||

**ದ್ವಿಜಾವಂತು - ಏಕ**

ವಿಷ್ಣುವೆ ನೀನೇನೀಗ | ಧುರ |
ಗೋಷ್ಠಿಗೆ ಬಂದ್ಯೆಯಾಗ ||
ಸೃಷ್ಟಿಸಿದಾ ಬವಲಷ್ಟೇನಾಯಿತು |
ಕಷ್ಟವು ನಮ್ಮ ತ್ರಿವಿಷ್ಟಪರೊಳು ರಣ || ೧ ||
ಮೂರ್ಖನೆ ಘಡ ಏನೆಂದೆ | ಬಲ |
ವಾರ್ಕೇಳುವರಾನಿಂದೆ ||
ಇರ್ಕೆಯ ಸುರಬಲ ಪಾರ್ಕಾಣೆಸಗಿದೆ |
ತೋರ್ಕಲಿತನ ನುಡಿ ಯಾರ್ಕೇಳುವರ್ ಸುಡು || ೨ ||

ಜುಲ್ಮೆಯ ನುಡಿ ತೋರೆಂದು | ಶಿಖಿ |
ಗಾಲ್ಮೇಲ್ಮಾಡಿದಡಂದು ||
ನಾಲ್ಮೊಗಪಿತ ನಿಜ ಬಲ್ಮೆಯ ಶಸ್ತ್ರದಿ |
ಪಲ್ಮೊರೆದೆಚ್ಚಡೆ ಬಿಲ್ಮುರಿದಯ್ದಿದ || ೩ || 302 ||

**ವಾರ್ಧಕ**
ಅನಲನ ಪಲಾಯನದಿ ಖತಿಯೊಳಂ ಧೃತಿಯೊಳಂ |
ದಿನಪಾಲ ಧ್ರುವ ಸೋಮರೊತ್ತಿದರ್ ಮುತ್ತಿದರ್ |
ದನುಜ ಕಿನ್ನರ ಯಕ್ಷರಾನೆಯಿಂ ಸೇನೆಯಿಂದುರಿಯ ನೊರಜುಗಳೆನ್ನಲು ||
ವನಜನಾಭಂ ಕೆರಳಿ ಮೆಟ್ಟುತಂ ಘಟ್ಟುತಂ |
ಘನ ಚಾತುರಂಗ ಬಲ ಕಾಂತಿಯಂ ಶಾಂತಿಯಂ |
ಅನುಗೊಳಿಸೆ ಕಾಣುತಿಭವೇರುತಂ ಸಾರುತಂ ಹರಿಯೆಂದ ಸುಸ್ವರದೊಳು || ೧ || 303 ||

**ಭೈರವಿ - ಅಷ್ಟ**
ಏನಿದು ಪದ್ಮನಾಭ | ಬಡವರನೆಲ್ಲ |
ಹಾನಿಗೈಯುವದೆ ಶಾಭ ||
ಶ್ರೀನಾರಿ ಕುಚಕುಂಕುಮಾಂಕ ದಿವ್ಯಾಂಗಕ್ಕೆ |
ಬೇನೆಯಾಗದೆ ಸುಲಭ || ೧ ||

ಉಪಕಾರಗೇಡಿಗಳ | ಗುರುವಲ ನೀನು |
ವಿಪರೀತ ಹೆಂಮರುಳ ||
ಉಪಚಾರವ್ಯಾಕೆ ಸಂಗರಕಿದಿರಾದ ಮೇಲ್ |
ವಪು ಕಾಯೆ ಮನೆಗಯ್ದಿಲ || ೨ ||

ಆ ಮಾತೇತಕೆ ಸ್ವಾಮಿಯೆ | ನಿಮ್ಮೊಳಗಿನ |
ಪ್ರೇಮದಿ ನಾ ನುಡಿಯೆ ||
ಈ ಮಹಾ ಧುರಕಂಜಿ ಪೋದೆನಾದರೆ ಶಚಿ |
ಭಾಮಿನಿ ಪೇಳ್ ನಗಳೆ || ೩ ||

ಅಂಕದ ಕಲಿ ಮಘವ | ಈ ನುಡಿಯಿದು |
ಮಂಕುಗಳೆಂಬ ಭಾವ ||
ಕಂಕುಳ ಗುದಿಗೆ ಕೈಗಳ ನಮಸ್ಕಾರ ಸಾ |
ಕಂಕದಿ ನಿಲ್ಲೆಂದನು || ೪ ||

ನೋಯಲಾಗದು ಚಿತ್ತದಿ | ಶ್ರೀಕರ ರಂಗ |
ರಾಯ ಭಕ್ತರ ಮೋಹದಿ ||
ಬಾಯಾರದಿರು ವಜ್ರಾಯುಧವಿದೆಯೆಂದು |
ಪಾಯದೊಳಿಡೆ ಭರದಿ || ೫ ||

ಬರುವಾ ವಜ್ರಕೆ ಧುಮುಕಿ | ಶ್ರೀಧವ ತನ್ನ |
ಕರದಿಂದ ಪಿಡಿದು ನಾಕಿ ||
ಗರ ಪತಿ ನಾಚಿಕೆಗೆಡುಕ ಹೋಗೆನೆ ಮೊಗ |
ತಿರುಹಲಂದಮರನಾಥ || ೬ ||

ಅಗ್ರದಿ ಕಾಮನಯ್ಯ | ಮತ್ತಾ ಬಲ |
ನಿಗ್ರಹಿಸುತ್ತ ಜಯ ||
ವಿಗ್ರಹದೊಳು ಪೊಂದಿ ವಿಹಗನ ಪೆಗಲೇರು |
ತುಗ್ರನ ಖತಿ ತಳೆದು || ೭ || 310 ||

**ಭಾಮಿನಿ**
ಕಂಡು ವಿಧಿಗಿಂತೆಂದ ಬಾಹಿರ |
ಕಂಡೆಯಾ ನಿನ್ನಖಿಳ ಪಾಯ್ದಳ |
ಗಂಡರೋಟದ ಜಡರೊ ಮರುಳರೋ ನೋಡು ಮಗುಳಿತ್ತು ||
ಉಂಡರುಪ್ಪಿನ ಕೆಲಸಕೊದಗದ |
ಜೊಂಡು ಮುನಿಗಳೊ ನಿಲುವವರು ಮುಂ |
ಕೊಂಡು ಕೈದೋರ್ಜೀವಗಳ್ಳರ ಗಂಡ ಕಡು ಧೂರ್ತ || ೧ || 311 ||

**ವಾರ್ಧಕ**
ಎಂದಾ ಮುರಧ್ವಂಸಿ ಮೂದಲಿಸಲಂಭೋಜ |
ಕಂದನೋ ವಾಲವಿಗಿದುರಗನೋ ಕಡು ವಿಲಯ |
ದಿಂದುಧರನೋ ನೊಂದ ಕಿಟಿಯೊಯೆನಲುಸುರೊಳಂ ವಿಸ್ಫುಲಿಂಗಗಳುದುರಲು ||
ಚಂದವಹ ಕಲಹಂಸೆ ತೇರಡರ್ದಿರದೆ ಧಿ |
ಗ್ಗೆಂದು ಘನ ಕೋದಂಡ ಝೇಂಗೈದು ಹೂಂಕರಿಸಿ |
ನಿಂದು ಬ್ರಹ್ಮಾಂಡ ಘಟ ಬಿರಿಯೆ ಸಿಂಹಧ್ವಾನದಿಂದೆಂದ ಹರಿಗುರಿಯೊಳು || ೧ || 312 ||

**ಭೈರವಿ - ಏಕ**
ಎಲೆ ಮುಗುಳಂಬನ ಪಿತನೆ | ಸುಡು |
ಕಲಿತನ ಘನವೆಮ್ಮೊಡನೆ ||
ತಲೆ ಪಿತೃಗಳ ಶಾನೆ | ಕ್ಷಣ |
ದಲಿ ನಾನಿಳಿಸುವೆ ಭಟನೆ || ೧ ||

ನಂದನನೆಂದೀವರೆಗೆ | ದಯ |
ದಿಂದಿರಲೆನ್ನೊಳ್ ಸಲುಗೆ ||
ಇಂದೇನಾಡಿದೆ ನಿನಗೆ | ಕಾಲ |
ಬಂದುದು ನಡೆ ಮುದಿಗೂಗೆ || ೨ ||

ಸತ್ತು ಶವಕೆ ಜನಿಸಿದಗೆ | ತಾ |
ಹೆತ್ತವನೊಳ್ ದಯ ಹೇಗೆ ||
ವ್ಯರ್ಥದಿ ಬಂದು ಕಾದುವಗೆ | ಕಾಲ |
ಮಿತ್ತು ನುಂಗದೆ ಮಿಗೆ ಕಾಗೆ || ೩ ||

ಪದಪಿನ ತಲೆ ನೀಗಾಡಿ | ಮೆರೆ |
ಮಧುಮನೆ ಶವನಹ ಖೋಡಿ ||
ಕದನಕೆ ನಿಲ್ ಕೈಮಾಡಿ | ಸದೆ |
ದುದುರಿಪೆ ನಾಲ್ವೆಸೆಗಾಡಿ || ೪ ||

ಖೋಡಿಯ ಶವ ನೀನಾಗೆ | ಈ |
ರೂಢಿಯು ಸಲ್ಲದೆ ಕಡೆಗೆ ||
ಕೂಡಿದೆ ನೀರ್ಮನೆ ಗತಿಗೆ | ನಿಲ್ |
ನೋಡೆನ್ನಂಬಿನ ಬೇಗೆ || ೫ || 317 ||

**ಕೇದಾರಗೌಳ - ಅಷ್ಟ**
ಧಿರುರೆ ಪರಾಕ್ರಮಿ ಬಲ್ಲೆಯ ಧನುವಿಗೆ |
ತಿರುವನೇರಿಸುವ ಪಾಡು ||
ಬೆರಳೊಳು ದರ್ಭೆಯ ಮುರಿವುದಲ್ಲದೆ ವ್ಯರ್ಥ |
ಬಿರಿಸಾಟ ಸಲುಗೆ ನೋಡು | ಮತ್ತೆ ಮಾತಾಡು || ೧ ||

ಕಂಡೆಯ ನೆರೆದ ಮಹಾಜನ ಸಲೆನುತಿ |
ಗೊಂಡೆನ್ನ ಪೂಜಿಪುದ ||
ಉಂಡಾಡಿ ಭಟ ಲಕ್ಷಗೊಂಡರೆ ನಿನ್ನ ಪ್ರ |
ಚಂಡರಾರೀಗೆಂಬುದ | ನೀ ಪೇಳದ || ೨ ||

ಕುಣಿದರೆ ಮರುಳೊಬ್ಬ ಬತ್ತಲೆ ಕಂಡವ |
ರ್ಕುಣಿದಾಡ ಬೇತೆ ಭಂಡ ||
ನೆಣಗೊಬ್ಬಿ ನಿನ್ನ ನೀನರಿಯದೆ ಬಗುಳೆ ಕುಂ |
ಭಿನಿಯರಿಯಳೆಯುದ್ದಂಡ | ಜನರ ಪಾಡ || ೩ ||

ನೆರೆದವರಿವರೆಲ್ಲ ಮರುಳರೆ ನೀನೊಬ್ಬ |
ದೊರೆಯೆ ಶಭಾಸಿನ್ನೇನು ||
ಅರೆಕ್ಷಣ ತಡೆದಿಟ್ಟರಿರದವರೆಂಬುದ |
ಪರಿಕಿಪೆ ಧುರದಿ ನಾನು | ನೋಡೆಂದನು || ೪ ||

ಕಣ್ಣಾರೆ ಕಂಡೆಯೊದ್ದಾಡಿ ಈ ಸಭೆ ಶೌರ್ಯ |
ದಣ್ಣರ ಸೆಣಸಿ ಜವಾ ||
ಹಣ್ಣಿದ ಸೊಡರ ಪತಂಗಗಳಾದರ |
ದೆಣ್ಣಿನೀನೆನ್ನಹವ | ನಿಲ್ಲೆಂದವ || ೫ || 322 ||

**ವಾರ್ಧಕ**
ಸೇದಿ ತಾಂ ಸವಡಿವೆರಳಿನೊಳಂಬ ಕರ್ಣಾಂತ |
ಕಯ್ದಿಸಿ ನುಡಿದನೆಲವೊ ಬೊಮ್ಮ ಬೊಮ್ಮೇತಿಗಾ |
ಕಾದೊಡರಿಯದೆ ಪೋದೆಲಾ ನೋಡು ನೋಡಾದೊಡೆನ್ನ ನಾರಾಚವೆನುತ ||
ವೇದಚೋರಧ್ವಂಸಿಯೆನಲಾ ಕಳಂಬಮಂ |
ಭೇದಿಸುತ್ತಲೆ ಬಲ್ಲೆ ಬ್ರಹ್ಮಹತ್ಯಕ್ಕಂಜಿ |
ಕಾದೆಲಾ ಭೃಗು ಸತಿಯ ಸುಡು ನಿನ್ನ ಜಂಭಮಂ ಸೆಣಸೆಂದನಾ ವಿಧಾತ || ೧ || 323 ||

**ಪಂಚಾಗತಿ - ಮಟ್ಟೆ**
ಮಗುಳೆ ಸ್ವರ್ಣ ಪುಂಖಯುಕ್ತ ಖಗಗಳಿಂದಲಿ |
ಗಗನ ಧಾತ್ರಿ ಕಾಣದಂತೆ ಮಗನೆಸೆಯೆ ಕಲಿ ||
ಖಗವರೂಥನಳಿಸಿ ನೀನೆ ಬಿಗುಹೆನುತ್ತಲಿ |
ಬಗೆದ ಫಲವನುಣ್ಣೆಂದೆಚ್ಚ ನಗುತ ಪಿಂಗಳ || ೧ ||

ಬರುವ ವಿಶಿಖ ಕಡಿದು ಭುಜಗ ಗಿರಿ ತಮಾಸ್ತ್ರವ |
ಸುರಿಯೆ ಗರುಡ ವಜ್ರ ಸೂರ್ಯ ಶರದಿ ಮಾಧವ ||
ವಿರದೆ ಗೊಲಲು ಮತ್ತೆ ಬ್ರಹ್ಮ ಸುರಪ ಬಾಣವ |
ಕೆರಳಿ ಬಿಡಲು ಶಚಿ ಕಳಂಬದುರಿಗೆ ಬಾಡುವ || ೨ ||

ಬಿತ್ತರವನು ಕಂಡು ಕಾಲಮಿತ್ತು ಮಾರ್ಗಣ |
ವೆತ್ತಿ ಬಿಡಲು ಹರಿ ಪ್ರತ್ಯಕ್ಷ ತೆತ್ತು ಗೆಲೆ ತನ್ನ ||
ಬತ್ತಳಿಕೆಯಿಂದುಗಿದು ನಿಜ ಕೋಲೆತ್ತಿ ಕಾಮನ |
ಪೆತ್ತಗಾ ಹಿರಣ್ಯಗರ್ಭ ಬಿತ್ತರಿಪ ಘನ || ೩ || 326 ||

**ಭಾಮಿನಿ**
ಜಡಜದೃಶ ಕೇಳ್ ಹುಲು ಶಿಳೀಮುಖ |
ಕಡಿದವೋಲಲ್ಲೀ ಮಹಾಸ್ತ್ರದ |
ಕಡುಹು ನಿನ್ನನು ಕೊಳ್ಳದೀಕ್ಷಿಸೆನುತ್ತ ಪೊಡೆಯಲ್ಕೆ ||
ಘಡ ಘಡೆಂದಾರ್ಭಟಿಸಿ ಮೃಡಸಖ |
ಕಿಡಿಯುಗುಳ್ವ ನಿಜ ವೈಷ್ಣವಾಸ್ತ್ರವ |
ತೊಡಿಸಿ ಕಾರ್ಮುಕಕೆಚ್ಚ ಪೇರ್ಗಿಡಿ ಕವಿಯೆ ತ್ರೈಜಗಕೆ || ೧ || 327 ||

**ಅಹೇರಿ - ಏಕ**
ಯುಗಳಾ ಬಾಣಗಳಂದು | ಬಲ್ |
ಬಗೆಯೊಳ್ಕಾದಲು ನೊಂದು ||
ಜಗ ಬಾಯ್ ಬಿಡೆ ಮೇಣ್ ಗಗನಕೆ ಲಂಘಿಸಿ |
ಹಗುರವಾಗೆ ನಿಂದು || ೧ ||

ಮತ್ತೀರ್ವರು ವಾಹಗಳ | ಇಳಿ |
ಯುತ್ತಾ ಬಿಟ್ಟು ಧನುಗಳ ||
ಬತ್ತೀಸಾಯುಧ ಪೊತ್ತು ಕಾದುತ ಗದೆ |
ಯೆತ್ತಿ ನಿಂದರ್ಕೇಳ || ೨ ||

ಧಿರುರೇ ಧಿರುರೇ ಶ್ರೀಶ | ಬಲ |
ವಿರಲು ತೋರ್ಕೈ ಬಿರಿಸ ||
ಅರಿಯಾ ಬಹುದ್ಯೆ ಗರುವಾರಾರೆಂ |
ದೆರಗೆ ತಡೆದ ಸಹಸ || ೩ || 330 ||

**ವಾರ್ಧಕ**
ಘಡ ನಿಲ್ಲು ನಿಲ್ಲೆಂದು ನುಡಿದಪರ್ ಸಿಡಿದಪರ್ |
ಬಡಿದು ಕೈಮಸಕಮಂ ದೋರುವರ್ ಚೀರುವರ್ |
ಸಿಡಿಲಂತೆ ಹರಿಯಂತೆ ತಾಂಕುವರ್ ಮೂಂಕುವರ್ ಹರಿಯಜರ್ ಸಂಗರದೊಳು ||
ಕಡು ಬಳಲುತುಭಯ ಭಟರಮರಿದರ್ ಬೆಮರಿದರ್ |
ಪೊಡವಿಯೋಳ್ ವಿಶ್ರಮಿಸುತಿರುತಿರಲ್ ಭರಿತ ಬಲ್ |
ಗಡೆ ವೀರ ಹಂಸ ಗರುಡರು ನಿಂದು ಜರೆದಂದು ಮಾತಾಡಿದರ್ಬರದೊಳು || ೧ || 331 ||

**ಸೌರಾಷ್ಟ್ರ - ತ್ರಿವುಡೆ**
ಎಲೆ ಗರುತ್ಮನೆ ಕೇಳು ರುಂಹರಿ |
ಹುಲು ಬಿಲೇಶಯಗಳನು ಸೀಳುವ |
ಬಲುಹ ತೋರಾ ಕೊಳುಗುಳದೊಳೆ | ನ್ನಲಿ ಶಭಾಸು || ೧ ||

ಆ ಹರಿಗಳಿಗೆ ಸುತನೊ ಮೊಮ್ಮನೊ |
ನೀ ಹಿರಿಯನೋ ಹಂಸ ನಿಜಗುರು |
ದ್ರೋಹಿ ಬ್ರಹ್ಮನ ಹೊರುವೆ ಬಿಡೆ ನಿ | ಲ್ಲಾಹವದಲಿ || ೨ ||

ತಾಯಿಗೋಸುಗ ಸುಧೆಯ ನಿರ್ಜರ |
ನಾಯಿಗಳ ಬಡಿದೊಯ್ಯ ಬಲು ಹ |
ಸ್ತ್ರಾಯತವ ತೋರೆಂದು ಮೆಟ್ಟಿದ | ನೋಯೆ ಗರುಡ || ೩ ||

ಸಿಡಿಲವೋಲ್ ಘುಡು ಘುಡಿಸಿ ಖಗಪತಿ |
ನುಡಿದನೆಲೆ ಬಡಕುರಿಗೆ ವ್ಯಾಘ್ರನ |
ತೊಡಕು ಸಲುಗೇ ನೋಡೆನುತ ಶಿರ | ಕೊಡನೆ ತುಳಿದ || ೪ ||

ಬಿದ್ದ ಹಂಸನ ಗುದ್ದುತೆಲೆ ವಿಧಿ |
ನೊದ್ದೆ ನೋಡಾ ನಿನ್ನ ವಾಹನ |
ಗಿದ್ದ ಋಣ ತಿದ್ದುವೆನು ಬಾ ಏ | ಳುದ್ಧರಿಪಡೆ || ೫ || 336 ||

**ಭಾಮಿನಿ**
ಎಂಬ ನುಡಿಯಿಂ ಮುನ್ನ ವಿಧಿ ಕಮ |
ಲಂಬನೆಸೆಯುತ ಬಿಡಿಸೆ ಹಂಸನ |
ಮುಂಬರಹಿವ ಕಾಶ್ಯಪಿಯ ತಡೆದಸುರಾರಿ ತಾ ಮತ್ತ ||
ಅಂಬುಜೋದ್ಭವನುಭಯರ್ಕರ್ಪುರ |
ತಾಂಬುಲವ ತಮ್ಮುಮ್ಮೊಳಳವಡಿ |
ಸಿಂಬಿಡಿದು ಧುರಕೆದ್ದು ಪ್ರತಿಭಟಗೆಂದ ಶ್ರೀನಾಥ || ೧ || 337 ||

**ಅಹೇರಿ - ಝಂಪೆ**
ಧೀರನೈ ಭಳಿರೆ ಸೃಷ್ಟ | ಎನಗಲ್ಲ |
ದಾರಿಂಗೆ ನಿನ್ನಳವಿ ಇಷ್ಟ || ಧೀರನೈ || ಪ ||
ಖೋಡಿ ನಿನ್ನಯ ಸತ್ವ | ನೋಡಿದಿಲ್ಲೀವರೆಗೆ |
ರೂಢಿಯೊಳು ಕಡು ಮೂರ್ಖ | ಮೂಢ ಕೃಪಣರ ಧನವ |
ಗಾಡಿಯಿಂದೆತ್ತಲ್ಕೆ ಲೇಸು || ಈ ಪಂಥ |
ಪಾಡಿನಿಂ ನೀನದರ ಬಿಡಿಸು | ಧುರದಿ ಚೆಂ |
ಡಾಡುವೆನು ನಾಲ್ವಲೆ ಶಭಾಸು || ಧೀರನೈ || ೧ ||

ವಸುಧೆಯೊಳು ಭಟರು ಮು | ನ್ನೆಸೆದಂತಲ್ಲಿಂದು |
ಪೊಸ ರಣಾಗ್ರದ ಶೌರ್ಯ | ದೆಸೆವ ಮೀಸಲನಳಿಸಿ |
ಕುಶಲದಿಂ ಸೊಂಪಾಡಬೇಕು ||
ತ್ರೈಭುವನದಸಮ ಬಲರೀಕ್ಷಿಸಲಿ ಠೀಕು | ಭೇರಿ ಬಾ |
ರಿಸಲಿ ನಿರ್ಜರರೀಸೆ ಸಾಕು || ಧೀರನೈ || ೨ || 339 ||

**ಭಾಮಿನಿ**
ಕೇಳಿ ರಿಪು ಧೂಳಿಪಟನೆದ್ದ ಘ |
ಡಾಳಿಸುವ ಖತಿ ಶಿಖಿಯೊಳಂಬುಧಿ |
ಯೇಳು ಬತ್ತಿತೆನಲ್ಕೆ ವಿಧಿ ಬೋರ್ಗುಡಿಸಿ ಸಿಡಿಲಂತೆ ||
ಕೇಳು ಧುರದಾರಿದ್ರನೇ ನಾ |
ಬಾಳಗೊಡೆನೆನಲುಭಯರುಂ ಕೆಂ |
ಧೂಳ ಮೈಬಿಗಿದುಟ್ಟಿ ಜಟ್ಟಿಯರ್ ನಿಂದರೋರಂತೆ || ೧ || 340 ||

**ಸುರುಟಿ - ಮಟ್ಟೆ**
ಸೆಣಸಿದರವರು | ರಣದೊಳಗಿದಿರು || ಸೆಣಸಿ || ಪ ||
ಪಿಡಿಯುತ ಬಿಡಿಸುತ ಬಡಿಯುತ |
ಲೊಡನೊಡನಾ ಬಲರು |
ಅಡಿಯಿಡೆ ಕೂರ್ಮಗೆ ಫಣಿಪಗೆ |
ಯಡಿಸಿದುದತೆ ಭೀರು || ಸೆಣಸಿ || ೧ ||

ಘರ್ಮಜಲಾವಳಿ ಝೋರಿಡೆ |
ವರ್ಮೋರ್ಮಂಗಳನು ||
ನೀರ್ಮನೆ ಬೇರ್ಮನೆಯರ್ತಿವಿ |
ದರ್ಮತೊಡನೊಡನು || ಸೆಣಸಿ || ೨ ||

ಪದ್ದುವರೂಥನು ಎನಗಿದಿ |
ರೆದ್ದನೆ ಇವನೆಂದು ||
ಗುದ್ದಿದಡಜ ಶಿರ ಬಿರಿದು ಧೂ |
ಳೆದ್ದುದು ನಭಕಂದು || ಸೆಣಸಿ || ೩ || 343 ||

**ವಾರ್ಧಕ**

ಹರಿ ಹತಿಗೆ ಧಾತ ಧಾತ್ರಿಯೊಳೊರಗಿ ಎದ್ದು ತಲೆ |
ಬಿರಿದಿಳಿದ ನೆತ್ತರಂ ಬಳಿದು ಪೋಳ್ಗಳನೊತ್ತಿ |
ಶಿರಮೊಡೆದಡೇನು ನಾ ಕೀಳ್ಪಲನೆಯೆಂದು ಪುನರಪಿ ಕ್ಷುದ್ರ ಚಿತ್ತನಾಗಿ ||
ಹರಿಗೆ ಮಾರಾಂತು ಬಾಹುದ್ವಯವನಪ್ಪಳಿಸಿ |
ಮುರಿದದ್ದುವೆಂ ನಿಲ್ಲು ತಲೆಗೆ ತಲೆಗೊಂಬೆನೆಂ |
ದಿರದವನ ಹಿಂದು ಮುಂದೆಣಿಸಿ ರೂಪಂ ಜರೆದರೊಷ್ಟ ತಾಮ್ರಾಕ್ಷನಾಗಿ || ೧ || 344 ||

**ಶಂಕರಾಭರಣ - ಮಟ್ಟೆ**

ಧೀರನಹುದೊ ಭಳಿರೆ ವಿಷ್ಣು | ನೀರ ಹೊಕ್ಕ ಜಾಡ್ಯ ಗಿರಿಯ |
ಭಾರಪೊತ್ತ ಮೂಢ ಧರೆಯ | ಬೇರನಗಿದವ ||
ಕ್ರೂರ ನೀಚ ಕರುಳನುಂಡ | ಮಾರಿ ಭಿಕ್ಷು ಹೀನ ತಾಯ |
ಮೀರಿ ಕೊಂದ ದ್ರೋಹಿ ಪ್ರೀಯ | ನಾರಿ ಕಳೆದವ || ೧ ||

ಷಂಡ ಗೊಲ್ಲ ಕಳ್ಳ ಲಜ್ಜ | ಭಂಡ ಬೌದ್ಧ ಪಾಪಿಕಲ್ಕ್ಯ |
ಪುಂಡ ನೀ ಬಲಾಢ್ಯನೇನೊ | ದೊಂಡೆಗರುಳನು ||
ಹಿಂಡದಿರೆನುದ್ದಂಡ ನಿನಗೀ | ಚಂಡ ಪೂಜೆ ಹಿರಿಯ ತನಕೆ |
ಕಂಡು ಕೊಳ್ಳೆಂದೆರಗೆ ಲಕ್ಷ್ಮಿ | ಗಂಡ ನೊಂದನು || ೨ ||

ಥಟ್ಟನೆದ್ದ ಭರಕೆ ಮೇರು | ಬೆಟ್ಟ ನಡುಗಿತವನಿ ಕುಸಿಯೆ |
ಬಟ್ಟೆವಿಡಿದರಮರರ್ಮರಗ | ಳೊಟ್ಟು ಜರಿದುದೊ ||
ಗುಟ್ಟನರಿಯೆನಜನ ಕಂಡು | ಸಿಟ್ಟಿನಿಂದ ಚಕ್ರಗೊಂಡು |
ಕೆಟ್ಟ ತಲೆಯ ಕೊಳಕ ಪಾರ್ವ | ದಿಟ್ಟನಪ್ಪುದೊ || ೩ ||

ಪರಮ ಪಾಪಿ ಹೊಕ್ಕುಳೊಳಗೆ | ದುರುಳ ನೀಚ ಭಂಡ ಷಂಡ |
ತರಳೆಗೆರೆಯ ದ್ರೋಹಿ ಭಿಕ್ಷು | ಶಿರವ ಕಳೆದೆಲ ||
ವರ ಪಿಶಾಚಿ ಜಾಡ್ಯವೇದ | ಮರೆದು ತುರುವ ಸೃಜಿಪ ಕಳ್ಳ |
ರೆರೆಯ ಮೂಢ ನೀ ರಣಾಗ್ರ | ಮರುಳ ನೀನೆಲ || ೪ ||

ಹಿಡಿ ಪ್ರಸಾದವಿದಕೊ ನಿನ್ನ | ಕಡಿವೆನೊಮ್ಮೆಗೊಮ್ಮೆ ರಚಿಪೆ |
ನೊಡನೆ ಈ ಬ್ರಹ್ಮಾಂಡ ಭಾಂಡ | ತಡೆಯದಾನೆಲ ||
ದೃಢವೆನುತ್ತ ಕೆಡವಿ ಕುಸುಕಿ | ಝಡಿಯೆ ಚಕ್ರವಾಗ ನಭದ |
ನುಡಿಯ ಕೇಳಲಾಯ್ತು ಚೋದ್ಯ | ವಡಲು ಬಲ್‌ಬಲಾ || ೫ || 349 ||

**ವಾರ್ಧಕ**

ಅರಿಯದಜ್ಞರೆ ನಿಮ್ಮುಭಯರಿಗೆ ಲೋಕಕಂ |
ಗುರು ವಸ್ತು ಪ್ರತ್ಯೇಕವೊಂದುಂಟದೀಗಿಲ್ಲಿ |
ಭರದಿ ಜನಿಸುವದದರ ಪದ ಮಸ್ತಕವ ಕಂಡು ಮುಂಬರೇ ವಿಗಡರೆಂದು ||
ಒರೆಯಲಶರೀರ ನುಡಿ ಕೇಳ್ದು ಬೆರಗಾಗಿ ನಿಂ |
ದಿರಲಾಗಲುದಿಸಿತೈ ತರಣಿ ಕಿರಣಂಗಳಂ |
ಕರಗಿ ಗರುವಿಟ್ಟೆರೆದ ಪಿರಿಯ ಮೂಲಸ್ತಂಭವೆನೆ ಲಿಂಗಮುದಯಿಸಿದುದು || ೧ || 350 ||

**ಭಾಮಿನಿ**
ಪರಮ ಲಿಂಗಕೆ ಪೀಠಧರೆಗಿರಿ |
ಮೆರೆವ ಭುಜವಬ್ಧಿಗಳೆ ಕುಕ್ಷಿಯು |
ತರಣಿ ಶಶಿ ಶಿಖಿ ನೇತ್ರ ಪದಕಮಲಂ ರಸಾತಳದಿ ||
ಮಿರುವ ತಾರಾ ಪುಷ್ಪ ಗ್ರಹ ಗಣ |
ರುರೆ ಕುಸುಮವೆನೆ ಲಿಂಗ ಶೋಭಿಸೆ |
ಹರಿಯಜರು ಕಂಡೆರಗಿ ಮಿಗೆ ನಿರ್ಧರಿಸಿದರು ಭರದಿ || ೧ || 351 ||

**ಪರಿವರ್ಧಿನಿ**
ಪಾದಕೆ ಹರಿ ಶಿರಕಜವೆಂದಿರದೆ ವಿ |
ನೋದದೊಳಾಡುತ್ತಿರದೆ ಮುರಾಂತಕ |
ಭೂಧರ ರೂಪದಿ ಧರೆ ಬಗಿದಿಳಿದನು ಸರಸಿಜಭವನಿತ್ತ ||
ಮೋದದಿ ಮಸ್ತಕ ನೋಡಲ್ ಪೋಗುತ |
ಹಾದಿಲಿ ಬಳಲುತ ಬಪ್ಪಾಗಲು ಇದಿ |
ರಾದ ಸುಕೇತಕಿ ರಾಜನ ಕಾಣುತ ಕೇಳಿದ ಮಣಿಯುತ್ತ || ೧ || 352 ||

**ವಾರ್ಧಕ**
ಎಲೆ ಮಹಾತ್ಮನೆ ನಮಸ್ಕಾರವೆಲ್ಲಿಂದಾಯ್ತು |
ನಿಮಗೆಂದೆನಲು ಪರಶಿವನ ಮಕುಟದಿಂ |
ದಿಳಿತಂದೆನೀಗ ಕೇತಕಿಯೆಂಬುದಭಿಧಾನಮೆನಗೆ ನೀನಾವನೆನಲು ||
ಜಡಜಸಂಭವ ನಾಂ ಸದಾಶಿವನ ಕೋಟೀರ |
ತಿಳಿಯಲಯ್ದುವೆನಿಲ್ಲಿಗೆನಿತು ಗಾವುದವುಂಟು |
ತಿಳಿಪೆನಲ್ ನಸು ನಕ್ಕು ಪಲಯುಗದೊಳಯ್ದಿಯುಂ ಕಾಂಬುದಘಟಿತವು ಕೇಳು || ೧ || 353 ||

**ಸಾರಂಗ - ಅಷ್ಟ**
ಎಂದ ಮಾತನು ಕೇಳುತ್ತ | ಬೊಮ್ಮನು ಬಲು |
ನೊಂದು ಚಿಂತೆಯ ತಾಳುತ್ತ ||
ಮುಂದಿಪ್ಪ ಕೇತಕಿಗೆಂದನೆನ್ನಯ ಮಾತ |
ನೊಂದನಾಲಿಸು ಗುಣ ಸಿಂಧು ಚಂದ್ರ ದಯದಿ || ೧ ||

ಪರವಸ್ತು ನಾನೆನುತ | ಗರ್ವಿಸೆ ಹರಿ |
ಕೆರಳಿ ಸಂಗರಗೈಯುತ ||
ಲಿರಲಭ್ರನುಡಿಯಾಯ್ತು ವರ ಲಿಂಗ ಜನಿಪುದ |
ದರ ಶಿರ ಪದ ನೋಡಿ ಬರುವರೆ ಘನರೆಂದು || ೨ ||

ಸರಸಿಜ ದಳ ಲೋಚನ | ಕೆಳಗಯ್ದಿ ಮೇ |
ಲ್ತಿರುಗಿ ಬಂದೆನು ಜತನ ||
ನೆರ ಮುಂದೆ ಪೋಗುವ ಪರಿ ಕಾಣೆ ಮುನ್ನ ನಾ |
ತೆರಳಿ ಭಾಷೆಯ ಗೆಲ್ವ ತೆರನ ಮಾಡೆನಲೆಂದ || ೩ || 356 ||

**ದೇಶಿ - ಅಷ್ಟ**
ಏನೆಂಬೆ | ಬ್ರಹ್ಮ | ಏನೆಂಬೆ || ಪಲ್ಲ ||
ಗರುವದಿ ಹರಿಗೆ ನೀ ಭಾಷೆಯ ಪೇಳಿ |
ಬರುತಿಲ್ಲಿ ನಿಂದು ಪಲ್ಗಿರಿವೆ ದಿವಾಳಿ ||
ಅರಿತೆ ನಿನಂತಸ್ಸ ನಾ ಧೈರ್ಯ ತಾಳಿ |
ಪೊರೆಯ ಬೇಡವೆ ನಿನ್ನ ಸುಳ್ಸಾಕ್ಷಿ ಹೇಳಿ || ಏನೆಂಬೆ || ೧ ||

ಹಂಕಾರದೊಳಗಾತ್ಮ ಪುತ್ರಿಯ ನೆರೆದೆ |
ಶಂಕರಗಿದಿರಾಗಿ ತಲೆಹೊಂದ ಕಳೆದೆ ||
ಪಂಕಜಾಕ್ಷನೊಳಿಂದು ಸೋತಿಲ್ಲಿ ಬಂದೆ |
ಭೋಂಕನೆ ಎನ್ನೊಳು ಏನೆಂದೆ ಹಂದೆ || ಏನೆಂಬೆ || ೨ ||

ಹುಲಿಯ ಬಣ್ಣಕೆ ಮತ್ಸರದಿ ನರಿ ಮೈಯ |
ಸಲೆ ಸುಟ್ಟು ಗಾದೆ ಮಾಡಿದುದ್ಯಾತಕಯ್ಯ ||
ಹುಲು ಭಟ ಧುರ ಹೇಡಿ ನೀನಹುದಯ್ಯ |
ಫಲವೇನು ಪೇಳ್ನಿನ್ನ ತಳ್ಳಿ ಸಾಕಯ್ಯ || ಏನೆಂಬೆ || ೩ || 359 ||

**ಭಾಮಿನಿ**

ಎನುತ ಕೇತಕಿ ರಾಜ ನಿಜ ಮೊಗ |
ವನು ತಿರುಹೆ ಕೈ ಮುಗಿದು ನೀನೇ |
ಎನಗೆ ಗುರು ಪಿತೃ ಮಾತೃ ಶರಣಾಹೆನಲು ಬಳಿಕಾತ ||
ವನಜಗರ್ಭಗೆ ಮೆಚ್ಚಿ ಬಂದುದ |
ನನುಭವಿಪೆ ನಡೆ ಏಳು ತಿರುಗೆನ |
ಲನುವಿನಿಂ ಮುನ್ನೀರ್ವರವರಾ ಸ್ಥಳಕೆ ಬರಲಿತ್ತ || ೧ || 360 ||

**ಸಾಂಗತ್ಯ - ರೂಪಕ**

ಹರನ ಪಾದವ ಕಾಣದುರೆ ನೊಂದು ಕಮಲಾಕ್ಷ |
ಬರೆ ಮೊದಲಿವರಿರಲಾಗ ||
ಬೆರಗಾಗಿ ಕೇಳ್ದ ಕಂಡೆಯ ಧಾತ ಶಿವನ ಶೃಂ |
ಗರದ ಕಿರೀಟವ ಬೇಗ || ೧ ||

ಎನಲೆಂದನಹುದು ಕಂಡೆನು ಸ್ವಾಮಿ ಶಿರದಿ ಗ |
ಗನಗಂಗೆ ಚಂದ್ರರಿಪ್ಪರಲ ||
ಮುನಿಗಳರ್ಚಿಪರಲ್ಲಿ ದಿಟವೆನೆ ಶಂಕಿಸು |
ತಿನಿತ ಕೇಳಿದ ವನಮಾಲ || ೨ ||

ನಿರತವೆ ಸಾಕ್ಷಿಯಾರೆನಲು ಕೇತಕಿ ರಾಜ |
ನರವಿಂದನಾಭ ಕೇಳ್ ಬ್ರಹ್ಮ ||
ನೆರೆ ಕಂಡನಹುದು ನಾನಿದ್ದೆನಲ್ಲೆನೆ ಕೇಳಿ |
ಯರಿದು ಮುರಾರಿಯಧರ್ಮ || ೩ ||

ಕಿಡಿಸೂಸಲಕ್ಷಿ ಮೇಣ್ ಮುಡಿದ ಕೇತಕಿ ಭಂಡ |
ನುಡಿದೆಯ ಕೂಟ ಸಾಕ್ಷಿಯನು ||
ಹಿಡಿ ಶಾಪ ಮುಂದಿನ್ನು ಮೃಡ ಶಿರಕೊಪ್ಪದಿರ್ |
ನಡೆ ದೋಷಿಯೆನಲಜ ತಾನು || ೪ ||

ನಡುಗುತ್ತಲಿರುವನ್ನೆಗಾ ಲಿಂಗದೊಳು ರುದ್ರ |
ನೊಡನೆ ಮೈದೋರೆ ಶ್ರೀಕರದಿ ||
ಜಡಜಾಕ್ಷ ನುತಿಗೈಯಲಜ ಪಾದದಲಿ ಬಿದ್ದು |
ಮೃಡನ ಸನ್ನುತಿ ಗೈದ ದೃಢದಿ || ೫ || 365 ||

**ವಾರ್ಧಕ**
ರಾಜಶೇಖರ ದಿವಿಜರಾಜ ವಂದಿತ ಪಾದ |
ರಾಜೀವ ವರ ರಾಜ ರಾಜ ಸಖ ಚಂದ್ರ ದಿನ |
ರಾಜ ಕೋಟಿ ಪ್ರಭಾ ರಾಜಿತ ಶರೀರ ಖಳರಾದ ಮದ ವಿಧ್ವಂಸನ ||
ರಾಜೀವಭವ ಮಕುಟ ರಾಜತುರತ್ನನೀ |
ರಾಜನ ಚರಣ ಭೋಗಿ ರಾಜ ಭೂಷಣ ಶೈಲ |
ರಾಜಾ ಸ್ಮೃಜಾ ಸ್ತನ ವಿರಾಜ ಕುಂಕುಮ ವಕ್ಷ ಸಲಹೆಂದ ವಾಣಿ ರಮಣ || ೧ || 366 ||

**ಕೇದಾರಗೌಳ - ಝಂಪೆ**
ಇಂತೆರಗಿ ನುತಿಸಲಾಗ | ಮೃಡನವರ |
ಸಂತೈಸುತೆಂದ ಸುಭಗ ||
ಕಂತುಪಿತ ಕೇಳ್ನೀಗ | ಅಜನಂತೆ |
ಭ್ರಾಂತನೇ ಪೇಳು ಬೇಗ || ೧ ||

ಕಾಳಾಯ್ತು ಧರಣೀ ತಳ | ವಿಧಿಯನೃತ |
ದೋಳಿಗದೊಳಹುದೆ ಪೇಳ ||
ಏಳು ಮುನ್ನಿನ ತೆರದೊಳು | ಗದನೆಲ್ಲ |
ಬಾಳಿಸೈ ಲಕ್ಷ್ಮಿಲೋಲ || ೨ ||

ಎಂದು ಮೇಣ್ ಕಮಲಜನನು | ಕಂಡು ಹರ |
ನೆಂದ ನೀ ಸ್ಥಿರಮತಿಯನು ||
ಹೊಂದಿ ಮೊದಲಂದವಿನ್ನು | ಸೃಷ್ಟಿಗುಣ |
ದಿಂದಿರೆನಲ್ಕವನೆಂದನು || ೩ || 369 ||

**ಮಧ್ಯಮಾವತಿ - ಏಕ**
ಪಾಲಿಸೆನ್ನಯ ತಪ್ಪ ಕರುಣೇಂದು ಮೌಳಿ |
ಕಾಲಕಾಲಾಂತಕ ಸೌಭಾಗ್ಯಶಾಲಿ || ಪಾಲಿಸೆ || ಪ ||
ಹರಿಹರರುಭಯರೆನ್ನರೆಯರಾಗಿರೆ ನಿಮ್ಮ |
ಳುರೆ ಸೆಣಸಿದ ಮೂಢ ಗರುವಿಯೆನ್ನುವನು ||
ನೆರೆ ಮನ್ನಿಸದಿರಿ ಸಂಹರಿಸಿ ಮೂರ್ಖನೆಂದು |
ಹರಗೊಮ್ಮೆ ಹರಿಗೊಮ್ಮೆ ಎರಗಿರಲಜನು || ಪಾಲಿಸೆ || ೧ ||

ಸಾಕು ಸಾಕಳಲುವದೇಕೆಂದು ಪಿಡಿದೆತ್ತಿ |
ಲೋಕೇಶ ನಿನ್ನ ಮೇಲಾ ಕೋಪವಿಲ್ಲ ||
ಯಾಕೆ ಚಿಂತಿಪೆ ಯೆನಲಾಕೆವಾಳರಿಗಜ |
ತಾ ಕೈಯ ಮುಗಿದೆಂದ ಬೇಕಾದುದೆಲ್ಲ || ಪಾಲಿಸೆ || ೨ ||

ಎರವಿಲ್ಲದುದು ದಿಟ ಖರೆಯಾಗಿ ನೀವೀಗೆನ್ನ |
ಶರೀರದೊಳ್ ಜನಿಸಿ ಬಂದರೆ ಸಿದ್ಧವಯ್ಯ ||
ಚರಣದಾಸನಭೀಷ್ಟ ನೆರೆ ಸಲಿಸುವದೆಂದು |
ಎರಗಲೆಂದರು ನಗೆವೆರಸಿ ನೆನಸಿ ಪರಿಯ || ಪಾಲಿಸೆ || ೩ || 372 ||

**ವಾರ್ಧಕ**
ಬೇಡವೀ ವರವಕಟ ನಿನ್ನೊಡಲೊಳಾವೊಡೆದು |
ಮೂಡಿದಾಗಲೆ ನಿನಗೆ ವಿಲಯ ತಪ್ಪದು ಮರುಳೆ |
ಬೇಡೆನಲ್ಕೇಳದಿರಲಾದಡಾವ್ ಜನ್ಮಿಸುವೆವೈ ದಿಟಂ ಮಾಡು ತಪವ ||
ನೋಡು ನಿಶ್ಚಲ ದೃಷ್ಟಿಯಿಂದೆಂದು ಶಿವನಯ್ದೆ |
ವ್ಯಾಡಶಯನಂ ವಿಧಿಯ ಬೀಳ್ಕೊಂಡು ನಿಜ ಗತಿಗೆ |
ಗಾಡಿಯಿಂದಯ್ದಲಜ ವರ ಸಮಾಧಿಯೊಳಿದ್ದು ಮರುಗಿದಂ ತಿಳಿದು ಭವವ || ೧ || 373 ||

**ನೀಲಾಂಬರಿ - ಏಕ**
ಹರನೆ ಇನ್ನೇನ ಮಾಳ್ಪೆನು | ಒಡಲೊಳು ಬೇ |
ರ್ವರಿದುದು ತಾಪವಿನ್ನು ||
ಧರಿಪೆನೆ ಗರ್ಭವದನು | ಪೊರೆವರಿಲ್ಲ |
ಹರಿಹರ ದ್ರೋಹಿ ನಾನು || ೧ ||

ಯಾಕೆ ಬೇಡಿದೆ ವರವ | ಸಾಕಯ್ಯ ಸಾಂಬ |
ಶ್ರೀಕಮಲಾಕ್ಷ ಮಾಧವ ||
ನಾ ಕೈಯ ಮುಗಿವೆ ದೇವ | ಮಹಾನುಭಾವ |
ನೀ ಕಾಯೊ ಶಾಂತ ಭಾವ || ೨ ||

ನಡುಗುತಿದೆನ್ನ ಕಾಲ್ಗಳು | ಝುಮ್ಮೆಂದು ಮೈ |
ಯುಡುಗಿತಿದೇಕೆ ಪೇಳು ||
ಮೃಡ ಪೊರೆ ಕರುಣದೊಳು | ಎನಲಾಗ ಶಕ್ತಿ |
ಯೊಡನುದಿಸಿದ ಕೃಪಾಳು || ೩ || 376 ||

**ವಾರ್ಧಕ**
ಸ್ಫಟಿಕ ಭಾಂಡದೊಳೆಸೆವ ಜ್ಯೋತಿಯಂದದೊಳಜನ |
ಘಟದೊಳಗೆ ಷಟ್ಚಕ್ರಮಂ ಭೇದಿಸುತ್ತ ಮೇಣ್ |
ನಿಟಿಲ ಮಧ್ಯದೊಳೊಡೆದು ಮೂಡಿದನುಮಾ ಶಕ್ತಿ ಸಹಿತಂ ಮಹೇಶನಂದು ||
ನಿಟಿ ನಿಟಿಲ್ಲೆಂದೆರಡು ಸೀಳಾದುದಜನ ತನು |
ತಟಿನಿಧರನಾ ಭದ್ರ ಕಾಳಿಯರ ಜನನ ದಿ |
ಗ್ತಟ ಬೆದರಿಸಿದುದಾಗ ಘುಡು ಘುಡಿಪ ನಿನದದಿಂದೇನೆಂಬೆನಚ್ಚರಿಯದು || ೧ || 377 ||

**ಭಾಮಿನಿ**
ಹರಿಯ ಭಾಗದಿ ಕಾಳಿಹರ ಪುರ |
ಹರನು ತಾವಿಂತೆಸೆದು ಮೇಣ್ ಶಿವ |
ಕರುಣದಿಂ ಪೋಳೆರಡನೊಂದಿಸಲೆದ್ದು ವಿಧಿ ಮೇಗೆ ||
ಹರಹರಾ ನಿಮ್ಮುಭಯ ಮಾರ್ತಿಗ |
ಳಿರವಕಂಡಂಜುವೆನು ಒಂದೇ |
ತೆರನನಹುದೆನಲರ್ಧನಾರೀಶ್ವರ ಸ್ವರೂಪಾಗೆ || ೧ || 378 ||

**ಪಂತುವರಾಳಿ - ರೂಪಕ**
ಜಯ ನಮೋ ತ್ರಿನೇತ್ರ ಶಂಕರ | ಶ್ರೀರುಂಡಮಾಲ |
ಭಯ ನಿವಾರ ರಿಪುಭಯಂಕರ || ಜಯ ನಮೋ || ಪ ||
ಓಂ ದಯಾಬ್ಧಿ ಚಂದ್ರಶೇಖರ | ವಿಮಾನವನ್ನು |
ತಂದೆವೆಂಬ ನಿನ್ನ ದೂತರ ||
ಪೊಂದಿಯಂದಣದಲಿ ಪೋಗಿ |
ನಿಂದು ಕಂಡೆ ಚಂದ್ರ ಶಿಖರ || ಜಯ ನಮೋ || ೧ ||

ಬಂದೆನಿಲ್ಲಿ ಮರಳಿ ಕ್ಷಿಪ್ರದಿ | ಇದೆಲ್ಲ ಸ್ವಪ್ನ |
ದಂದಲಾಲಿಸಭವ ಚಿತ್ತದಿ ||
ಮಂದಮತಿಯ ಕುಂದನೆಣಿಸ |
ದಿಂದು ಕಾಯೊ ಕಂದುಗೊರಳ || ಜಯ ನಮೋ || ೨ ||

ನೀಲಮಾಣಿಕಂಗಳೆರಡದು | ಒಂದಾದ ತೆರದಿ |
ಲೋಲೆ ಸಹಿತ ದೇವರೆಸೆವುದು ||
ಲೀಲೆಯಿಂ ವಿಶಾಲ ಕಂಡ |
ಮೇಲೆ ನಾಂ ಸುಶೀಲ ಧನ್ಯ || ಜಯ ನಮೋ || ೩ || 381 ||

**ಭಾಮಿನಿ**
ಎಂದು ಬಣ್ಣಿಸಿ ಬಳಿಕ ಬಲದಿಯ |
ಹೀಂದ್ರ ಕುಂಡಲ ಜಡೆ ಯೆಡದಿ ನವ |
ಪೊಂದೊಡರು ಗಿಣಿ ವಾಲೆ ಮೂಗುತಿಯಿಂದ ರಂಜಿಸುತ ||
ಒಂದೆ ರೂಪದೊಳೆಸೆವ ಮೂರ್ತಿಯ |
ಮುಂದೆ ವಾಣಿ ಸಮೇತ ವಿಧಿ ಮುದ |
ದಿಂದ ಪೂಜಿಸಿ ಮಂಗಳಾರತಿಗೈದ ನುತಿಸುತ್ತ || ೧ || 382 ||

**ಢವಳಾರ - ಏಕ**
ಶ್ರೀ ಮಹೇಶ್ವರಗೆ ಶಂಕರಿಗೆ |
ಕಾಮಹರಗೆ ಕಾತ್ಯಾಯನಿಗೆ |
ಸೋಮಾರ್ಕಾನಲ ನೇತ್ರನಾದವಗೆ |
ಕಾಮನ ಮುಂಗೈಯರಗಿಣಿ ಶಿವೆಗೆ |
ಕಾಮಿತ ಜನರ ಸುಪ್ರೇಮದಿ ಪೊರೆವರ್ಗೆ |
ಹೇಮದಾರತಿಯ ಬೆಳಗಿರೆ || ಶೋಭಾನೆ || ೧ ||

ಕೆಂಜೆಡೆ ಗಂಗಾ ಸುಂದರಗೆ |
ಮಂಜುಳಾಂಗಿಗೆ ಮಧುಹರೆಗೆ |
ಕುಂಜರ ಖಳ ಮದ ಭಂಜ ಚಿನ್ಮಯಗೆ |
ಕುಂಜರಗಮನೆ ಮುಕಾಂಬಿಕಾಂಬಿಕೆಗೆ |
ನಂಜುಂಡೇಶ್ವರ ಕಂಜಾಕ್ಷಿಯರಿಗೆ |
ಕಂಜದಾರತಿಯ ಬೆಳಗಿರೆ || ಶೋಭಾನೆ || ೨ ||

ಚಂದ್ರಶೇಖರ ಗಿರಿಜೆಯರ |
ನಿಂದು ಪೊಗಳಿ ಹರಿ ಕುವರ |
ಸುಂದರಿ ಮೃಗಮದಗಂಧಿನಿ ನಗುತ |
ಚಂದದಿ ಮುತ್ತಿನ ಸೇಸೆ ತಳಿಯುತ |
ಅಂದುಗೆ ಘಲಿರೆನೆ ನಿಂದು ವಿನೋದದಿ |
ಕುಂದಣದಾರತಿಯ ಬೆಳಗಿರೆ || ಶೋಭಾನೆ || ೩ || 385 ||

**ವಾರ್ಧಕ**
ಮಗುಳೆ ಕೈ ಮುಗಿದು ಶತಧೃತಿಯಿರಲ್ ಪಿಡಿದೆತ್ತಿ |
ಮಗನೆ ಮುನ್ನಂತೆ ಸೃಷ್ಟಿಸು ಜಗವ ನಿಗಮಾರ್ಥ |
ವೊಗೆದ ವೋಲೆಂದು ಮೈದಡವಿ ಬೀಳ್ಕೊಂಡಭವನುಮೆಯೊಡನೆ ಸುಖಮಿರ್ದನು ||
ಮುಗಿದ ಜಗವಿತ್ತ ನಗಧರ ಕ್ರೋಢ ರೂಪದಿಂ |
ನೆಗಪಿ ವಿಧಿಯಂ ಪರಸಿ ಸಿರಿಯ ವೈಕುಂಠವಂ |
ಪೊಗಲಜಂ ಸೃಷ್ಟಿ ಬೇಳಂಬದಿಂ ಸತಿಸಹಿತ ಸೂರ್ಯ ತೇಜದೊಳೆಸೆದನು || ೧ || 386 ||

**ಭಾಮಿನಿ**
ಮತ್ತೆ ತಂದೆಯ ತಂದೆಯಂಘ್ರಿಯ |
ವೃತ್ರರಿಪು ಮುಖ್ಯಾಮರರು ಪೊಗ |
ಳುತ್ತ ಮನು ಮುನಿ ನಿಕರ ಕೂಡಿದು ಶ್ರುತಿ ವಿಧಾನದಲಿ ||
ಉತ್ತಮದೊಳರ್ಚಿಸುತ ನಮಿಸುತ |
ಸತ್ಯ ಚಿತ್ಸಾನಂದ ಬ್ರಹ್ಮವ |
ನಿತ್ಯ ಬಲಬಂದಯಿದ್ದರು ನುತಿಗಳ ವಿಕಾಸದಲಿ || ೧ || 387 ||

**ಕಂದ**
ತಂತಮ್ಮಾಲಯಕಮರರ |
ತಿಂಥಿಣಿಯಂ ಬೀಳ್ಕೊಳಿಸುತಲಾ ಸುರವೀರಂ ||
ನಿಂತಮರಾವತಿಯೊಳ್ ಶಚಿ |
ಕಾಂತೆಯ ಸಹಿತಿರ್ದಂ ಪೊಗಳುತ ಹರಿ ಹರರಂ || ೧ || 388 ||

**ವಾರ್ಧಕ**
ಪರಮ ಸತ್ಕಥೆಯಿಂತು ಸಿದ್ಧರಾಮಂಗೆ ಗುರು |
ವರ ಚನ್ನಬಸವವರುಪಿದುದಂ ಧರಾ ತಳದಿ |
ವರ ವಿಠಲ ಸೀಮೆ ಬಾಯಾರು ಗ್ರಾಮದ ಜತ್ತಿ ಸುಸ್ಥಳ ನಿವಾಸಿಯಾದ ||
ಮೆರೆವ ವಿಶ್ವಾಮಿತ್ರ ಗೋತ್ರಭವ ಕೃಷ್ಣಾಂಕ |
ರುರು ಬುಧೋತ್ತಂಸ ಹೃತ್ಕಮಲ ಭಾಸ್ಕರ ಕೃತಿಯ |
ವಿರಚಿಸಿದನೀಶ್ವರಂ ನಾ ವಿಶ್ವನಾಥಾಜ್ಞೆಯಿಂದಿದಂ ನಳ್ಕರಿಂದ || ೧ || 389 ||

**ಧನ್ಯಾಶ್ರೀ - ಏಕ**
ರಾಜಶೇಖರಾಯ ನಿತ್ಯ ಜಯ ಮಂಗಳಂ |
ರಾಜ ರಾಜ ಪೂಜಿತಾಯ ಶುಭ ಮಂಗಳಂ || ರಾಜಶೇಖರಾಯ || ಪ ||
ಕೆಂಜೆಡೆ ವ್ಯಾಘ್ರಾಂಬರಾಯ |
ಕುಂಜರಾಸುರಾಂತಕಾಯ |
ಕಂಜಮಿತ್ರತೇಜ ವರ ಧನಂಜಯಾರ್ಚಿತ || ರಾಜ ಶೇಖರಾಯ || ೧ ||

ಅಂಗಭವನುತ್ತುಂಗ ಗರ್ವ |
ಭಂಗನಾಯ ಶಂಕರಾಯ |
ಗಂಗಾಧಾರಣಾಯ ವೃಷತುರಂಗನಾಯತೇ || ರಾಜಶೇಖರಾಯ || ೨ ||

ಶೇಷಕುಂಡಲಾಯ ನಿಗಮ |
ವೇಷಾಯ ಈಶಾಯ ಗುರು ವಿ |
ಶ್ವೇಶಾಯ ಕೈಲಾಸಧಾಮವಾಸ ಶ್ರೀಮಂತ || ರಾಜಶೇಖರಾಯ || ೩ || 392 ||

**ವಾರ್ಧಕ**
ಬೆರಳ ಕಲಿಕೆಗಳ ಭುಜ ಶಾಖೆಗಳ ರಂಜಿಸುವ |
ಕೊರಳಗರಳದ ಮಧು ವ್ರತ ದಂತದ ಪ್ರಭೆಯ |
ವರ ಕುಸುಮ ಮಂಜರಿಯ ಜಡಿಯೆಡೆಯ ಬಾಂದೊರೆಯ ಮಕರಂದ ಸಂದೋಹದ ||
ಮುರಿದ ಜಡೆಗಳ ರಜತ ಪಿಂಜರದ ಸಂತತಂ |
ಸುರನರೋರಗ ಶುಕಪಿಕಾಳಿಗಾಶ್ರಯವಾದ |
ಪರಮ ವಿಶ್ವೇಶ ಕಲ್ಪದ್ರುಮಂ ಬೆಂಬಿಡದೆ ಪೊರೆಯಲೆಮ್ಮಂ ಸರ್ವದ || ೧ || 393 ||

*****ಶುಭಂ*****

# ಕೃತಜ್ಞತೆಗಳು


**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ತಿಳಿದಿಲ್ಲ

**ಪ್ರಸಂಗ ಪ್ರತಿ ಆಧಾರ:** ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಗಣಪತಿ ಭಟ್ ನೆಲ್ಯಾಡಿ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಗಣಪತಿ ಭಟ್ ನೆಲ್ಯಾಡಿ

**ಅಂತರಜಾಲ ಪ್ರತಿ ಬರವಣಿಗೆ:** ಗಣಪತಿ ಭಟ್ ನೆಲ್ಯಾಡಿ

**ಅಂತರಜಾಲ ಪ್ರತಿ ವಿನ್ಯಾಸ:** ವಿಂಧ್ಯಾಶ್ರೀ ಸೋಮಯಾಜಿ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ